11 January 2026 Sunday
SINCE 1957
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ
ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ಅಂತರ್ಯ ಎನ್ನುವುದು ರಹಸ್ಯದ ಗೂಡು,
ಹೀಗಾಗಿ ಮೇಲ್ನೋಟದಿಂದ ಒಬ್ಬ ವ್ಯಕ್ತಿಯ
ಸ್ವಭಾವ ತಿಳಿದು ಅಳೆಯುವುದು ಅಷ್ಟು
ಸುಲಭದ ಮಾತಲ್ಲ!
-ಸ್ನೇಹಾ ಆನಂದ್

**ಒಂದೊಳ್ಳೆ ಮಾತು**

"ಸ್ವಚ್ಛ ಮನಸ್ಸಿನಿಂದ
ಯೋಚಿಸಿದರೆ
ಕೆಟ್ಟವರಲ್ಲಿಯೂ
ಒಳ್ಳೆಯತನವನ್ನು
ಕಾಣಬಹುದು ಆದರೆ ಕೆಟ್ಟ
ಮನಸ್ಸಿನಿಂದ ಯೋಚಿಸಿದರೆ
ಒಳ್ಳೆಯವರಲ್ಲಿಯೂ
ಮೈಲಾರ ಸಾವಿತ್ರಿಬಾಯಿ

info.varthaman@gmail.com
9742504916 | ಮೈಸೂರು | ಮಂಡ್ಯ | ಬೆಂಗಳೂರು | ಹಾಸನ | ಚಾಮರಾಜನಗರ | ರಾಮನಗರ | ಬೆಂಗಳೂರು ಗ್ರಾಮಾಂತರ | ಕೊಡಗು | ಕಾರ್ಯನಿರ್ವಾಹಕ ಸಂಪಾದಕ - ಕೆ.ಆರ್.ಮಿಹಿರ್ ಆಕಾಶ್
VARTHAMAN Volume: 69 Issue: 74 Pages: 06 KA/SK/MYS/1098/2023-2025 R.N.I. No.3577/1957 www.varthaman.in Price-3

# ದೆಹಲಿ ಯಾತ್ರೆಗೆ ಸಿಎಂ ಸಿದ್ಧತೆ

## ಸಂಪುಟ ಪುನಾರಚನೆ ಬಗ್ಗೆ ಹೈಕಮಾಂಡ್ ಜೊತೆ ಚರ್ಚೆಗೆ ಮುಂದು

**ಬೆಂಗಳೂರು:** ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹೈಕಮಾಂಡ್ ಭೇಟಿಗೆ ಶೀಘ್ರವೇ ನವದೆಹಲಿಗೆ ತೆರಳಲಿದ್ದಾರೆ. ಸಚಿವ ಸಂಪುಟ ಸಭೆಯ ನಂತರ ಜನವರಿ 22ರಂದು ದೆಹಲಿಗೆ ಪ್ರಯಾಣಿಸುವ ಸಾಧ್ಯತೆ ಇದೆ. ಸಂಪುಟ ಪುನಾರಚನೆ ಕುರಿತು ಚರ್ಚೆ ನಡೆಸುವ ಸಾಧ್ಯತೆಗಳಿವೆ ಎಂದು ತಿಳಿದುಬಂದಿದೆ.

ಮುಂದಿನ ಎರಡು ವರ್ಷಗಳ ಅವಧಿಯನ್ನು ಗಮನದಲ್ಲಿಟ್ಟುಕೊಂಡು ಸಚಿವರ ಕಾರ್ಯಕ್ಷಮತೆಯ ಆಧಾರದ ಮೇಲೆ ಕಾಂಗ್ರೆಸ್ ಹೈಕಮಾಂಡ್ ಸಂಪುಟದಲ್ಲಿ ಬದಲಾವಣೆಗಳನ್ನು ತರಬಹುದು. 8ರಿಂದ 10 ಸಚಿವರ ಕಾರ್ಯಕ್ಷಮತೆಯನ್ನು ಪರಿಶೀಲನೆ ನಡೆಸುತ್ತಿದೆ ಎಂದು ತಿಳಿದುಬಂದಿದೆ. ಸರ್ಕಾರಕ್ಕೆ ಚೈತನ್ಯ ನೀಡುವ ಉದ್ದೇಶ ಇದಾಗಿದೆ ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

ಸಚಿವ ಸಂಪುಟ ಪುನಾರಚನೆಗೆ ಅವಕಾಶ ನೀಡದಿದ್ದರೆ ಬಜೆಟ್ ಅಧಿವೇಶನಕ್ಕೂ ಮುನ್ನ ಖಾಲಿಯಿರುವ ಎರಡು ಸಚಿವ ಸ್ಥಾನವನ್ನು ಭರ್ತಿ ಮಾಡಲು ಹೈಕಮಾಂಡ್ ಜೊತೆ ಚರ್ಚಿಸಲಿದ್ದಾರೆ. ಈ ಮೂಲಕ ಅಧಿಕಾರ ಹಸ್ತಾಂತರ ಚರ್ಚೆ ಸಂಪೂರ್ಣ ಬ್ರೇಕ್ ಹಾಕಲು ಮುಂದಾಗಿದ್ದಾರೆ ಎನ್ನಲಾಗಿದೆ.

ಈ ಪುನಾರಚನೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ನಡುವಿನ ರಾಜಕೀಯ ಜಟಾಪಟಿ ಭಾಗವಾಗಿಯೂ ನೋಡಲಾಗುತ್ತಿದೆ. ಸರ್ಕಾರ ಮತ್ತು ಪಕ್ಷದೊಳಗಿನ



ಪ್ರಭಾವಕ್ಕಾಗಿ ಇಬ್ಬರು ನಾಯಕರ ಆಪ್ತ ಬಣಗಳ ನಡುವಿನ ಪೈಪೋಟಿ ಮುಂದುವರಿದಿದೆ.

ಪ್ರಸ್ತುತ ಬಿ.ನಾಗೇಂದ್ರ ಮತ್ತು ಕೆ.ಎನ್.ರಾಜಣ್ಣ ನಿರ್ಗಮನದಿಂದ ಉಂಟಾದ ಖಾಲಿ ಸ್ಥಾನಗಳನ್ನು ಭರ್ತಿ ಮಾಡುವ ಕುರಿತು ಚರ್ಚೆಗಳು ನಡೆಯುತ್ತಿವೆ. ಆದರೆ, ಪಕ್ಷದೊಳಗಿನ ಕೆಲವು ನಾಯಕರು, ಬಜೆಟ್ ಅಧಿವೇಶನ ಹಾಗೂ ವಿಧಾನ ಪರಿಷತ್ ಮತ್ತು ರಾಜ್ಯಸಭಾ ಚುನಾವಣೆಗಳ ಹಿನ್ನೆಲೆಯಲ್ಲಿ ಇದೀಗ ದೊಡ್ಡ ಮಟ್ಟದ ಬದಲಾವಣೆ ಸೂಕ್ತವಲ್ಲ ಎಂದು ಅಭಿಪ್ರಾಯಪಟ್ಟಿದ್ದಾರೆ ಎಂದು ತಿಳಿದುಬಂದಿದೆ.

# ನರೇಗಾ ಚರ್ಚೆ: ವಿಶೇಷ ಅಧಿವೇಶನ

## ರಾಜ್ಯದ ಎಲ್ಲಾ ಕ್ಷೇತ್ರಗಳಲ್ಲಿ ಜ.26ರಿಂದ ಪಾದಯಾತ್ರೆ: ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್

**ಮಂಗಳೂರು:** ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯ್ದೆಗೆ ಸಂಬಂಧಿಸಿದ ವಿಷಯಗಳನ್ನು ಚರ್ಚಿಸಲು ರಾಜ್ಯ ಸರ್ಕಾರ ವಿಧಾನಸಭೆ ವಿಶೇಷ ಅಧಿವೇಶನ ನಡೆಸಲಿದೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಘೋಷಿಸಿದರು.

ಮಂಗಳೂರಿನಲ್ಲಿ ಶನಿವಾರ ಮಾಧ್ಯಮಗಳೊಂದಿಗೆ ಮಾತನಾಡಿದ ಡಿ.ಕೆ.ಶಿವಕುಮಾರ್, ಗ್ರಾಮೀಣ ಉದ್ಯೋಗ ಯೋಜನೆಯನ್ನು ರಕ್ಷಿಸಲು ಸರ್ಕಾರ ಜನವರಿ 26 ರಿಂದ ಫೆಬ್ರವರಿ 2ರವರೆಗೆ ರಾಜ್ಯಾದ್ಯಂತ ಎಲ್ಲಾ ವಿಧಾನಸಭಾ ಕ್ಷೇತ್ರಗಳಲ್ಲಿ ಪಾದಯಾತ್ರೆ ನಡೆಸಲಿದೆ ಎಂದು ತಿಳಿಸಿದರು.

ನರೇಗಾ ಉಳಿಸಲು ಎಐಸಿಸಿ ಸಹ ಕಾರ್ಯಕ್ರಮ ಯೋಜಿಸಿದೆ. ಕರ್ನಾಟಕಕ್ಕೆ ಸಂಬಂಧಿಸಿದಂತೆ, ನಾವು ವಿಭಿನ್ನ ಕಾರ್ಯಕ್ರಮವನ್ನು ಯೋಜಿಸಿದ್ದೇವೆ. ನರೇಗಾ ಕುರಿತು ನಾವು ವಿಧಾನಸಭೆ ವಿಶೇಷ ಅಧಿವೇಶನ ಕರೆಯುತ್ತಿದ್ದೇವೆ. ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ ನರೇಗಾ ಉಳಿಸಿ ಪಾದಯಾತ್ರೆ ಆಯೋಜಿಸುತ್ತಿದ್ದೇವೆ ಎಂದು ಡಿಸಿಎಂ ತಿಳಿಸಿದರು.

ನರೇಗಾ ಯೋಜನೆ ಬದಲಿಗೆ ವಿಬಿ ಜಿ ರಾಮ್ ಜಿ ಮಸೂದೆ ಜನರ ಮೇಲೆ ಹೇಗೆ ಪರಿಣಾಮ ಬೀರುತ್ತದೆ ಎಂಬುದನ್ನು ಕಾಂಗ್ರೆಸ್ ವಿವರಿಸುತ್ತದೆ. ರಾಜ್ಯದ ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ ಜನವರಿ 26 ರಿಂದ ಫೆಬ್ರವರಿ 2 ರವರೆಗೆ ಪಾದಯಾತ್ರೆಗಳನ್ನು ನಡೆಸಲಾಗುವುದು.



ಪ್ರತಿ ಪಾದಯಾತ್ರೆಯು ಐದರಿಂದ 10 ಕಿಲೋಮೀಟರ್ ದೂರವನ್ನು ಕ್ರಮಿಸುತ್ತದೆ ಎಂದು ತಿಳಿಸಿದರು.

ಬಿಜೆಪಿಯವರು ಈ ಯೋಜನೆಯನ್ನು ಸಂಪೂರ್ಣ ಕೊಲ್ಲಲು ಬಯಸಿದ್ದಾರೆ. ಆದ್ದರಿಂದ ನಾವು ಎಲ್ಲಾ ಪಾಲುದಾರರನ್ನು ಪ್ರೋತ್ಸಾಹಿಸಲು ಬಯಸುತ್ತೇವೆ. ನಾವು ಅವರನ್ನು ಕರೆಯುತ್ತೇವೆ. ಅವರಿಗೆ ಮಾಹಿತಿ ನೀಡುತ್ತೇವೆ. ಕಾಯ್ದೆಯನ್ನು ಹಿಂದಕ್ಕೆ ಪಡೆಯುವಂತೆ ನಾವು ಒತ್ತಾಯಿಸುತ್ತೇವೆ ಎಂದು ತಿಳಿಸಿದರು.

## ನರೇಗಾ ಚರ್ಚೆಗೆ ನಾನು ಸಿದ್ಧ: ಎಚ್‌ಡಿಕೆಗೆ ಸಿದ್ದು ತಿರುಗೇಟು

**ಬೆಂಗಳೂರು:** ನರೇಗಾ ರದ್ದು ವಿಚಾರದಲ್ಲಿ ಚರ್ಚೆ ಮಾಡೋಕೆ ನಾನು ಸಿದ್ಧ ಎಂದು ಕೇಂದ್ರ ಸಚಿವ ಕುಮಾರಸ್ವಾಮಿಗೆ ಸಿಎಂ ಸಿದ್ದರಾಮಯ್ಯ ತಿರುಗೇಟು ನೀಡಿದರು.

ನರೇಗಾ ವಿಚಾರದಲ್ಲಿ ಚರ್ಚೆಗೆ ಸಿದ್ಧ ಎಂಬ ಕುಮಾರಸ್ವಾಮಿ ಸವಾಲ್‌ಗೆ ತಿರುಗೇಟು ಕೊಟ್ಟ ಸಿಎಂ, ನರೇಗಾ ವಿಚಾರವಾಗಿ ನಾವು ಯಾವಾಗಲೂ ಚರ್ಚೆಗೆ ರೆಡಿ. ನರೇಗಾ ಮರು ಸ್ಥಾಪನೆಗಾಗಿ ನಾವು ದೊಡ್ಡ ಆಂದೋಲನವನ್ನೇ ಮಾಡುತ್ತೇವೆ ಎಂದು ತಿಳಿಸಿದರು.

ನರೇಗಾ ವಿಚಾರ ಬಿಜೆಪಿ– ಜೆಡಿಎಸ್ ಪ್ರತಿಭಟನೆ ಮಾಡುವ ವಿಚಾರಕ್ಕೆ ಬಿಜೆಪಿ ಅವರು ರಾಜ್ಯಕ್ಕೆ ಎಷ್ಟೇ ಅನ್ಯಾಯ ಆದರೂ ಮಾತಾಡಲ್ಲ. ಕೇಂದ್ರ ಸರ್ಕಾರ



ಎಷ್ಟೇ ಅನ್ಯಾಯ ಮಾಡಿದರೂ ಸಮರ್ಥನೆ ಮಾಡಿಕೊಳ್ತಾರೆ. ಬಿಜೆಪಿ ಅವರು ಕೇಂದ್ರ ಸರ್ಕಾರ ಏನೇ ನಿರ್ಧಾರ ಮಾಡಿದರೂ ಸರಿ ಅಂತ ಪುಟ 2ಕ್ಕೆ


**ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಮನವಿಗೆ ಸ್ಪಂದಿಸಿದ ಕೇಂದ್ರ ಕ್ರೀಡಾ ಸಚಿವ ಮನ್ಸುಖ್ ಮಾಂಡವೀಯ**

**ಮಂಡ್ಯದಲ್ಲಿ ಖೇಲೋ ಇಂಡಿಯಾ ಮೂಲಕ ಕ್ರೀಡೆಗೆ ಉತ್ತೇಜನ; ಜಾಗತಿಕ ಗುಣಮಟ್ಟದ ಕ್ರೀಡಾ ಸೌಲಭ್ಯ ನಿರ್ಮಾಣ**

**ಮಂಡ್ಯ ಕೃಷಿ ವಿಜ್ಞಾನ ವಿಶ್ವವಿದ್ಯಾಲಯದಲ್ಲಿ ಒಳಾಂಗಣ ಕ್ರೀಡಾ ಸಭಾಂಗಣ ನಿರ್ಮಾಣ**

# ಮಂಡ್ಯದಲ್ಲಿ ಜಾಗತಿಕ ಕ್ರೀಡಾ ಸೌಲಭ್ಯ; ಕೇಂದ್ರದಿಂದ 14 ಕೋಟಿ ರೂ. ಮಂಜೂರು

**ನವದೆಹಲಿ/ಮಂಡ್ಯ:** ಮಂಡ್ಯ ಲೋಕಸಭೆ ಕ್ಷೇತ್ರದಲ್ಲಿ ಜಾಗತಿಕ ಗುಣಮಟ್ಟದ ಕ್ರೀಡಾ ಮೂಲಸೌಕರ್ಯ ಕಲ್ಪಿಸುವ ಉದ್ದೇಶಕ್ಕಾಗಿ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರ ಮನವಿಯ ಮೇರೆಗೆ ಕೇಂದ್ರ ಸರ್ಕಾರವು 14 ಕೋಟಿ ಮಂಜೂರು ಮಾಡಿದೆ.



ಜಿಲ್ಲೆಯಲ್ಲಿ ಕ್ರೀಡಾ ಸೌಕರ್ಯವನ್ನು ಉತ್ತಮಪಡಿಸುವ ನಿಟ್ಟಿನಲ್ಲಿ ಸಚಿವ ಕುಮಾರಸ್ವಾಮಿ ಅವರು ಕೇಂದ್ರದ ಕ್ರೀಡಾ ಮತ್ತು ಯುವಜನ ಸಬಲೀಕರಣ ಖಾತೆ ಸಚಿವ ಮನ್ಸುಖ್ ಮಾಂಡವೀಯ ಅವರಿಗೆ ಪತ್ರ ಬರೆದು ವಿನಂತಿಸಿದ್ದರು.

**ಮನವಿಗೆ ತಕ್ಷಣ ಸ್ಪಂದಿಸಿರುವ ಕ್ರೀಡಾ ಸಚಿವರು;** ಖೇಲೋ ಇಂಡಿಯಾ ಯೋಜನೆಯಡಿ ಮಂಡ್ಯ ಜಿಲ್ಲೆಯಲ್ಲಿ ಬಹುಪಯೋಗಿ ಕ್ರೀಡಾ ಸೌಲಭ್ಯ ನಿರ್ಮಾಣಕ್ಕೆ 14 ಕೋಟಿ ಮಂಜೂರು ಮಾಡಿದ್ದಾರೆ.

14 ಕೋಟಿ ಅನುಮೋದಿತ ವೆಚ್ಚದಲ್ಲಿ ಮಂಡ್ಯದ ಕೃಷಿ ವಿಜ್ಞಾನ ವಿಶ್ವವಿದ್ಯಾಲಯದಲ್ಲಿ ಬಹುಪಯೋಗಿ ಒಳಾಂಗಣ ಕ್ರೀಡಾಂಗಣ ನಿರ್ಮಾಣಕ್ಕೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ ಎಂದು ಸಚಿವ ಕುಮಾರಸ್ವಾಮಿ ಅವರು ತಿಳಿಸಿದ್ದಾರೆ.

ಮಂಡ್ಯ ಜಿಲ್ಲೆಯ ಅನೇಕ ಕ್ರೀಡಾಪಟುಗಳು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ರಾಜ್ಯ ಮತ್ತು ರಾಷ್ಟ್ರವನ್ನು ಪ್ರತಿನಿಧಿಸಿದ್ದಾರೆ. ಅನೇಕ ಯುವ ಪ್ರತಿಭೆಗಳು ಜಿಲ್ಲೆಯಲ್ಲಿ ಅವಕಾಶ ಸಿಗದೆ ಹೊರ ಭಾಗಗಳಲ್ಲಿ ತರಬೇತಿಗೆ ಹೋಗುತ್ತಿದ್ದಾರೆ. ಅನೇಕ ಕ್ರೀಡಾಪಟುಗಳು ರಾಷ್ಟ್ರೀಯ ಶಿಬಿರಗಳಲ್ಲಿ ತರಬೇತಿ ಪಡೆಯುತ್ತಿದ್ದಾರೆ. ಇಂತಹ ಸೌಕರ್ಯವನ್ನು ಮಂಡ್ಯದಲ್ಲಿಯೇ ಒದಗಿಸುವ ಉದ್ದೇಶದಿಂದ ಈ ಯೋಜನೆಯನ್ನು ಅನುಷ್ಠಾನಕ್ಕೆ ತರಲಾಗುತ್ತಿದೆ. ಇದು ಉತ್ತಮ.ಯೋಜನೆಯಾಗಿದೆ. ನನ್ನ ಮನವಿಗೆ ಸ್ಪಂದಿಸಿದ

> ಖೇಲೋ ಇಂಡಿಯಾ ಯೋಜನೆಯಡಿಯಲ್ಲಿ ಮಂಡ್ಯಕ್ಕೆ ಈ ಮಹತ್ವದ ಯೋಜನೆಯನ್ನು ಮಂಜೂರು ಮಾಡಿದ್ದಕ್ಕಾಗಿ ಮತ್ತು ತ್ವರಿತವಾಗಿ ನಿರ್ಧಾರ ಕೈಗೊಂಡಿದ್ದಕ್ಕಾಗಿ ಕೇಂದ್ರದ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರಾದ ಡಾ. ಮನ್ಸುಖ್ ಮಾಂಡವಿಯ ಅವರಿಗೆ ನಾನು ಪ್ರಾಮಾಣಿಕವಾಗಿ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಆರೋಗ್ಯ, ಸಶಕ್ತ ಮಂಡ್ಯ ನಿರ್ಮಾಣಕ್ಕಾಗಿ ಇದು ಬಹುದೊಡ್ಡ ಯೋಗದಾನ ಆಗುತ್ತದೆ.
> **ಎಚ್.ಡಿ.ಕುಮಾರಸ್ವಾಮಿ** ಕೇಂದ್ರ ಸಚಿವ

ಕೇಂದ್ರ ಕ್ರೀಡಾ ಸಚಿವ ಮನ್ಸುಖ್ ಮಾಂಡವೀಯ ಅವರಿಗೆ ಧನ್ಯವಾದ ತಿಳಿಸುತ್ತೇನೆ ಎಂದು ಸಚಿವರು ಹೇಳಿದ್ದಾರೆ.

**ಜಿಲ್ಲೆಯ ಕ್ರೀಡೆಗೆ ಬಹುದೊಡ್ಡ ಉತ್ತೇಜನ:** ಕೇಂದ್ರದ ನರೇಂದ್ರ ಮೋದಿ ಅವರ ನೇತೃತ್ವದ ಸರ್ಕಾರವು ದೇಶದ ಉದ್ದಗಲಕ್ಕೂ ಜಾಗತಿಕ ಗುಣಮಟ್ಟದ ಕ್ರೀಡಾ ಸೌಕರ್ಯ ಅಭಿವೃದ್ಧಿಪಡಿಸಿ ಗ್ರಾಮೀಣ ಮಟ್ಟದ ಕ್ರೀಡಾಪಟುಗಳಿಗೆ ಪ್ರೋತ್ಸಾಹ ನೀಡುತ್ತಿದೆ. ಈ ಯೋಜನೆಯ ಭಾಗವಾಗಿ ಮಂಡ್ಯ ಪುಟ 2ಕ್ಕೆ

# ನಿಮ್ಮ ಹುಡುಗ ನಟಿಸಿ, ನಿರ್ದೇಶಿಸಿದ 'ಹಾಸನ್ ಫಿಲಂ' ವರ್ಲ್ಡ್ ಫೇಮಸ್!

**ಬೆಂಗಳೂರು:** ಡಿಸಿಎಂ ಡಿ.ಕೆ.ಶಿವಕುಮಾರ್ ಮತ್ತು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ನಡುವಿನ ವಾರ್ ವೈಯುಕ್ತಿಕ ನಿಂದನೆ ಮಟ್ಟಕ್ಕೆ ತಲುಪಿದೆ. ಈಗ ಜೆಡಿಎಸ್ ಟ್ವೀಟ್ ಗೆ ಕಾಂಗ್ರೆಸ್ ಎದುರೇಟು ನೀಡಿದೆ. ನಿಮ್ಮ ಬ್ಲೂ ಫಿಲಂ ಮರೆತಿದ್ದೀರಾ ಎಂದು ಪ್ರಶ್ನಿಸಿ ಜೆಡಿಎಸ್ ವಿರುದ್ಧ ಕಾಂಗ್ರೆಸ್ ಕಿಡಿಕಾರಿದೆ.

ಅಟಕಟಾ.. ನಿಮ್ಮದು ಸೆಕ್ಯೂರ್ಡ್ ಬ್ಲೂ ಬಾಯ್ಸ್ ಪಾರ್ಟಿ ಅನ್ನೋದು ಮರೆತು ಹೋಯ್ತೆ? ಅದೂ ಇಷ್ಟು ಬೇಗ? ಶಾಂತಂ ಪಾಪಂ ಎಂದು ಕಾಂಗ್ರೆಸ್ ಟ್ವೀಟ್ ಮಾಡಿ ಲೇವಡಿ ಮಾಡಿದೆ.

ನಿಮ್ಮಲ್ಲಿ ಬ್ಲೂ ಫಿಲಂ ನಿರ್ಮಾಪಕರು, ನಿರ್ದೇಶಕರು, ಎಲ್ಲಕ್ಕಿಂತ ಮಿಗಿಲಾಗಿ ಪಾತ್ರಧಾರಿಗಳು ತುಂಬಿ ತುಳುಕುತಿದ್ದಾರೆ. ನಿಮ್ಮ ಹುಡುಗ ನಿರ್ಮಿಸಿ, ನಟಿಸಿದ ಹಾಸನ್ ಬ್ಲೂ ಫಿಲಂ ವರ್ಲ್ಡ್ ಫೇಮಸ್! ಕರ್ನಾಟಕದ ಕೀರ್ತಿ ಪತಾಕೆಯನ್ನ ಹಾಲಿವುಡ್ ವರೆಗೂ ಹಾರಾಸಿದೆ. ಅವರು ಈಗಲೂ ಜೈಲಲ್ಲಿ ನೀಲ ಮೇಘ ಶ್ಯಾಮ.. ಹಾಡುತ್ತಿದ್ದಾರೆ. ನಿಮ್ಮ ಇನ್ನೊಬ್ಬ ಲಿಂಬಿಯ ಬನದ ನಾಯಕರು ಲಿಂಬೆ ಹಣ್ಣಿನಂತ ಹಾಡು ಹೇಳಲು ಹೋಗಿ ಜೈಲಲ್ಲಿ ಮುದ್ದೆ ಮುರಿದು ಬಂದಿದ್ದಾರೆ. ಇನ್ನೊಬ್ಬ ರಾಧಾ ಮಾಧವ ಮನೋ ವಿಲಾಸ.. ನಾಯಕರು ಜಸ್ಟ್ ಎಸ್ಕೇಪ್ ಆಗಿದ್ದಾರೆ. ನಿಮ್ಮ ನಾಯಕರೇ ನಿರ್ಮಿಸಿ, ನಿರ್ದೇಶಿಸಿ, ನಟಿಸಿ ಸಿನಿಮಾ ತೆಗೆದು ಜಗತ್ತಿಗೆ ತೋರಿಸಿರುವಾಗ ಬೇರೆಯವರಿಗೆ ಟೆಂಟಲ್ಲಿ ತೋರಿಸುವ ಅವಕಾಶ ಎಲ್ಲಿದೆ? ನಿಜಕ್ಕೂ ನಿಮ್ಮ ಸಿನಿಮಾ ಚೆನ್ನಾಗಿದೆ. ಅದರ ಮೇಲೆ ಮತ್ತೊಂದು ಕತೆ ಕಟ್ಟಲು ಹೋಗಬೇಡಿ. ಸುಮ್ಮನೇ ಆಕಾಶಕ್ಕೆ ಉಗುಳಿ ಮುಖಕ್ಕೆ ಸಿಂಪಡಿಸಿಕೊಳ್ಳಬೇಡಿ ಎಂದು ಎಚ್.ಡಿ.ಕುಮಾರಸ್ವಾಮಿ ಅವರನ್ನು ಲೇವಡಿ ಮಾಡಿದೆ.





## ತಾಯಿ ಹುಲಿ ಸೆರೆ: 4 ಮರಿ ನಾಪತ್ತೆ

**ಚಾಮರಾಜನಗರ:** ತಾಲ್ಲೂಕಿನ ನಂಜದೇವನಪುರ ಸುತ್ತಮುತ್ತ ತನ್ನ ನಾಲ್ಕು ಮರಿಗಳೊಂದಿಗೆ ಪ್ರತ್ಯಕ್ಷವಾಗಿ ಗ್ರಾಮಸ್ಥರಲ್ಲಿ ಭಾರೀ ಆತಂಕ ಸೃಷ್ಟಿಸಿದ್ದ ತಾಯಿ ಹುಲಿಯನ್ನು ಕೊನೆಗೂ ಸೆರೆ ಹಿಡಿಯಲಾಗಿದೆ. ಅದರೆ ಅದರ ನಾಲ್ಕು ಮರಿ ಹುಲಿಗಳು ನಾಪತ್ತೆಯಾಗಿವೆ.

ನಂಜೇದೇವನಪುರದಲ್ಲಿ ಆಪರೇಷನ್ 5 ಟೈಗರ್ಸ್ ಮೊದಲ ಹಂತ ಯಶ ಕಂಡಿದೆ. ತುಮಕೂರು ಮಾದರಿ ಬೋನ್ ಅಳವಡಿಸಿ ಹಸುವನ್ನು ಕಟ್ಟಲಾಗಿತ್ತು. ಹಸು ಬೇಟೆಗೆ ಬಂದ ತಾಯಿ ಹುಲಿ ಬೋನಿನಲ್ಲಿ ಸೆರೆಯಾಗಿದೆ. ಸೆರೆಯಾದ ತಾಯಿ ಹುಲಿಗೆ ಅಂದಾಜು 8 ವರ್ಷ. ಆದರೆ ಮರಿಗಳು ನಾಪತ್ತೆ ಆಗಿರುವುದು ತಲೆ ನೋವಾಗಿದೆ.

ರೈತ ಕುಮಾರಸ್ವಾಮಿ ಎಂಬವರ ಜಮೀನಿನಲ್ಲಿ ಅಳವಡಿಸಿದ್ದ ಕ್ಯಾಮರಾದಲ್ಲಿ ಹುಲಿ ಸಂಚಾರ ದೃಶ್ಯ ಸೆರೆಯಾಗಿತ್ತು. 5 ಹುಲಿಗಳ ಪೈಕಿ ತಾಯಿ ಹುಲಿ ಸೆರೆಯಾಗಿದೆ. 4 ಮರಿ ಹುಲಿಗಳ ಸೆರೆಗೆ ಕಾರ್ಯಾಚರಣೆ ಆರಂಭವಾಗಿದೆ. ಪುಟ 2ಕ್ಕೆ

## ರಾಯರೆಡ್ಡಿ, ರಾಜಣ್ಣ ಹೈಕಮಾಂಡೇ? ಶಾಸಕ ಶಿವಗಂಗಾ ಬಸವರಾಜ ಕಿಡಿ

**ಬೆಂಗಳೂರು:** ಸಿದ್ದರಾಮಯ್ಯ 2028ರ ವರೆಗೂ ಸಿಎಂ ಎಂದು ಹೇಳಲು ಬಸವರಾಜ ರಾಯರೆಡ್ಡಿ, ರಾಜಣ್ಣ ಯಾರು? ಅವರೇನು ಕಾಂಗ್ರೆಸ್ ಹೈಕಮಾಂಡಾ? ಎಂದು ಶಾಸಕ ಶಿವಗಂಗಾ ಬಸವರಾಜ ಪ್ರಶ್ನಿಸಿದರು.



ನಗರದಲ್ಲಿ ಶನಿವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು ಹೈಕಮಾಂಡ್ ಏನಾದರೂ ಈ ಬಗ್ಗೆ ಹೇಳಿದೆಯೇ? ಹಿರಿಯರೇ ಹೀಗೆ ಮಾತಾಡಿದರೆ ಹೇಗೆ? ನಾನಾದರೆ ಮೊದಲ ಸಲ ಗೆದ್ದವನು, ಮಾತಾಡಿದರೆ ನಡೆಯುತ್ತದೆ. ಹೈಕಮಾಂಡ್ ಹೇಳಿದ್ಮೇಲೆ ನಾವು ಸೈಲೆಂಟ್ ಆಗಿದ್ದೇವೆ. ಅವರು ಹೀಗೆ ಮಾತಾಡಿದರೆ, ನಾನು ಸಂಕ್ರಾಂತಿ ನಂತರ ಮಾತನಾಡುತ್ತೇನೆ ಎಂದು ಕಿಡಿಕಾರಿದರು.

ಬಜೆಟ್ ಇರೋದು ಮಾರ್ಚ್ಗೆ, ಈಗಲೇ ಸಿದ್ಧತೆ ಮಾಡಿಕೊಳ್ಳಬೇಕಿಲ್ಲ. ಸಿದ್ದರ ಪುಟ 2ಕ್ಕೆ

# ಡ್ಯಾಡಿ ಈಸ್ ಹೋಮ್ ಅಂದ್ರೆ ಏನು?


## ಡ್ಯಾಡಿ ಅಂದ್ರೆ ಯಾರು? | ಜೆಡಿಎಸ್‌ಗೆ ಮಾಜಿ ಸಂಸದ ಡಿ.ಕೆ.ಸುರೇಶ್ ಟಾಂಗ್

**ಬೆಂಗಳೂರು:** ಯಾರು ಈ ಡ್ಯಾಡಿ? ಡ್ಯಾಡಿ ಈಸ್ ಹೋಮ್ ಅಂದರೆ ಏನು? ಎಂದು ಮಾಜಿ ಸಂಸದ ಡಿ.ಕೆ.ಸುರೇಶ್ ಲೇವಡಿ ಮಾಡಿದ್ದಾರೆ.

ಬೆಂಗಳೂರಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಅವರು, ಎಚ್.ಡಿ.ಕುಮಾರಸ್ವಾಮಿ ರಾಜ್ಯ ರಾಜಕಾರಣಕ್ಕೆ ರೀ ಎಂಟ್ರಿ ವಿಚಾರಕ್ಕೆ ಪ್ರತಿಕ್ರಿಯಿಸಿದರು. ಯಾರು ಡ್ಯಾಡಿ? ಡ್ಯಾಡಿ ಈಸ್ ಹೋಮ್ ಅಂದರೆ ಏನು? ಎಂದು ವ್ಯಂಗ್ಯವಾಡಿದರು.

ಕೇಂದ್ರ ಸಚಿವ ಸ್ಥಾನಕ್ಕೆ ಅವರು ಮೊದಲು ರಾಜೀನಾಮೆ ಕೊಡಲಿ. ರಾಜೀನಾಮೆ ಕೊಟ್ಟ ಮೇಲೆ ಮಾತು ಕೊಟ್ಟು ರಾಜ್ಯಕ್ಕೆ ಬರಲಿ. ಈಗ ಕೇಂದ್ರದಲ್ಲಿ ಸಚಿವರಾಗಿದ್ದಾರೆ. ಅವರನ್ನ ಏಕೆ ರಾಜ್ಯಕ್ಕೆ ಕರೆದುಕೊಂಡು ಬರ್ತಾ ಇದೀರಾ? ಎಂದು ಪ್ರಶ್ನಿಸಿದರು.

ಜೆಡಿಎಸ್‌ನವರಿಗೆ ಕೆಲಸ ಇಲ್ಲ, ಸಿಡಿ ಫ್ಯಾಕ್ಟರಿ ಇದ್ದಿದ್ದು ಹೊಳೆನರಸೀಪುರದಲ್ಲಿ. ಪದ್ಮನಾಭ ನಗರದಲ್ಲಿ. ಆ ಫ್ಯಾಕ್ಟರಿಯಲ್ಲಿ ಯಾರು ಮ್ಯಾನಿಫ್ಯಾಕ್ಚರ್ ಮಾಡಿದ್ದರು? ಕುಮಾರಸ್ವಾಮಿ ಇದನ್ನೆಲ್ಲಾ ಬಿಡಿ.



ದಯವಿಟ್ಟು ಎಚ್‌ಎಂಟಿ ನೌಕರರಿಗೆ ನ್ಯಾಯ ಕೊಡಿಸಿ. ಸುಮ್ಮನೆ ಇಲ್ಲದೇ ಇರೋದನ್ನ ಯಾಕ್ ಹೇಳ್ತೀರಿ. ಮಂಡ್ಯದಲ್ಲಿ ಕಾರ್ಖಾನೆ ಸ್ಥಾಪನೆಗೆ ನಿಮಗಾಗಿ ಶಾಸಕ ಗಣಿಗ ರವಿ ಸರ್ಕಾರದ ಜಾಗ ಗುರುತಿಸಿದ್ದಾರೆ. ನಿಮ್ಮ ಇಲಾಖೆಯಿಂದ ಏನ್ ಮಾಡಿದ್ದೀರಿ ಹೇಳಿ. ಉದ್ಯೋಗ ಕೊಡಿಸೋದನ್ನ ನೋಡಿ ಅಂತಾ ಟಾಂಗ್ ನೀಡಿದ್ದಾರೆ.

## ಎಚ್‌ಡಿಕೆ ಎಐ ಟೀಸರ್!



**ಬೆಂಗಳೂರು:** ಟಾಕ್ಸಿಕ್ ಸಿನಿಮಾ ಟೀಸರ್ ಮಾದರಿಯಲ್ಲೇ ಎಚ್‌ಡಿಕೆ ಕುರಿತು ಅವರ ಅಭಿಮಾನಿಗಳು ಡ್ಯಾಡಿ ಈಸ್ ಹೋಮ್ ಎಂಬ ಎಐ ಟೀಸರ್ ರಿಲೀಸ್ ಮಾಡಿದ್ದಾರೆ.

ಈ ಮೂಲಕ ಮತ್ತೆ ರಾಜ್ಯ ರಾಜಕಾರಣಕ್ಕೆ ಎಚ್.ಡಿ.ಕುಮಾರಸ್ವಾಮಿ ಬರುವ ಸುಳಿವು ಕೊಟ್ಟಿದ್ದು, ಹೊಸ ದಾಳ ಉರುಳಿಸಿದ್ದಾರೆ. ಹಾಗಿದರೆ ಕುಮಾರಸ್ವಾಮಿ 2027ರ ವರ್ಷಾರಂಭದಲ್ಲಿ ರಾಜ್ಯಕ್ಕೆ ಬರ್ತಾರಾ? ಅಥವಾ 2026ರಲ್ಲೇ ರಾಜ್ಯ ರಾಜಕೀಯ ಪ್ರವೇಶ ಮಾಡ್ತಾರಾ ಎಂಬುದನ್ನ ಪುಟ 2ಕ್ಕೆ

## ಉತ್ತರದಲ್ಲಿ ಶೀತಗಾಳಿ: ದಕ್ಷಣದಲ್ಲಿ ತುಂತುರು ಮಳೆ

**ಬೆಂಗಳೂರು:** ಉತ್ತರ ಒಳನಾಡು ಭಾಗದಲ್ಲಿ ಶೀತಗಾಳಿ ಬೀಸಲಿದೆ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಶನಿವಾರ ಮುನ್ಸೂಚನೆ ನೀಡಿದೆ.

ಅಲ್ಲದೆ, ಬೆಂಗಳೂರು, ರಾಮನಗರ, ಮಂಡ್ಯ, ಮೈಸೂರು, ಚಾಮರಾಜನಗರ, ಕೊಡಗು, ತುಮಕೂರು ಹಾಗೂ ಚಿಕ್ಕಮಗಳೂರು, ಕೋಲಾರ ಜಿಲ್ಲೆಗಳಲ್ಲಿ ತುಂತುರು ಮಳೆಯಾಗಬಹುದು. ರಾಜ್ಯದ ಒಳನಾಡು ಪ್ರದೇಶಗಳಲ್ಲಿ ಕನಿಷ್ಠ ತಾಪಮಾನ ಸಾಧಾರಣಕ್ಕಿಂತಲೂ ಮೂರರಿಂದ ಆರು ಸೆಲ್ಸಿಯಸ್‌ನಷ್ಟು ಕುಸಿಯಲಿದೆ. ಹಲವೆಡೆ




ಮಂಜು ಮುಸುಕಿದ ವಾತಾವರಣ ಇರಲಿದೆ ಎಂದು ತಿಳಿಸಿದೆ.

ಬಂಗಾಳಕೊಲ್ಲಿಯ ನೈರುತ್ಯ ಹಾಗೂ ಶ್ರೀಲಂಕಾದ ಈಶಾನ್ಯ ಕರಾವಳಿಯಲ್ಲಿ ಬೆಳಿಗ್ಗೆ ವಾಯುಭಾರ ಪುಟ 2ಕ್ಕೆ

## ಕೋವಿಡ್ ಸಂತ್ರಸ್ತರಿಗೆ ಹುದ್ದೆ: ಸಚಿವ ವೆಂಕಟೇಶ್ ಭರವಸೆ

**ಚಾಮರಾಜನಗರ:** ಕೋವಿಡ್ ಸಂತ್ರಸ್ತರಿಗೆ ಜ.26ರಂದು ನೇಮಕಾತಿ ಪತ್ರ ನೀಡಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಕೆ. ವೆಂಕಟೇಶ್ ತಿಳಿಸಿದರು.



ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೋವಿಡ್ ಪ್ರಕರಣಕ್ಕೆ ಸಂಬಂಧಿಸಿದಂತೆ ನ್ಯಾ. ಕುನ್ಹಾ ಹಾಗೂ ಇತರೆ ವರದಿ ಕುರಿತು ಕ್ರಮಕ್ಕೆ ಪುಟ 2ಕ್ಕೆ

## ಅಕ್ರಮ ವಲಸಿಗರಿಗೆ ಬಾಡಿಗೆ ನೀಡಿದರೆ ಕ್ರಮ: ಪರಮೇಶ್ವರ್

**ಬೆಂಗಳೂರು:** ನಗರದಲ್ಲಿ ಅಕ್ರಮ ವಲಸಿಗರಿಗೆ ಬಾಡಿಗೆ ಕೊಡುವವರ ಮೇಲೆ ಹದ್ದಿನ ಕಣ್ಣು ಇಡುತ್ತೇವೆ. ಅಂಥವರ ವಿರುದ್ಧ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಗೃಹ



ಸಚಿವ ಪರಮೇಶ್ವರ್ ಎಚ್ಚರಿಕೆ ನೀಡಿದರು. ಮಾಧ್ಯಮದವರೊಂದಿಗೆ ಶನಿವಾರ ಮಾತನಾಡಿದ ಅವರು ಅವರು, ಬೆಂಗಳೂರಿನಲ್ಲಿ ಕೆಲವು ಬಾಂಗ್ಲಾ ವಲಸಿಗರನ್ನ ಬಂಧಿಸಲಾಗಿದೆ. ಅವರನ್ನು ವಾಪಸ್ ಕಳುಹಿಸುವ ಪ್ರಕ್ರಿಯೆ ಮಾಡ್ತಿದೀವಿ. ಕೊತ್ತನೂರು, ಲಿಂಗರಾಜಪುರದಲ್ಲಿ ಆಫ್ರಿಕಾದವರು ಜಾಸ್ತಿ ಇದ್ದಾರೆ. ಅಲ್ಲಿ ಬಾಡಿಗೆ ಪುಟ 2ಕ್ಕೆ

# ಪೋಷಕರು ಪ್ರೀತಿಗೆ ಒಪ್ಪದ ಹಿನ್ನೆಲೆ ಯುವತಿ ಆತ್ಮಹತ್ಯೆ?

ಮೈಸೂರು: ನಂಜನಗೂಡು ಪಟ್ಟಣದ 17 ವರ್ಷದ ಯುವತಿ ದಿವ್ಯಾ ಆತ್ಮಹತ್ಯೆ ಮಾಡಿಕೊಂಡಿದ್ದ ಪ್ರಕರಣಕ್ಕೆ ತಿರುವು ಸಿಕ್ಕಿದೆ. ಪೋಷಕರು ತಮ್ಮ ಪ್ರೀತಿಗೆ ಒಪ್ಪದ ಕಾರಣಕ್ಕೆ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎನ್ನಲಾಗಿದೆ.

ಪ್ರಕರಣಕ್ಕೆ ತಿರುವು ನೀಡುವಂತ ಆಡಿಯೋ ಮತ್ತು ಫೋಟೋಗಳು ಈಗ ಲಭ್ಯವಾಗಿವೆ. ದಿವ್ಯ ಸಾವಿಗೆ ಪೋಷಕರು ಅವರ ಪ್ರೀತಿಗೆ ತೋರಿದ ವಿರೋಧವೇ ಕಾರಣ ಎನ್ನುವ ಅನುಮಾನ ಮೂಡಿದೆ. ಆರೋಪ ಹೊತ್ತಿರುವ ದಿವ್ಯ ಪ್ರಿಯಕರ ಆದಿತ್ಯ ಸ್ಫೋಟಕ ಮಾಹಿತಿ ಬಯಲು ಮಾಡಿದ್ದಾನೆ.

ದಿವ್ಯ ನಂಜನಗೂಡಿನ ಸರ್ಕಾರಿ ಕಾಲೇಜಿನ ಪ್ರಥಮ ವರ್ಷದ ಪಿಯುಸಿ ವಿದ್ಯಾಭ್ಯಾಸ ಮಾಡುತ್ತಿದ್ದಳು. ಈ ವೇಳೆ ಆದಿತ್ಯನ ಜೊತೆ ಪ್ರೀತಿ ಆಗಿತ್ತು. ದಿವ್ಯ ತನ್ನನ್ನು ಮನೆಯಿಂದ ಕರೆದುಕೊಂಡು ಹೋಗುವಂತೆ ಯುವಕನ ಜೊತೆ ಮಾತನಾಡಿರುವ ಆಡಿಯೋ ಲಭ್ಯವಾಗಿದೆ. ಪ್ರೀತಿ ಮಾಡುವಾಗ ಚಾಮುಂಡಿ ಬೆಟ್ಟ ಸೇರಿದಂತೆ ಹಲವು ಕಡೆ ಇವರು ಸುತ್ತಾಡಿರುವ ಫೋಟೋಗಳು ಸಾಮಾಜಿಕ ಜಾಲಾತಾಣದಲ್ಲಿ ವೈರಲ್ ಆಗಿವೆ. ಯುವತಿ ಸಾವಿಗೆ ಪೋಷಕರೇ ಕಾರಣ ಎಂದು ಆದಿತ್ಯ ಹೇಳಿಕೆ ನೀಡಿದ್ದಾನೆ.

# ದಲಿತರ ಮುಂದಿನ ನಡೆ ಸಿಎಂ ಕುರ್ಚಿ ಕಡೆ– ಶ್ರೀ ಜ್ಞಾನಪ್ರಕಾಶ್ ಸ್ವಾಮೀಜಿ



ಮೈಸೂರು: ಸ್ವತಃ ಸಿದ್ದರಾಮಯ್ಯ ಅವರಿಗೆ ದಲಿತರಿಗೆ ಮುಖ್ಯಮಂತ್ರಿ ಸ್ಥಾನವನ್ನು ಬಿಟ್ಟುಕೊಡಬೇಕು. ಒಂದು ವೇಳೆ ಬಿಟ್ಟುಕೊಡದಿದ್ದಲ್ಲಿ "ದಲಿತರ ಮುಂದಿನ ನಡೆ ಸಿಎಂ ಕುರ್ಚಿ ಕಡೆಗೆ' ಎಂಬ ಬೃಹತ್ ಹೋರಾಟ ರೂಪಿಸಲಾಗುವುದು ಎಂದು ಉರಿಲಿಂಗಪೆದ್ದಿಮಠದ ಶ್ರೀ ಜ್ಞಾನಪ್ರಕಾಶ್ ಸ್ವಾಮೀಜಿ ಆಗ್ರಹಿಸಿದರು.

ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿಯ ಸಂಸ್ಥಾಪಕ ರಾಜ್ಯ ಸಂಚಾಲಕ ದಿ.ಲಕ್ಷ್ಮೀನಾರಾಯಣ ನಾಗವಾರ ಅವರ ಪ್ರಥಮ ವರ್ಷದ ಸ್ಮರಣೆ ಅಂಗವಾಗಿ ಜೆಎಲ್‌ಬಿ ರಸ್ತೆಯ ರೋಟರಿ ಸಭಾಂಗಣದಲ್ಲಿ ಶನಿವಾರ ಏರ್ಪಡಿಸಿದ್ದ 'ಗುರಿಮುಟ್ಟದ ದಲಿತ ರಾಜಕಾರಣ ಮತ್ತು ಮುಂದಿನ ನಡೆ' ಕುರಿತ ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿದ ಅವರು, ಇದರ ಭಾಗವಾಗಿ ಫೆಬ್ರವರಿಯಲ್ಲಿ ಬೆಂಗಳೂರು ಅರಮನೆ ಮೈದಾನದಲ್ಲಿ ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿಯು ಸಮಾವೇಶ ನಡೆಸಲಿದೆ. ಈಗಾಗಲೇ ಏಳು ವರ್ಷ ಪೂರೈಸಿ, ಡಿ. ದೇವರಾಜ ಅರಸು ಅವರ ದಾಖಲೆಯನ್ನು ಮುರಿದು ಸುದೀರ್ಘಾವಧಿ ಮುಖ್ಯಮಂತ್ರಿ ಎನಿಸಿಕೊಂಡಿರುವ ಸಿದ್ದರಾಮಯ್ಯ ಅವರಿಂದ ತಾವು ಈ ನಡೆಯನ್ನು ನಿರೀಕ್ಷಿಸಿರುವುದಾಗಿ ಹೇಳಿದರು. ದಲಿತರು ಸದಾ ಸಿದ್ದರಾಮಯ್ಯ ಬೆನ್ನಿಗೆ ನಿಂತಿದ್ದಾರೆ. ಇದರಿಂದಾಗಿಯೇ ಅವರ ಎರಡು ಬಾರಿ ಸಿಎಂ ಆಗಲು ಸಾಧ್ಯವಾಗಿದೆ. ಈಗಲಾದರೂ ತಮ್ಮ ಸ್ಥಾನವನ್ನು ದಲಿತರಿಗೆ ಬಿಟ್ಟುಕೊಡಬೇಕು. ಸಿದ್ದರಾಮಯ್ಯ ಅವರು ದಲಿತರಿಗೆ ಸಿಎಂ ಸ್ಥಾನ ಬಿಟ್ಟುಕೊಟ್ಟರೆ ನಾವು ಅವರನ್ನು ಡಿ. ದೇವರಾಜ ಅರಸು ಅವರಿಗಿಂತಲೂ ಎತ್ತರದ ಸ್ಥಾನದಲ್ಲಿ ಕೂರಿಸುತ್ತೇವೆ. ಅಹಿಂದ ಹೆಸರೇಳಿಕೊಂಡು ಅಲ್ಪಸಂಖ್ಯಾತರು ಮತ್ತು ದಲಿತರಿಗೆ ಸಿಎಂ ಸ್ಥಾನ ಸಿಗದಂತೆ ನೋಡಿಕೊಂಡಿದ್ದಾರೆ. ವೋಟು ಹಾಕಲು ನಾವು. ಅಧಿಕಾರಕ್ಕೆ ನಾವು ಬೇಡವೇ? ಎಂದು ಅವರು ಪ್ರಶ್ನಿಸಿದರು.

ದಸಂಸ ರಾಜ್ಯ ಸಂಘಟನಾ ಸಂಚಾಲಕ ದೇವಗಳ್ಳಿ ಸೋಮಶೇಖರ್ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿದ್ದ ಕರ್ನಾಟಕ ರಾಜ್ಯ ದಲಿತ ಮಹಿಳಾ ಒಕ್ಕೂಟದ ಸಂಚಾಲಕಿ ಜಾನಕಮ್ಮ ಲಕ್ಷ್ಮೀನಾರಾಯಣ ನಾಗವಾರ, ರಾಜ್ಯ ಕಾರ್ಯಕಾರಿ ಸಮಿತಿ ಸಂಚಾಲಕ ಜೀವನಹಳ್ಳಿ ವೆಂಕಟೇಶ್ ಮಾತನಾಡಿದರು. ಜಿಲ್ಲಾ ಸಂಚಾಲಕ ಭುಗತಗಳ್ಳಿ ಕೆ. ಮಣಿಯಯ್ಯ ಸ್ವಾಗತಿಸಿದರು. ವಿಭಾಗೀಯ ಸಂಚಾಲಕ ರಾಜಶೇಖರ ಕೋಟೆ ಪ್ರಾಸ್ತಾವಿಕ ಭಾಷಣ ಮಾಡಿದರು. ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಅಧ್ಯಕ್ಷತೆ ವಹಿಸಿದ್ದರು. ಹಿರಿಯ ದಸಂಸ ಮುಖಂಡ ಹರಿಹರ ಆನಂದಸ್ವಾಮಿ ಇದ್ದರು. ಜಿಲ್ಲಾ ಸಂಘಟನಾ ಸಂಚಾಲಕ ಎಸ್.ಡಿ. ಸಣ್ಣಸ್ವಾಮಿ ಸರಗೂರು ಸ್ವಾಗತಿಸಿದರು.

## ಬೇಡುವುದಿಲ್ಲ, ಹಕ್ಕು ಮಂಡಿಸುವವೆ

ಮೈಸೂರು: ಮುಖ್ಯಮಂತ್ರಿ ಕುರ್ಚಿಗಾಗಿ ಬೇಡಬಾರದು. ಬದಲಿಗೆ ಸಿದ್ದರಾಮಯ್ಯ ಅವರಂತೆ ಹಕ್ಕು ಮಂಡಿಸಬೇಕು ಎಂದು ಸಾಹಿತಿ ಸಿ.ಹರಕುಮಾರ್ ಆಗ್ರಹಿಸಿದರು. ಅಹಿಂದ ರಾಜಕಾರಣದಲ್ಲಿ ದಲಿತ ರಾಜಕೀಯದ ಅಸ್ತಿತ್ವ ಮತ್ತು ಪರಿಣಾಮಗಳು ಕುರಿತ ವಿಚಾರಗೋಷ್ಠಿಯಲ್ಲಿ ವಿಷಯ ಮಂಡಿಸಿದ ಅವರು, ಸಿದ್ದರಾಮಯ್ಯ ಅವರು ಅಧಿಕಾರಕ್ಕಾಗಿ ಬೇಡಿಕೆ ಮಂಡಿಸುತ್ತಾರೆ. ಅದಕ್ಕೆ ಒಪ್ಪದಿದ್ದಲ್ಲಿ ಪಕ್ಷ ತ್ಯಜಿಸುವುದಾಗಿ ಹೇಳಿದ್ದಾರೆ. ಇದರ ಜೊತೆಗೆ ಮೌಢ್ಯ ವಿರೋಧಿ ನಡೆ, ಬಿಜೆಪಿ ಹಾಗೂ ಆರ್‌ಎಸ್‌ಎಸ್ ಕಡು ವಿರೋಧಿಯಾಗಿ ಗುರುತಿಸಿಕೊಂಡಿದ್ದಾರೆ. ಎಲ್ಲಾ ಜಾತಿ ಜನಾಂಗದವನ್ನು ಒಟ್ಟಿಗೆ ಕರೆದುಕೊಂಡು ಹೋಗುವುದಾಗಿ ಚಾಣಾಕ್ಷ್ಯ ನಡೆ ಅನುಸರಿಸುತ್ತಾರೆ. ಇದರಿಂದಾಗಿಯೇ ಅವರಿಗೆ ಎರಡು ಬಾರಿ ಸಿಎಂ ಆಗುವ ಅವಕಾಶವೂ ಸಿಕ್ಕಿದೆ ಎಂದರು.

ಮೊದಲ ಪುಟದಿಂದ

## ನರೇಗಾ ಚರ್ಚೆಗೆ ನಾನು ಸಿದ್ಧ: ಎಚ್‌ಡಿಕೆಗೆ ಸಿದ್ದು ತಿರುಗೇಟು

ಹೇಳ್ತಾರೆ. ಕರ್ನಾಟಕಕ್ಕೆ ಆಗೋ ಅನ್ಯಾಯವನ್ನು ಬಿಜೆಪಿ ಅವರು ನ್ಯಾಯ ಅಂತ ಹೇಳೋದು ಮಹಾಪರಾಧ ಎಂದು ಬಿಜೆಪಿ– ಜೆಡಿಎಸ್ ನಾಯಕರ ವಿರುದ್ಧ ಸಿದ್ದರಾಮಯ್ಯ ಕಿಡಿಕಾರಿದರು.

ಸಿದ್ದರಾಮಯ್ಯ ಲೀಸ್ ಬೇಸ್ಡ್ ಸಿಎಂ ಎಂಬ ಕುಮಾರಸ್ವಾಮಿ ಆರೋಪಕ್ಕೆ ತಿರುಗೇಟು ಕೊಟ್ಟ ಸಿಎಂ, ಕುಮಾರಸ್ವಾಮಿ, ಬಿಜೆಪಿಯವರು ಬರೀ ಸುಳ್ಳು ಹೇಳುತ್ತಾರೆ. ಅವರಿಗೆಲ್ಲ ಉತ್ತರ ಕೊಡುತ್ತಾ ಕೂರೋಕೆ ಆಗುತ್ತಾ ಅಂತ ವಾಗ್ದಾಳಿ ನಡೆಸಿದರು.

## ಎಚ್‌ಡಿಕೆ ಎಐ ಟೀಸರ್!

ಕಾದುನೋಡಬೇಕಿದೆ. ಡಿಸಿಎಂ ಡಿ.ಕೆ ಶಿವಕುಮಾರ್, ಜೆಡಿಎಸ್ ಬಿಜೆಪಿಯೊಂದಿಗೆ ವಿಲೀನವಾಗಲಿದೆ. ಕರ್ನಾಟಕದಲ್ಲಿ 2 ಪಕ್ಷಗಳು ಇರಲಿದೆ ಎಂಬ ಹೇಳಿಕೆ ನೀಡಿದ್ದರು. ಇದರ ಬೆನ್ನಲ್ಲೇ ಕುಮಾರಸೌಅಮಿ ಅಭಿಮಾನಿಗಳು ಎಐ ವಿಡಿಯೋ ಬಿಡುಗಡೆ ಮಾಡಿದ್ದಾರೆ.

## ಕೋವಿಡ್ ಸಂತ್ರಸ್ತರಿಗೆ ಹುದ್ದೆ: ಸಚಿವ ವೆಂಕಟೇಶ್ ಭರವಸೆ

ಸಿಎಂ ತಿಳಿಸಿದ್ದಾರೆ. ಹೀಗಾಗಿ ಉದ್ಯೋಗ ನೀಡಲು ಕೈಗೊಳ್ಳುತ್ತೇವೆ ಎಂದು ಹೇಳಿದರು.

ಕಾಡಂಚಿನ ಗ್ರಾಮದ ಮಕ್ಕಳಿಗೆ ಬಸ್ ವ್ಯವಸ್ಥೆ ಕಲ್ಪಿಸುವಂತೆ ಸಿಎಂಗೆ ಪತ್ರ ಬರೆದ ವಿಚಾರವಾಗಿ ಪ್ರತಿಕ್ರಿಯೆ ನೀಡಿದ ಸಚಿವರು, ಶಾಲಾ ಮಕ್ಕಳಿಗೆ ಬಸ್ ವ್ಯವಸ್ಥೆಗೆ ಕ್ರಮವಹಿಸುತ್ತೇನೆ ಎಂದು ಹೇಳಿದರು. ಶಾಸಕ ಸಿ.ಪುಟ್ಟರಂಗಶೆಟ್ಟಿ ಇದ್ದರು.

## ಉತ್ತರದಲ್ಲಿ ಶೀತಗಾಳಿ: ದಕ್ಷಣಕ್ಕೆ ತುಂತುರು ಮಳೆ

ಕುಸಿತ ಉಂಟಾಗಿದ್ದು, ಉತ್ತರ ವಾಯವ್ಯ ದಿಕ್ಕಿಗೆ ಮಾರುತಗಳು ಚಲಿಸುತ್ತಿವೆ. ಇದರಿಂದ ಕರ್ನಾಟಕದ ಮಳೆ ಮಾದರಿಯ ಮೇಲೆ ಪರಿಣಾಮವಾಗಬಹುದು ಎಂದು ಅಂದಾಜಿಸಲಾಗಿದೆ. ಮುಂಬರುವ ದಿನಗಳಲ್ಲಿ ರಾಜ್ಯದ ಹೆಚ್ಚಿನ ಕಡೆಗಳಲ್ಲಿ ಶುಷ್ಕ ವಾತಾವರಣವಿರಲಿದೆ ಎಂದೂ ಐಎಂಡಿ ಹೇಳಿದೆ.

## ಅಕ್ರಮ ವಲಸಿಗರಿಗೆ ಬಾಡಿಗೆ ನೀಡಿದರೆ ಕ್ರಮ: ಪರಮೇಶ್ವರ್

ಕೊಡೋರು ಎಚ್ಚರಿಕೆ ವಹಿಸಬೇಕು. ದಾಖಲಾತಿ, ವೀಸಾ ಪರಿಶೀಲಿಸಬೇಕು ಎಂದು ಎಚ್ಚರಿಸಿದರು.

ಬೆಂಗಳೂರಲ್ಲಿ ಬಾಂಗ್ಲಾ ವಲಸಿಗರು ಬೀಡುಬಿಟ್ಟ ವಿಚಾರಕ್ಕೆ ಪ್ರತಿಕ್ರಿಯಿಸಿದ ಅವರು, ಬಾರ್ಡರ್ ನೋಡೋರು ಯಾರು? ಕೇಂದ್ರ ಸರ್ಕಾರ. ಅಲ್ಲಿ ರಕ್ಷಣಾ ಇಲಾಖೆ, ಕೇಂದ್ರ ಸರ್ಕಾರ ಇರುತ್ತದೆ. ಅಲ್ಲಿ ಬಿಗಿಯಾದ ಬಂದೋಬಸ್ತ್ ಮಾಡಿ ಕಠಿಣ ಕ್ರಮ ತೆಗೆದುಕೊಳ್ಳಬೇಕು ಎಂದು ಆಗ್ರಹಿಸಿದರು.

## ರಾಯರೆಡ್ಡಿ, ರಾಜಣ್ಣ ಹೈಕಮಾಂಡೇ?

ತೀರ್ಮಾನಕ್ಕೆ ಬದ್ಧ ಅಂದ್ಮೇಲೆ ನಮ್ದು, ನಿಮ್ದು ಏನು? ರಾಯರೆಡ್ಡಿ ಹೇಳಿಕೆ ಪರಿಗಣಿಸೋದು ಬೇಡ. ಹೈಕಮಾಂಡ್ ಇದನ್ನ ಗಮನಿಸಬೇಕಾಗಿದೆ. ಇದು ಪಾರ್ಟಿಗೆ ಒಳ್ಳೆಯದಲ್ಲ. ಪ್ರತಿಯೊಬ್ಬ ಶಾಸಕರಿಗೂ ಅವರದ್ದೇ ಆದ ಗೌರವ ಇದೆ ಎಂದು ವಾಗ್ದಾಳಿ ನಡೆಸಿದರು. ಒಬ್ಬರಿಗೊಂದು ನೊಟೀಸ್ ಕೊಡೋದು. ಮತ್ತೆ ಇನ್ಯಾರಿಗೋ ಕೊಡಲ್ಲ ಅನ್ನೋದು ಸರಿಯಲ್ಲ. ಸಂಕ್ರಾಂತಿ ಬಳಿಕ ನಾನು ಮಾತನಾಡುತ್ತೇನೆ. ಜನವರಿ 16ರ ಬಳಿಕ ನಾವು ಮಾತನಾಡುತ್ತೇನೆ. ರಾಜಣ್ಣ ಅವರು ಎರಡೆರಡು ಸ್ಟೇಟ್ಮೆಂಟ್ ಮಾಡಿದ್ದಾರೆ. ನುಡಿದಂತೆ ನಡೆಯಬೇಕು ಅಂತಲೂ ಹೇಳಿದ್ದಾರೆ ಎಂದರು.

ವರ್ತಮಾನ
ಜಾಹಿರಾತಿಗೆ ಉತ್ತಮ ಮಾಧ್ಯಮ

# 101 ಋತ್ವಿಜರಿಂದ ಯಜ್ಞ

## ರಾಮೋತ್ಸವ; ಜ.15ರಂದು ರಾಮನಗರದಲ್ಲಿ ಶ್ರೀ ರಾಮತಾರಕ ಯಜ್ಞ

ರಾಮನಗರ: ಜ.15 ರಿಂದ 18ರವರೆಗೆ ಜಿಲ್ಲಾ ಕೇಂದ್ರ ರಾಮನಗರದಲ್ಲಿ ನಡೆಯಲಿರುವ ರಾಮೋತ್ಸವದ ಅಂಗವಾಗಿ ಜ.15ರಂದು ಇಲ್ಲಿನ ಬನ್ನಿಮಂಟಪದಲ್ಲಿ ಶ್ರೀರಾಮ ತಾರಕ ಯಜ್ಞವನ್ನು ಹಮ್ಮಿಕೊಳ್ಳಲಾಗಿದೆ. ಶಾಸಕ ಇಕ್ಬಾಲ್ ಹುಸೇನ್ ಅವರ ನೇತೃತ್ವದಲ್ಲಿ ಇದೇ ಮೊದಲ ಬಾರಿಗೆ ಶ್ರೀ ರಾಮ ತಾರಕ ಯಜ್ಞ ರಾಮನಗರದಲ್ಲಿ ಆಯೋಜನೆಯಾಗುತ್ತಿದೆ.

ಶೃಂಗೇರಿ ಮಠದ ರಾಜು ಶ್ರೀನಾಥ ಶರ್ಮಾ ನೇತೃತ್ವದಲ್ಲಿ 101 ಋತ್ವಿಜರು ಹೋಮ ಕುಂಡವನ್ನು ರಚನೆ ಮಾಡಿ ಹೋಮ ಹವನ ನೆರವೇರಿಸುವರು. ಅಂದು ಬೆಳಗ್ಗೆ 7.30 ಗಂಟೆಗೆ ಯಾಗ ಸ್ಥಳದಲ್ಲಿ ಗಂಗಾಪೂಜೆ, ಪುಣ್ಯಾಹುತಿ, ಗೋಪೂಜೆ, ಗಣಪತಿ ಹೋಮ ನಡೆದ ಬಳಿಕ ಕಳಸ ಸ್ಥಾಪನೆ ಮಾಡಲಾಗುತ್ತದೆ. ರಾಮದೇವರ ಬೆಟ್ಟದಿಂದ ಶ್ರೀ ರಾಮದೇವರ ಉತ್ಸವ ಮೂರ್ತಿಯನ್ನು ಬನ್ನಿ ಮಂಟಪಕ್ಕೆ ತಂದಿರಿಸಿದ ನಂತರ ಯಜ್ಞ ಕಾರ್ಯ ಪ್ರಾರಂಭವಾಗಲಿದೆ.

ಬನ್ನಿಮಂಟಪದಲ್ಲಿ ಬೃಹತ್ ಹೋಮ ಕುಂಡವನ್ನು ನಿರ್ಮಿಸಲಾಗುವುದು. ಹೋಮ ನಡೆಯುತ್ತಿರುವಾಗಲೇ ವೈದಿಕರು ಲಕ್ಷಕ್ಕೂ ಅಧಿಕ ಶ್ರೀ ರಾಮ ತಾರಕ ಮಂತ್ರ ಶ್ಲೋಕಗಳನ್ನು ಏಕ ಕಾಲದಲ್ಲಿ ಪಠಣ ಮಾಡುವರು. ಈ ವೇಳೆ ಹಾಜರಿರುವ ಭಕ್ತರು ರಾಮನಾಮ, ಹನುಮಾನ್ ಚಾಲೀಸಾ ಸ್ತೋತ್ರ ಪಠಿಸುವರು. ಅಯೋಧ್ಯೆಯ ರಾಮ ಮಂದಿರ ಉದ್ಘಾಟನೆಯಲ್ಲಿ ಪಾಲ್ಗೊಂಡಿದ್ದ ಡೊಳ್ಳುವಾದಕ ವಿಜಯ್ ಕುಮಾರ್ ನೇತೃತ್ವದ ಮಂಗಳ ವಾದ್ಯ ತಂಡವು ವಾದ್ಯ ನುಡಿಸಲಿದೆ. ಭಕ್ತಿ ಭಾವದಿಂದ ಹವಿಸ್ಸು ಅರ್ಪಿಸುವ ಮೂಲಕ ಪೂರ್ಣಾಹುತಿಗೊಂಡು ಮಂಗಳಾರತಿಯೊಂದಿಗೆ ಯಾಗ ಸಂಪನ್ನಗೊಳ್ಳಲಿದೆ. ಮಧ್ಯಾಹ್ನ 12 ಗಂಟೆ ನಂತರ ಭಕ್ತರಿಗೆ ದೇವರ ದರ್ಶನಕ್ಕೆ ಅವಕಾಶ ಕಲ್ಪಿಸಿಕೊಡಲಾಗುತ್ತದೆ. ಆಗಮಿಸುವ ಎಲ್ಲ ಭಕ್ತರಿಗೂ ಶ್ರೀ ಕೃಷ್ಣಸ್ಮೃತಿ ಕಲ್ಯಾಣ ಮಂಟಪದಲ್ಲಿ ಪ್ರಸಾದ ವಿನಿಯೋಗ ಮಾಡಲು ವ್ಯವಸ್ಥೆ ಮಾಡಲಾಗುವುದು ಎಂದು ಹೇಳಲಾಗಿದೆ.




ನಗರದಲ್ಲಿ ಆಯೋಜಿಸುರವ ರಾಮೋತ್ಸವದ ವೇಳೆ ಲೋಕಕಲ್ಯಾಣಾರ್ಥವಾಗಿ ಶ್ರೀ ರಾಮತಾರಕ ಯಜ್ಞ ಹಮ್ಮಿಕೊಳ್ಳಲಾಗಿದೆ. ಇದು ಪ್ರತಿಯೊಬ್ಬರ ಜೀವನದಲ್ಲಿ ಧರ್ಮಕ್ಕೆ ಅನುಗುಣವಾದ ಆಧ್ಯಾತ್ಮಿಕ ಉನ್ನತಿ , ಮೋಕ್ಷ, ಶಾಂತಿ , ಆರೋಗ್ಯ , ಕ್ಷೇಮ ಹಾಗೂ ಯಶಸ್ಸನ್ನು ತರಲು ರಕ್ಷಣೆ ಜೊತೆಗೆ ಧೈರ್ಯ ಮತ್ತು ಶಕ್ತಿಯ ಪ್ರಸಾದವನ್ನು ಪ್ರಭು ಶ್ರೀ ರಾಮನು ಕರುಣಿಸಲಿ ಎಂಬ ಆಶಯದೊಂದಿಗೆ ಈ ಯಜ್ಞವನ್ನು ಆಯೋಜಿಸಲಾಗಿದೆ.

**ಇಕ್ಬಾಲ್ ಹುಸೇನ್** ಶಾಸಕರು, ರಾಮನಗರ ಕ್ಷೇತ್ರ

### ರಾಮ ತಾರಕ ಮಂತ್ರ ಅಂದರೇನು, ಏನದರ ಮಹತ್ವ?

**ರಾಮತಾರಕ ಮಂತ್ರವು ಶಾಂತಿ ಮತ್ತು ಸಕಾರಾತ್ಮಕತೆಯನ್ನು ತರುತ್ತದೆ. ಈ ಮಂತ್ರವನ್ನು ಅತ್ಯಂತ ಪವಿತ್ರ ಮತ್ತು ಬಲಶಾಲಿ ಎಂದು ಪರಿಗಣಿಸಲಾಗಿದೆ. ಇದು ನಕಾರಾತ್ಮಕ ಶಕ್ತಿಗಳನ್ನು ನಾಶಮಾಡಿ ನೀತಿಯನ್ನು ಉತ್ತೇಜಿಸುತ್ತದೆ ಎಂದು ನಂಬಲಾಗಿದೆ. ರಾಮತಾರಕ ಮಂತ್ರವನ್ನು ಪಠಿಸುವುದರಿಂದ ಶಾಂತಿ ದೊರೆಯುತ್ತದೆ ಮತ್ತು ಅಡೆತಡೆಗಳು ನಿವಾರಣೆಯಾಗುತ್ತವೆ. ಇದು ಆಂತರಿಕ ಶಕ್ತಿ ಮತ್ತು ಮಾನಸಿಕ ಸ್ಪಷ್ಟತೆಯನ್ನು ಪಡೆಯಲು ಸಹಾಯ ಮಾಡುತ್ತದೆ. ಇದು ಅಪಾಯಗಳಿಂದ ರಕ್ಷಿಸುತ್ತದೆ ಮತ್ತು ಮನಸ್ಸನ್ನು ಶುದ್ಧೀಕರಿಸುತ್ತದೆ ಎಂಬ ನಂಬಿಕೆ ಇದೆ. ಆಧ್ಯಾತ್ಮಿಕ ಬೆಳವಣಿಗೆ, ರಕ್ಷಣೆ ಮತ್ತು ಆಸೆಗಳನ್ನು ಪೂರೈಸಲು ಪಠಿಸಲಾಗುತ್ತದೆ ಎಂದು ಹಿರಿಯರು ತಿಳಿಸಿದ್ದಾರೆ.**

**ರಾಮ ತಾರಕ ಹೋಮವು ವ್ಯಕ್ತಿಯನ್ನು ಧಾರ್ಮಿಕ ಬೆಳವಣಿಗೆಯ ದಾರಿಯಲ್ಲಿ ಮುನ್ನಡೆಸುವಲ್ಲಿ ಮತ್ತು ಮೋಕ್ಷವನ್ನು ಹೊಂದಲು ಸಹಕಾರಿಯಾಗಿದೆ. ಹೋಮವು ಕುಟುಂಬದ ಶಾಂತಿಯನ್ನು ಉತ್ತೇಜಿಸುತ್ತದೆ ಮತ್ತು ಅಡ್ಡಿ–ತೊಡಕುಗಳನ್ನು ನಿವಾರಿಸಲು ಸಹಾಯಮಾಡುತ್ತದೆ. ರಾಮನ ಕೃಪೆಯೊಂದಿಗೆ ಜೀವಿ ಮನೋಬಲ ಮತ್ತು ಶಕ್ತಿಯನ್ನು ಪಡೆದನೆಂದು ನಂಬಲಾಗಿದೆ. ಹೋಮದ ಶ್ರದ್ಧೆಯ ಶಕ್ತಿ ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ಉತ್ತೇಜಿಸುತ್ತದೆ ಮತ್ತು ಶುದ್ಧೀಕರಣೆಯ ಶಕ್ತಿಯನ್ನು ನೀಡುತ್ತದೆ. ಪ್ರಭು ರಾಮನ ಆಶೀರ್ವಾದವು ಜೀವನದಲ್ಲಿ ಧರ್ಮಕ್ಕೆ ಅನುಗುಣವಾದ ಕಾರ್ಯಗಳಲ್ಲಿ ಯಶಸ್ಸನ್ನು ತರಲು ಸಹಕಾರಿಯಾಗಿದೆ ಎಂಬುದು ಭಕ್ತರ ನಂಬಿಕೆ.**

## 14 ಕೋಟಿ ರೂ. ಮಂಜೂರು

ಕ್ರೀಡಾ ಸೌಲಭ್ಯವನ್ನು ನಿರ್ಮಾಣ ಮಾಡಲಾಗುವುದು ಎಂದು ಮಾಧ್ಯಮ ಹೇಳಿಕೆಯಲ್ಲಿ ತಿಳಿಸಿದ್ದಾರೆ. ಬಹುಪಯೋಗಿ ಕ್ರೀಡಾ ಸೌಲಭ್ಯಕ್ಕೆ ಈಗ ಅನುಮೋದನೆ ದೊರೆತಿರುವುದರಿಂದ ಮಂಡ್ಯ ಕ್ರೀಡಾ ಅಭಿವೃದ್ಧಿ ಮತ್ತು ಉತ್ತೇಜನದಲ್ಲಿ ಹೊಸ ಯುಗಕ್ಕೆ ನಾಂದಿಯಾಗಲಿದೆ ಎಂದು ಸಂತಸ ವ್ಯಕ್ತಪಡಿಸಿದ ಕೇಂದ್ರ ಸಚಿವರು; ಈ ಕ್ರೀಡಾ ಸಮುಚ್ಚಯದಲ್ಲಿ ಯುವ ಕ್ರೀಡಾಪಟುಗಳ ತರಬೇತಿ, ಜಿಲ್ಲಾ ಮತ್ತು ರಾಜ್ಯ ಮಟ್ಟದ ಸ್ಪರ್ಧೆಗಳನ್ನು ಆಯೋಜಿಸುವುದು, ಸಾರ್ವಜನಿಕರಲ್ಲಿ ಫಿಟ್‌ನೆಸ್ ಅನ್ನು ಉತ್ತೇಜಿಸುವ ಸೌಲಭ್ಯಗಳನ್ನು ಕಲ್ಪಿಸಲಾಗುತ್ತದೆ. ಈ ಮಂಜೂರಾತಿಯು ಮಂಡ್ಯಕ್ಕೆ ಮಹತ್ವದ ಕೊಡುಗೆಯಾಗಿದೆ ಎಂದರು.

ಕೃಷಿ ಆಧರಿತವಾದ ಮಂಡ್ಯ ಜಿಲ್ಲೆಯೂ ಪ್ರತಿಭೆಗಳ ಆಗರ. ಅನೇಕ ಪ್ರತಿಭಾವಂತರು ರಾಷ್ಟ್ರ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿ ಗಳಿಸಿದ್ದಾರೆ. ಈ ನಿಟ್ಟಿನಲ್ಲಿ ಕ್ರೀಡೆಯನ್ನು ಉತ್ತೇಜಿಸುವುದು ಅಗತ್ಯವಾಗಿದೆ. ಆರೋಗ್ಯವಂತ ಸಶಕ್ತ ಮಂಡ್ಯ ಜಿಲ್ಲೆ ನಿರ್ಮಾಣಕ್ಕೆ ಈ ಯೋಜನೆ ಪೂರಕವಾಗಿದೆ. ಇದು ಪ್ರಧಾನಿ ಮೋದಿ ಅವರ ಕನಸು ಕೂಡ ಆಗಿದೆ ಎಂದು ಸಚಿವರು ಹೇಳಿದ್ದಾರೆ.


## ತಾಯಿ ಹುಲಿ ಸೆರೆ: 4 ಮರಿ ನಾಪತ್ತೆ

ಸೆರೆಸಿಕ್ಕ ತಾಯಿ ಹುಲಿಗೆ ಪಶು ವೈದ್ಯರಿಂದ ಅರವಳಿಕೆ ಮದ್ದು ನೀಡಿ ಅದರ ಆರೋಗ್ಯದ ಸ್ಥಿತಿಗತಿ ಪರಿಶೀಲನೆ ಮಾಡಲಾಗಿದೆ. ಅದೇ ಬೋನಿನಲ್ಲಿ ತಾಯಿ ಹುಲಿಯನ್ನು ಇರಿಸಿ ಉಳಿದ ನಾಲ್ಕು ಮರಿ ಹುಲಿಗಳಿಗಾಗಿ ಬಿಆರ್‌ಟಿ ಅರಣ್ಯ ಸಿಬ್ಬಂದಿ ಕಾರ್ಯಾಚರಣೆ ನಡೆಸಲಿದ್ದಾರೆ. ಈಗಾಗಲೇ ಥರ್ಮಲ್ ಡ್ರೋನ್ ಕ್ಯಾಮರಾ ತರಿಸಿಕೊಂಡಿರುವ ಅರಣ್ಯ ಸಿಬ್ಬಂದಿ ರಾತ್ರಿಯಿಡೀ ನಾಲ್ಕು ಮರಿ ಹುಲಿಗಳಿಗಾಗಿ ಕಾರ್ಯಾಚರಣೆ ನಡೆಸಿದ್ದಾರೆ. ಮುನ್ನೆಚ್ಚರಿಕೆ ಕ್ರಮವಾಗಿ ನಂಜೇದೇವನಪುರ, ವೀರನಪುರ ಸುತ್ತಮುತ್ತಿನ ಗ್ರಾಮಗಳಲ್ಲಿ 144 ಸೆಕ್ಷನ್ ಜಾರಿಗೊಳಿಸಿ ಚಾಮರಾಜನಗರ ತಹಶೀಲ್ದಾರ್ ಗಿರಿಜಾ ಆದೇಶಿಸಿದ್ದರು.

## ಅಭಿಮಾನಿ ಬಳಗದ ಕ್ಯಾಲೆಂಡರ್ ಬಿಡುಗಡೆ

ಮೈಸೂರು: ಡಾ.ಯತೀಂದ್ರ ಸಿದ್ದರಾಮಯ್ಯ ಅಭಿಮಾನಿ ಬಳಗದ ನೂತನ ಕ್ಯಾಲೆಂಡರ್ ಅನ್ನು ವಿಧಾನಪರಿಷತ್ ಸದಸ್ಯ ಡಾ. ಯತೀಂದ್ರ ಸಿದ್ದರಾಮಯ್ಯ ಬಿಡುಗಡೆ ಮಾಡಿದರು.

ಜ್ವಾಲಾಮುಖಿ ಆಂಬ್ಯುಲೆನ್ಸ್ ಮಾಲೀಕ ಹಾಗೂ ಕೆಪಿಸಿಸಿ ಹಿಂದುಳಿದ ವರ್ಗಗಳ ರಾಜ್ಯ ಉಪಾಧ್ಯಕ್ಷ ವೈ.ಕೆ.ಮಂಜುನಾಥ್ ನೇತೃತ್ವದಲ್ಲಿ ಬಿಡುಗಡೆ ಮಾಡಿದ್ದು, ಕಾರ್ಯಕ್ರಮದಲ್ಲಿ ಯತೀಂದ್ರ ಸಿದ್ದರಾಮಯ್ಯ ಅಭಿಮಾನಿ ಬಳಗದ ಅಧ್ಯಕ್ಷ ರವಿ ಕುಮಾರ್, ವರುಣಾ ಸ್ವಾಮಿ, ಕಾರ್ ಮಹದೇವ್, ಮಹೇಶ್ ವರುಣಾ. ಮೈಸೂರು ರಮೇಶ್ ಗೌಡ, ಮಂಡ್ಯ ಜೋಗಿ ಇದ್ದರು.



## ಕುಕ್ಕರಹಳ್ಳಿಯಲ್ಲಿ 410ಕೆಜಿ ತ್ಯಾಜ್ಯ ಸಂಗ್ರಹ



ಮೈಸೂರು: ನಗರ ಪಾಲಿಕೆಯು ಸ್ವಚ್ಛ ಸರ್ವೇಕ್ಷಣ ಅಭಿಯಾನದ ಅಂಗವಾಗಿ ಕುಕ್ಕರಹಳ್ಳಿ ಕೆರೆಯಲ್ಲಿ ಸ್ವಚ್ಛತಾ ಅಭಿಯಾನ ಹಾಗೂ ಶಾಲಾ ಮಕ್ಕಳಿಗಾಗಿ ಚಿತ್ರಕಲಾ ಸ್ಪರ್ಧೆಯಲ್ಲಿ ಬರೋಬ್ಬರಿ 410ಕೆ.ಜಿ. ತ್ಯಾಜ್ಯ ಸಂಗ್ರಹ ಮಾಡಲಾಯಿತು.

ಆಯಿಷ್, ಜೆಎಸ್‌ಎಸ್ ವಿದ್ಯಾಪೀಠ, ಎಂಐಟಿ, ಎಸ್‌ಜೆಸಿಇ ಹಾಗೂ ಯುವರಾಜ ಕಾಲೇಜಿನ ಎನ್‌ಎಸ್‌ಎಸ್ ಮತ್ತು ಎನ್ ಸಿಸಿ ವಿದ್ಯಾರ್ಥಿಗಳು ಸ್ವಚ್ಛತಾ ಅಭಿಯಾನದಲ್ಲಿ ಸಕ್ರಿಯವಾಗಿ ಭಾಗವಹಿಸಿದರು. ಮೈಸೂರು ಗ್ರಾಹಕ ಪರಿಷತ್, ಕ್ಲೀನ್ ಮೈಸೂರು ಫೌಂಡೇಶನ್, ರಫುಲಾಲ್ ಮೆಡಿಕಲ್ಸ್ ಸೇರಿ ವಿವಿಧ ಸ್ವಯಂಸೇವಕ ಸಂಸ್ಥೆಗಳ ಸದಸ್ಯರು ಸಹ ಕೈಜೋಡಿಸಿ, ಕೆರೆಯ ಸ್ವಚ್ಛತಾ ಕಾರ್ಯದಲ್ಲಿ ಸಹಕರಿಸಿದರು. ಈ ಸ್ವಚ್ಛತಾ ಅಭಿಯಾನದ ಸಂದರ್ಭದಲ್ಲಿ ಒಟ್ಟು 410ಕೆ.ಜಿ. ತ್ಯಾಜ್ಯವನ್ನು ಸಂಗ್ರಹಿಸಲಾಗಿಯಿತು. ಕೆಪಿ ಕಾನ್ವೆಂಟ್, ಸೇಂಟ್ ಪಾಲ್ ಶಾಲೆ, ಲಿಟಲ್ ಇನ್ಫೆಂಟ್ ಶಾಲೆ, ಅಮೃತ್ ವಿದ್ಯಾಲಯ, ವಿದ್ಯಾವರ್ಧಕ ಮತ್ತು ಪ್ರಗತಿ ವಿದ್ಯಾಲಯದ ಶಾಲಾ ಮಕ್ಕಳು ಚಿತ್ರಕಲಾ ಸ್ಪರ್ಧೆಯಲ್ಲಿ ಉತ್ಸಾಹದಿಂದ ಭಾಗವಹಿಸಿ ಸ್ವಚ್ಛತೆ ಹಾಗೂ ಪರಿಸರ ಸಂರಕ್ಷಣೆ ಕುರಿತು ತಮ್ಮ ಕಲಾತ್ಮಕ ಅಭಿವ್ಯಕ್ತಿಯನ್ನು ಪ್ರದರ್ಶಿಸಿದರು.

ಈ ಕಾರ್ಯಕ್ರಮದಲ್ಲಿ ಮೈಸೂರು ನಗರ ಪಾಲಿಕೆಯ ಸ್ವಚ್ಛ ಭಾರತ ಮಿಷನ್ ನೋಡೆಲ್ ಅಧಿಕಾರಿ ಕೆ.ಎಸ್.ಮೃತ್ಯುಂಜಯ, ಸಹಾಯಕ ಕಾರ್ಯನಿರ್ವಹಣಾ ಇಂಜಿನಿಯರ್ ಮೀನಾಕ್ಷಿ ಅನೇಕರು ಪಾಲ್ಗೊಂಡು ಕಾರ್ಯಕ್ರಮ ಯಶಸ್ವಿಗೊಳಿಸಿದರು.ಚಿತ್ರಕಲಾ ಸ್ಪರ್ಧೆಯ ವಿಜೇತರಿಗೆ ಬಹುಮಾನ ಹಾಗೂ ಪ್ರಮಾಣಪತ್ರಗಳನ್ನು ಪ್ರದಾನಿಸಲಾಯಿತು. ಚಿತ್ರಕಲಾ ಸ್ಪರ್ಧೆಯಲ್ಲಿ ವೀಣಾ ಕುಮಾರಿ(ಪ್ರ), ಜಿ.ಹರ್ಷಿತ್(ದ್ವಿ), ಅನ್ವಿತಾ(ತೃ) ಬಹುಮಾನ ಪಡೆದರು.

## ನಾಳೆಯಿಂದ ಧರಣಿ

ಮೈಸೂರು: ನಗರವನ್ನು ನಶೆ ಮುಕ್ತಗೊಳಿಸುವ ನಿಟ್ಟಿನಲ್ಲಿ ಜ.12 ರ ಬೆಳಗ್ಗೆ 10 ರಿಂದ ಸಂಜೆ 5 ರವರೆಗೆ ನಗರದ ಅಗ್ರಹಾರ ವೃತ್ತದಲ್ಲಿ ಕನ್ನಡಪರ ಸಂಘಟನೆಗಳ ಆಶ್ರಯದಲ್ಲಿ ಒಂದು ದಿನದ ಧರಣಿ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಕನ್ನಡ ಚಳವಳಿ ಹೋರಾಟಗಾರ ತೇಜಸ್ವಿ ನಾಗಲಿಂಗಸ್ವಾಮಿ ತಿಳಿಸಿದರು.

ಈ ಕಾರ್ಯಕ್ರಮವು ಮಾದಕ ದ್ರವ್ಯ ಬಳಕೆ ಬೇರು ಸಮೇತ ಕಿತ್ತುಹಾಕಬೇಕು, ಮಾದಕ ವಸ್ತು ಉತ್ಪಾದಕರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು, ಮಾದಕ ವಸ್ತು ದುರುಪಯೋಗದ ದುಷ್ಪರಿಣಾಮ ಬಗ್ಗೆ ಜಾಗೃತಿ ಮೂಡಿಉವುದು, ವ್ಯಸನಮುಕ್ತ ಜೀವನ ನಡೆಸಲು ಯುವಜನರನ್ನು ಪ್ರೇರೇಪಿಸುವ ಉದ್ದೇಶ ಹೊಂದಿದೆ ಎಂದರು. ಈ ವೇಳೆ ಮಾದಕ ವಸ್ತುಗಳ ಬಳಕೆ ವಿರುದ್ಧ ವಿವಿಧ ಭಿತ್ತಿಚಿತ್ರ ಪ್ರದರ್ಶನ, ಜಾಗೃತಿ ಮಾತುಕತೆಗಳು, ಕ್ಷೇತ್ರದ ತಜ್ಞರೊಂದಿಗೆ ಸಂವಾದ ಇರಲಿವೆ ಎಂದು ವಿವರಿಸಿದರು. ಸುಶೀಲ, ಮಹೇಶ್, ಕಮಲ ನಟರಾಜ್, ಎಂ.ಪುಟ್ಟರಾಜು, ಲಿಂಗರಾಜು ಇದ್ದರು.



ವಿಶ್ವಮಾನವ ರಾಷ್ಟ್ರಕವಿ ಕುವೆಂಪು ಜಯಂತ್ಯೋತ್ಸವ

# ಸಾಧಕರಿಗೆ ಕುವೆಂಪು ಪ್ರಶಸ್ತಿ ಪ್ರಧಾನ

ಮೈಸೂರು: ಮೈಸೂರು ಕನ್ನಡ ವೇದಿಕೆವತಿಯಿಂದ ವಿಶ್ವಮಾನವ ರಾಷ್ಟ್ರಕವಿ ಕುವೆಂಪು ಜಯಂತ್ಯೋತ್ಸವ ಹಾಗೂ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಸಾಧಕರಿಗೆ ರಾಷ್ಟ್ರಕವಿ ಕುವೆಂಪು ಪ್ರಶಸ್ತಿ ಪ್ರಧಾನ ಮಾಡಲಾಯಿತು.

ನಗರದ ನಾರಾಯಣ ಶಾಸ್ತ್ರಿ ರಸ್ತೆಯ ಸ್ವಾತಂತ್ರ್ಯ ಹೋರಾಟಗಾರ ಉದ್ಯಾನವನ ಸುಬ್ಬರಾಯನಕೆರೆ ನಡೆದ ಸಮಾರಂಭವನ್ನು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣಗೌಡ ಉದ್ಘಾಟಿಸಿದರು. ಪ್ರಶಸ್ತಿ ಪ್ರಧಾನ ಮಾಡಿದ ಮಾಜಿ ಶಾಸಕ ಎಂ.ಕೆ ಸೋಮಶೇಖರ್ ಮಾತನಾಡಿ, ರಾಷ್ಟ್ರಕವಿ ಕುವೆಂಪುರವರು ಈ ನಾಡು ಕಂಡ ಮಹಾನ್ ಚೇತನ. ಜಾತಿ, ಮತ ಸಂಘರ್ಷಗಳನ್ನು ಬಿಟ್ಟು ವಿಶ್ವಮಾನವ ಕಲ್ಪನೆ ಮತ್ತು ಮಾನವತ್ವದೆಡೆಗೆ ಸಮಾಜ ಸಾಗಬೇಕು ಎಂಬ ಪರಿಕಲ್ಪನೆಯನ್ನು ಈ ಜಗತ್ತಿಗೆ ತಿಳಿಸಿದವರು. ಎಲ್ಲರೂ ಸಮಾನವಾಗಿ ಬದುಕಬೇಕು.ಒಳ್ಳೆಯ ಆಲೋಚನೆಗಳನ್ನು ಮೈಗೂಡಿಸಿಕೊಳ್ಳಬೇಕು.ಪ್ರತಿಯೊಬ್ಬರು ಒಳ್ಳೆಯದು, ಕೆಟ್ಟದನ್ನು ತಮ್ಮ ಆತ್ಮದೊಳಗೆ ವಿಚಾರ ಮಾಡಬೇಕು. ಮನುಷ್ಯರು ಮನುಷ್ಯರನ್ನು ಮನುಷ್ಯರ ರೀತಿಯಲ್ಲಿ ನೋಡಬೇಕು. ಮೌಢ್ಯಗಳನ್ನು ಕಿತ್ತೊಗೆದು ವೈಚಾರಿಕ ಪ್ರಜ್ಞೆಯನ್ನು ಜಗತ್ತಿಗೆ ಸಾರಬೇಕು. ಯುವ ಕರು, ರಾಜಕೀಯ ವ್ಯವಸ್ಥೆ,ಮಾಧ್ಯಮಗಳು ಮೌಢ್ಯ ವನ್ನು ತೊಡೆದು ಕುವೆಂಪು ರವರ ಆಶಯದಂತೆ ಕತ್ತ ಲೆಯ ಕೂಪದಿಂದ ವಿಶ್ವ ಮಾನವ ಚಿಂತನೆಗಳತ್ತ ಜಾಗೃತಿ ಮೂಡಿಸುವ ಕೆಲಸ ಆಗಬೇಕಾಗಿದೆ ಎಂದರು

ದಂತವೈದ್ಯ ಮತ್ತು ಸಮಾಜ ಸೇವಕ ಡಾ. ಲೋಕೇಶ್ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಮೈಸೂರು ಕನ್ನಡ ವೇದಿಕೆಯ ಅಧ್ಯಕ್ಷ ಬಾಲಕೃಷ್ಣ ಅಧ್ಯಕ್ಷತೆ ವಹಿಸಿದ್ದರು. ಮನೋಹರ್ ಪ್ರಾಸ್ತಾವಿಕವಾಗಿ ಮಾತನಾಡಿದರು. ನಾಲಾಬೀದಿ ರವಿ ಕಾರ್ಯಕ್ರಮ ನಿರೂಪಿಸಿದರು. ಈ ವೇಳೆ ಸಮಾಜ ಸೇವಕ ರಘುರಾಮ ವಾಜಪೇಯಿ, ಕನ್ನಡಪ್ರಭ ದಿನಪತ್ರಿಕೆಯ ವರದಿಗಾರ ಬಿ.ಶೇಖರ್ ಗೋಪಿನಾಥಂ,ಸಮಾಜ ಸೇವಕ ಜ್ಯೋತಿಷಿ ಹನುಮಂತಪ್ಪ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕ ಸಾಲುಂಡಿ ಎಸ್ ದೊರೆಸ್ವಾಮಿ, ಸಮಾಜ ಸೇವಕ ಎಚ್.ಎಲ್.ಗಂಗಯ್ಯ, ನ್ಯೂಸ್ 18 ವರದಿಗಾರ ಕೆ.ಎಸ್.ಆನಂದ್, ಉದ್ಯಮಿ ಎಸ್.ಆರ್.ಶಿವಕುಮಾರ್, ಸಮಾಜ ಸೇವಕ ಕೆ. ನಾಗೇಶ್ ನಾಯಕ, ಸುರೇಶ್, ಪೌರಕಾರ್ಮಿಕ ಬಂಧು ಸ್ವಾಮಿನಾಥನ್ ಗೆ ರಾಷ್ಟ್ರಕವಿ ಕುವೆಂಪು ಪ್ರಶಸ್ತಿ ಪ್ರಧಾನ ಮಾಡಲಾಯಿತು. ವೇದಿಕೆಯ ಪದಾಧಿಕಾರಿಗಳಾದ ಬೋಗಾದಿ ಸಿದ್ದೇಗೌಡ ,ಗುರುಬಸಪ್ಪ ,ಪ್ಯಾಲೇಸ್ ಬಾಬು,ಗೋಪಿ, ಕಾವೇರಮ್ಮ, ಮಾಲಿನಿ,ಭವಾನಿ, ಪುಷ್ಪಲತಾ ,ಹರೀಶ್ ಕುಮಾರ್, ಎಲ್ಐಸಿ ಸಿದ್ದಪ್ಪ ,ಗೋವಿಂದರಾಜು ,ಸ್ವಾಮಿ, ಸುನಿಲ್, ಸ್ವಾಮಿ ಗೈಡ್ ,ಅರವಿಂದ್, ಮಹದೇವಸ್ವಾಮಿ ,ಚಿನ್ನಪ್ಪ ,ಶಿವಗೌಡ, ಇದ್ದರು.



ರಾಷ್ಟ್ರಕವಿ ಕುವೆಂಪು ಅವರ ಬರವಣಿಗೆ ಸಾಹಿತ್ಯವನ್ನು ವಿಶ್ವಮಟ್ಟದಲ್ಲಿ ವಿಶ್ವ ದರ್ಜೆಯ ಭಾಷೆಗಳಿಗೆ ತರ್ಜುಮೆ ಮಾಡಿದರೆ ಕನ್ನಡಕ್ಕೆ ಅದೆಷ್ಟು ನೋಬೆಲ್ ಪ್ರಶಸ್ತಿಗಳು ಬರುತ್ತಿದ್ದವು. ಅಂತಹ ಮಹಾಜ್ಞಾನಿ ರಾಷ್ಟ್ರಕವಿ ಕುವೆಂಪು ಅವರು. ಮಕ್ಕಳಿಂದ ಹಿಡಿದು ಪ್ರಕೃತಿ ವೃದ್ಧರು ಎಲ್ಲರನ್ನೂ ಅವರ ಸಾಹಿತ್ಯ ಆವರಿಸಿಕೊಂಡಿತು ಅಷ್ಟೇ ಅಲ್ಲದೆ ಪ್ರೀತಿ ಪ್ರಣಯದ ಬಗ್ಗೆ ಕೂಡ ಅವರ ಸಾಹಿತ್ಯ ಅಭಿರುಚಿ ಮೂಡಿಸಿತ್ತು ಅವರ ಚಂದ್ರಮಂಚಕೆ ಬಾ ಚಕೋರಿ ಅದಕ್ಕೆ ಸಾಕ್ಷಿ.

**ಮಡ್ಡಿಕೆರೆ ಗೋಪಾಲ್**
ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ನ ಅಧ್ಯಕ್ಷ

# ಬೀದಿನಾಟಕದೊಂದಿಗೆ ಬಹುರೂಪಿ



ಮೈಸೂರು: ಸಮಾಜದಲ್ಲಿ ಸಂವಿಧಾನ ಜಾಗೃತಿ ಹಾಗೂ ಡಾ.ಬಿ.ಆರ್.ಅಂಬೇಡ್ಕರ್ ಅವರ ಚಿಂತನೆಗಳನ್ನು ಜನಸಾಮಾನ್ಯರಿಗೆ ತಲುಪಿಸುವ ಬೀದಿ ನಾಟಕವನ್ನು ಪ್ರದರ್ಶಿಸುವ ಮೂಲಕ ಬಾಬಾ ಸಾಹೇಬ್ ಅಂಬೇಡ್ಕರ್ ಆಶಯದ ಬಹುರೂಪಿಗೆ ಶನಿವಾರ ಮುನ್ನುಡಿ ಬರೆಯಲಾಯಿತು.

ನಗರದ ಚಿಕ್ಕ ಗಡಿಯಾರದ ಬಳಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕಾರ್ಯಕ್ರಮಕ್ಕೆ ಹಿರಿಯ ರಂಗ ನಿರ್ದೇಶಕ ಹಾಗೂ ಕಲಾವಿದ ಮೈಮ್ ರಮೇಶ್ ಚಾಲನೆ ನೀಡಿದರು. ಬಳಿಕ ಮಾತನಾಡಿದ ಅವರು, ಡಾ.ಬಿ.ಆರ್.ಅಂಬೇಡ್ಕರ್ ಅವರ ವಿಚಾರಧಾರೆ, ಸಂವಿಧಾನದ ಮೌಲ್ಯ ಹಾಗೂ ಮಾನವೀಯತೆಯ ಸಂದೇಶಗಳನ್ನು ಜನರಿಗೆ ತಲುಪಿಸಲು ಬೀದಿ ನಾಟಕ ಅತ್ಯಂತ ಪರಿಣಾಮಕಾರಿ ಮಾಧ್ಯಮವಾಗಿದೆ. ಇಂತಹ ಬೀದಿ ನಾಟಕಗಳನ್ನು ಹೆಚ್ಚು ಹೆಚ್ಚು ಆಯೋಜಿಸಬೇಕು. ವಿಶೇಷವಾಗಿ ಶಾಲಾ ಹಾಗೂ ಕಾಲೇಜುಗಳಲ್ಲಿ ಈ ರೀತಿಯ ನಾಟಕಗಳನ್ನು ಪ್ರದರ್ಶಿಸುವ ಮೂಲಕ ವಿದ್ಯಾರ್ಥಿಗಳಿಗೆ ಅಂಬೇಡ್ಕರ್ ಮತ್ತು ಸಂವಿಧಾನದ ಬಗ್ಗೆ ಅರಿವು ಮೂಡಿಸಬೇಕಾಗಿದೆ ಎಂದು ಅಭಿಪ್ರಾಯಪಟ್ಟರು.

ಈ ಸಂದರ್ಭದಲ್ಲಿ ಮಾತನಾಡಿದ ಮೈಸೂರು ಮಹಾನಗರ ಪಾಲಿಕೆ ಪರಿಸರ ಇಂಜಿನಿಯರ್ ಮೈತ್ರಿ, ಇಂದಿನ ಯುವಕರು ಅಗತ್ಯಕ್ಕಿಂತ ಹೆಚ್ಚು ಸಾಮಾಜಿಕ ಮಾಧ್ಯಮವನ್ನು ಉಪಯೋಗ ಮಾಡುತ್ತಿರುವುದು ಆತಂಕಕಾರಿ ಸಂಗತಿಯಾಗಿದೆ. ಯುವಜನತೆ ಇಂತಹ ಬೀದಿ ನಾಟಕಗಳನ್ನು ಗಮನದಿಂದ ವೀಕ್ಷಿಸಿ, ಅದರ ಹಿನ್ನೆಲೆ ಮತ್ತು ಸಂದೇಶಗಳನ್ನು ಅರ್ಥಮಾಡಿಕೊಂಡು ತಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು. ಕಾರ್ಯಕ್ರಮದಲ್ಲಿ ರಂಗಾಯಣ ನಿರ್ದೇಶಕ ಸತೀಶ್ ತಿಪಟೂರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನ ಸ್ವಾಮಿ, ಸಹಾಯಕ ನಿರ್ದೇಶಕ ಡಾ. ಎಂ.ಡಿ. ಸುದರ್ಶನ್ ಸೇರಿ ಮತ್ತಿತರರು ಉಪಸ್ಥಿತರಿದ್ದರು.

# ಇಂದು ಬಾಬುಜೀ ಒಕ್ಕೂಟದ ಸಭೆ



ಚಾಮರಾಜನಗರ: ಡಾ.ಬಾಬು ಜಗಜೀವನರಾಮ್ ಸಂಘಟನೆಗಳ ಒಕ್ಕೂಟದಿಂದ ಜ.11 ರಂದು ನಗರದಲ್ಲಿ ಸಭೆ ಕರೆಯಲಾಗಿದೆ. ಸಮುದಾಯದ ಮುಖಂಡರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಿಕೊಡಬೇಕು ಎಂದು ಸಂಘಟನೆಯ ಉಅಗೌರವಾಧ್ಯಕ್ಷ ಬಸವನಪುರ ರಾಜಶೇಖರ್ ಮನವಿ ಮಾಡಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿ, ಅಂದು ಬೆಳಗ್ಗೆ 11 ಗಂಟೆಗೆ ನಗರದ ಡಾ.ಬಿ.ಆರ್.ಅಂ ಬೇಡ್ಕರ್ ಭವನದಲ್ಲಿ ಸಭೆ ನಡೆಯಲಿದ್ದು ಸಭೆಯಲ್ಲಿ ಒಕ್ಕೂಟಕ್ಕೆ ಪೂರ್ಣ ಪ್ರಮಾಣದಲ್ಲಿ ಪದಾಧಿಕಾರಿಗಳನ್ನು ನೇಮಕ ಮಾಡಲಾಗುವುದು. ಈ ಸಭೆಗೆ ಜಿಲ್ಲೆಯ ಎಲ್ಲ ಗ್ರಾಮಗಳಿಂದ ಸಮುದಾಯದ ಮುಖಂಡರು ಆಗಮಿಸುವ ಮೂಲಕ ಸಭೆಯನ್ನು ಯಶಸ್ವಿಗೊಳಿಸಿ. ಪದಾಧಿಕಾರಿಗಳನ್ನು ನೇಮಕ ಮಾಡಲು ಸಹಕಾರ ನೀಡಬೇಕು ಎಂದು ಮನವಿ ಮಾಡಿದರು.

ಆರುಂಧತಿ ಕೋ-ಅಪರೇಟಿವ್ ಸೊಸೈಟಿ ಅಧ್ಯಕ್ಷ. ಅರಕಲವಾಡಿ ಜವರಯ್ಯ ಮಾತನಾಡಿ, ಮಾದಿಗ ಸಮುದಾಯದ ಸರ್ವತೋಮುಖ ಅಭಿವೃದ್ಧಿಗಾಗಿ

ಡಾ.ಬಾಬು ಜಗಜೀವನರಾಮ್ ಸಂಘಟನೆಗಳ ಒಕ್ಕೂಟ ಸ್ಥಾಪನೆ ಮಾಡಲಾಗಿದೆ. ಆಗಾಗಿ ಜ.11 ರಂದು ಡಾ.ಬಾಬು ಜಗಜೀವನರಾಮ್ ಸಂಘಟನೆಗಳ ಒಕ್ಕೂಟದ ಸಭೆಗೆ ಜಿಲ್ಲೆಯ ಎಲ್ಲ ಗ್ರಾಮಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕು ಎಂದು ಕೋರಿದ್ದಾರೆ. ಹೆಚ್.ಹೆಚ್. ನಾಗರಾಜು ಮಾತನಾಡಿದರು. ಪತ್ರಿಕಾಗೋಷ್ಠಿಯಲ್ಲಿ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಶಿವಕುಮಾರ್, ಖಜಾಂಜಿ ದ್ವಾರಕಿ ಬಸವರಾಜು, ಮುಖಂಡರಾದ ಹಸಗೂಳಿ ಸಿದ್ದಯ್ಯ, ಕೆಸ್ತೂರುಮರಪ್ಪ, ಚಾಮರಾಜು ಹಾಜರಿ ರಾಜಶೇಖರ ಮಾತನಾಡಿದರು.

# ಸಿದ್ದರಾಮಯ್ಯ ಕಳಂಕಿತ ಸಿಎಂ : ವಕ್ತಾರ ಮೋಹನ್



ಮೈಸೂರು: ಭೂಮಿ ಇಲ್ಲದವರಿಗೆ ಭೂಮಿ ನೀಡಿದ ದೇವರಾಜ ಅರಸು ಅವರಿಗೆ 14ನಿವೇಶನ ವಂಚಿಸಿದ ಸಿದ್ದರಾಮಯ್ಯರ ಹೋಲಿಕೆ ಸರಿಯಲ್ಲ. ಸಿದ್ದರಾಮಯ್ಯ ನಿಜಕ್ಕೂ ಕಳಂಕಿತ ಮುಖ್ಯಮಂತ್ರಿ ಆಗಿರುವರು ಎಂದು ಎಂದು ಬಿಜೆಪಿ ನಗರ ವಕ್ತಾರ ಮೋಹನ್ ಆರೋಪಿಸಿದರು.

ನಗರದ ಬಿಜೆಪಿ ಕಚೇರಿಯಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಸಿದ್ದರಾಮಯ್ಯ ಅವರು ದಾಖಲೆ ಮಾಡಿಲ್ಲ. ಬದಲಾಗಿ ಕಳಂಕ ಹೊತ್ತಿರುವ ಮುಖ್ಯಮಂತ್ರಿಯಾಗಿದ್ದಾರೆ. ಎಲ್ಲಾ ಪತ್ರಿಕೆಗಳಲ್ಲಿ ಪ್ರಚಾರಕ್ಕಾಗಿ ಜಾಹಿರಾತು ನೀಡಿದ್ದಾರೆ. ಆದರೆ, ನಿಜವಾಗಿಯೂ ದೇವರಾಜ ಅರಸು ಅವರು ಸುಧೀರ್ಘವಾಗಿ ಮುಖ್ಯಮಂತ್ರಿಯಾಗಿ ದಾಖಲೆ ಮಾಡಿದರೆ, ಸಿದ್ದರಾಮಯ್ಯ ಎರಡು ಬಾರಿ ಮುಖ್ಯಮಂತ್ರಿಯಾಗಿ ಮುಡಾದಿಂದ 14 ಸೈಟ್‌ಗಳನ್ನು ಪಡೆದುಕೊಂಡು ಕಳಂಕ ಹೊತ್ತಿದ್ದಾರೆಂದರು.

ಕಾಂಗ್ರೆಸ್ ವಕ್ತಾರ ಲಕ್ಷ್ಮಣ್ ಬಿಜೆಪಿ ಸಂಸದರು ಸುಳ್ಳು ಹೇಳುತ್ತಾರೆ ಎಂದು ಹೇಳಿಕೆ ನೀಡಿದ್ದಾರೆ. ಆದರೆ, 11 ವರ್ಷದಿಂದ ಬಿಜೆಪಿಯ ಸಂಸದರು ಸಾಕಷ್ಟು ಕೆಲಸ ಮಾಡಿದ್ದಾರೆ. ಯೂನಿಟಿ ಮಾಲ್ ತಡೆಯಾಜ್ಞೆಗೆ ಡಿಸಿ, ಜಿಲ್ಲಾಡಳಿತದ ಯಡವಟ್ಟಿನಿಂದ ಆಗಿರುವುದು. ವಿವಾದವಿಲ್ಲದ ಸ್ಥಳವನ್ನು ನಿಗದಿ ಮಾಡಬೇಕಿರುವುದು ಜಿಲ್ಲಾಡಳಿತದ ಕರ್ತವ್ಯ. ಈ ಹಿನ್ನೆಲೆಯಲ್ಲಿ ಭೂಮಿ ಸಂಬಂಧಿಸಿದಂತೆ ತಡೆಯಾಜ್ಞೆ ತಂದಿದ್ದಾರೆ. ಕಾಂಗ್ರೆಸ್ ನಾಯಕಿ ಲಕ್ಷ್ಮಿ ಹೆಬ್ಬಾಳ್ಕರ್ ಗೃಹಲಕ್ಷ್ಮಿ ಹಣ ಬಿಡುಗಡೆ ಅಂಕಿ ಅಂಶದಲ್ಲಿ ಸುಳ್ಳು ಮಾಹಿತಿ ನೀಡಿ ಕ್ಷಮೆ ಕೋರಿದ್ದಾರೆ. ಇದ್ದರಿಂದ ಐದು ಸಾವಿರ ಕೋಟಿ ವಂಚನೆಯಾಗಿದೆ. ಈ ಹಿಂದೆ ವಾಲ್ಮೀಕಿ ಹಗರಣದಿಂದ ನಾಗೇಂದ್ರ ಜೈಲಿಗೆ ಹೋಗಿದ್ದಾರೆ ಎಂದು ಕಿಡಿಕಾರಿದರು. ಮುಡಾ ಹೆಸರು ಬದಲಾವಣೆಯಾಗಿದೆ. ಅದರೆ ಅದೇ ರೀತಿ ಕೆಲಸ ನಡೆಯುತ್ತಿದೆ. 2021ರಲ್ಲಿ ವಿವಿಧ ಸಂಘ ಸಂಸ್ಥೆಗಳು ಸಿಎ ನಿವೇಶನಕ್ಕೆ ಅರ್ಜಿ ಸಲ್ಲಿಸಿದರು. ಆದರೆ, ಇತ್ತೀಚೆಗೆ ಮೈಸೂರು ಅಭಿವೃದ್ಧಿ ಪ್ರಾಧಿಕಾರದ ಸಭೆಯಲ್ಲಿ ಹೊಸ ಅರ್ಜಿಗೆ ಆಹ್ವಾನ ಮಾಡಲಾಗಿದೆ. ಇದನ್ನು ಪ್ರಶ್ನಿಸಿದರೆ, ಈಗ ನಿವೇಶನಗಳ ಬೆಲೆ ಏರಿಕೆಯಾಗಿದೆ ಎಂದು ಉತ್ತರ ನೀಡುತ್ತಿದ್ದಾರೆ. ಮರು ಅರ್ಜಿ ಆಹ್ವಾನವನ್ನು ಹಿಂಪಡೆದು ಅರ್ಹತೆಯ ಆಧಾರದ ಮೇಲೆ ಸಂಸ್ಥೆಗಳಿಗೆ ಸಿಎ ನಿವೇಶನ ನೀಡಬೇಕು ಎಂದು ಒತ್ತಾಯಿಸಿದರು. ಕಳೆದ 40 ದಿನಗಳಿಂದ ಸರ್ವರ್ ಸಮಸ್ಯೆಯಿಂದ ಜಿಲ್ಲೆಯಲ್ಲಿ ಇ-ಖಾತೆ ಆಗಿಲ್ಲ. ಯಾವುದೇ ಅಧಿಕಾರಿಗಳ ಬಳಿ ಕೇಳಿದ್ದಾಗ ಸರ್ವರ್ ಡೌನ್ ಎಂದು ಹೇಳಿತ್ತಾರೆ. ಸರ್ವರ್ ಇದ್ದಾಗ ಅಧಿಕಾರಿ ಇರುವುದಿಲ್ಲ. ಬಹುತೇಕ ಅಧಿಕಾರಿಗಳು ಕಚೇರಿ ಅವಧಿಯಲ್ಲಿ ಇರುವುದಿಲ್ಲ. ಇದನ್ನು ಪ್ರಶ್ನಿಸಿದರೆ, ಫೀಲ್ಡ್‌ನಲ್ಲಿ ಇದ್ದಾರೆ ಎಂಬ ಉತ್ತರ ನೀಡುತ್ತಿದ್ದಾರೆ. ಆದರೆ ಸಾರ್ವಜನಿಕರು ಇ-ಖಾತೆಗಾಗಿ ನಿತ್ಯವೂ ಅಲೆದಾಡು ಸ್ಥಿತಿ ನಿರ್ಮಾಣವಾಗಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಸೋಮ್ ಸುಂದರ್, ಸಂತೋಷ್ ಕುಮಾರ್, ರುದ್ರಮೂರ್ತಿ, ಮಹೇಶ್ ರಾಜೇ ಅರಸ್ ಉಪಸ್ಥಿತರಿದ್ದರು.

# ಗ್ರಾಮೀಣ ಮಕ್ಕಳಲ್ಲಿ ಅತ್ಮವಿಶ್ವಾಸ ಹೆಚ್ಚು

## ಡಾ.ಸಿ.ಸೋಮಶೇಖರ್ ಅಭಿಮತ । ಪ್ರಶಸ್ತಿ- ಪುರಸ್ಕಾರ ಪ್ರದಾನ ಸಮಾರಂಭ



ಚಾಮರಾಜನಗರ, ಹಳ್ಳಿ ಮಕ್ಕಳಲ್ಲಿ ಪ್ರತಿಭಾವಂತರು ಹೆಚ್ಚು, ಅಲ್ಲದೇ ಸಾಧಿಸಬೇಕೆಂಬ ಛಲ ಮತ್ತು ಅತ್ಮವಿಶ್ವಾಸ ಹೆಚ್ಚಿರುತ್ತದೆ. ಇಂಥ ಮಕ್ಕಳನ್ನು ಪ್ರೋತ್ಸಾಹಿಸುವ ಕೆಲಸವಾಗಬೇಕಾಗಿದೆ ಎಂದು ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ. ಸಿ. ಸೋಮಶೇಖರ್ ತಿಳಿಸಿದರು.

ನಗರದ ಡಾ. ರಾಜಕುಮಾರ್ ಕಲಾಮಂದಿರದಲ್ಲಿ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಜಿಲ್ಲಾ ಘಟಕದ ವತಿಯಿಂದ ನಡೆದ ಕೆ.ಪಿ. ಚಿಕ್ಕವೀರಯ್ಯ ಶಿಕ್ಷಕ ಪ್ರಶಸ್ತಿ ಹಾಗೂ ಕೆ.ಸಿ. ಶಿವಪ್ಪ ಪ್ರತಿಭಾ ಪುರಸ್ಕಾರ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಇಬ್ಬರು ಸಾಧಕರಾದ ಶಿಕ್ಷಕ ಎಂ. ರಾಜು, ಹಾಗೂ ಎಸ್‌ಎಸ್‌ಎಲ್‌ಸಿಯಲ್ಲಿ ಕನ್ನಡದಲ್ಲಿ 100ಕ್ಕೆ 100 ಅಂಕ ಪಡೆದುಕೊಂಡಿರುವ ಮಹಾಲಕ್ಷ್ಮಿ ಅವರನ್ನು ಸನ್ಮಾನಿಸಿ ಅವರು ಮಾತನಾಡಿದರು.

ಹಳ್ಳಿಗಾಡಿನ ಹಾಗೂ ಗ್ರಾಮೀನ ಸೊಗಡಿನಲ್ಲಿಯೇ ಸಾಧಿಸಬೇಕೆಂಬ ಛಲ ಹುಟ್ಟುತ್ತದೆ. ಆ ಮಣ್ಣಿನ ಗುಣವೇ ಹಾಗೆ ಇರುತ್ತದೆ. ಪಟ್ಟಣದಲ್ಲಿರುವ ಮಕ್ಕಳಿಗೆ ಪ್ರಾಥಮಿಕ ಜ್ಞಾನ ಕೊರತೆ ಇರುತ್ತದೆ. ಆದರೆ. ಹಳ್ಳೀಯ ಮಕ್ಕಳಿಗೆ ಪ್ರಾಥಮಿಕ ಜ್ಞಾನದ ಜೊತೆಗೆ ಸಾಮಾನ್ಯ ತಿಳುವಳಿಕೆ ಹೆಚ್ಚಿರುತ್ತದೆ. ಅದರೆ ನಮ್ಮಲ್ಲಿರುವ ಕೀಳರಿಮೆಯನ್ನು ಬಿಟ್ಟು ಮುನ್ನಡೆಯಾದರೆ ಪಟ್ಟಣದ ಮಕ್ಕಳು ಯಾವುದೇ ಕಾರಣಕ್ಕೂ ನಮ್ಮ ಹಳ್ಳಿ ಮಕ್ಕಳ ಮುಂದೆ ನಿಲ್ಲುವುದಿಲ್ಲ. ಇಂಥ ಅನೇಕ ನಿರ್ದಶನಗಳು ನಮ್ಮ ಮುಂದೆ ಇವೆ. ಕನ್ನಡದಲ್ಲಿ 100ಕ್ಕೆ 100 ರಷ್ಟು ಅಂಕ ಪಡೆದುಕೊಳ್ಳುವುದು ಸುಲಭದ ಮಾತಲ್ಲ. ಆದರೆ, ಇಂಥ ಸಾಧನೆ ಮಾಡಿರುವ ಮಕ್ಕಳು ಸರ್ಕಾರಿ ಶಾಲೆಯಲ್ಲಿ ಓದಿದವರೇ ಹೆಚ್ಚು. . ಅವರಿಗೆ ಯಾವುದೇ ಟ್ಯೂಷನ್ ಇಲ್ಲ. ತರಬೇತಿ ಇರುವುದಿಲ್ಲ. ಅಂಥ ಮಕ್ಕಳಲ್ಲಿ ಮನೋಬಲ ಹೆಚ್ಚಿರುತ್ತದೆ. ಸಾಧಿಸಬೇಕೆಂಬ ಛಲ ಇರುತ್ತದೆ. ಇಂಥ ಮಕ್ಕಳನ್ನು ಪ್ರೋತ್ಸಾಹಿಸುವ ಕೆಲಸವನ್ನು ಕೆ.ಸಿ. ಶಿವಪ್ಪ ಅವರು ಮಾಡುತ್ತಿದ್ದಾರೆ ಎಂದು ಪ್ರಶಂಸೆ ವ್ಯಕ್ತಪಡಿಸಿದರು.

ತಂದೆಯ ಹೆಸರಿನಲ್ಲಿ ಕೆ.ಪಿ. ಚಿಕ್ಕವೀರಯ್ಯ ಶಿಕ್ಷಕ ಪ್ರಶಸ್ತಿಯನ್ನು ಯಳಂದೂರಿನ ಕೃಷ್ಣಾಪುರ ಸರ್ಕಾರಿ ಶಾಲೆಯ ಶಿಕ್ಷಕ ಎಂ.ರಾಜು ಅವರಿಗೆ ನೀಡಿರುವುದು ಹೆಮ್ಮೆ ಎನ್ನಿಸಿದೆ. ಚಿಕ್ಕವೀರಯ್ಯ ಅವರು ಶಿಕ್ಷಕರಾಗಿ ಉತ್ತಮ ಸೇವೆ ಸಲ್ಲಿಸುತ್ತಿದ್ದರು. ಅವರ ಶೇಷ್ಟ ವೃತ್ತಿಗೆ ಗೌರವ ಹೆಚ್ಚಾಗುತ್ತದೆ. ಇಂಥ ಶಿಕ್ಷಕರು ಸಮಾಜ ಆಸ್ತಿಗಳಾಗುತ್ತಿದ್ದಾರೆ. ಉತ್ತಮ ಸಮಾಜ ನಿರ್ಮಾಣ ಮಾಡಲು ಇಂಥ ಶಿಕ್ಷಕರ ಸೇವೆಯನ್ನು ಪರಿಗಣಿಸಿ, ಸನ್ಮಾನಿಸುವುದು ಉತ್ತಮವಾಗಿದೆ ಎಂದರು.

ಮೈಸೂರಿನ ಕುಂದೂರು ಮಠಾಧ್ಯಕ್ಷರಾದ ಡಾ. ಶರತ್‌ಚಂದ್ರಸ್ವಾಮೀಜಿ ಸಾನ್ನಿಧ್ಯ ವಹಿಸಿ ಮಾತನಾಡಿ, ಇದೊಂದು ಅಪರೂಪದ ಸನ್ನಿವೇಶಕ್ಕೆ ನಾವೆಲ್ಲರು ಸಾಕ್ಷಿಯಾಗಿದ್ದೇವೆ. ಶಿಕ್ಷಣದಿಂದ ಮಾತ್ರ ಪ್ರಗತಿ ಹೊಂದಲು ಸಾಧ್ಯವಿದೆ. ಪ್ರಾಣಿಗಳಿಂದ ಅತಿ ಹೆಚ್ಚು ದಡ್ಡ ಮನುಷ್ಯ ಧೈರ್ಯ ,ಶೌರ್ಯ ಇತರೇ ಎಲ್ಲಾ ವಿಚಾರಗಳಲ್ಲಿ ಪ್ರಾಣಿಗಳಿಂದ ಬಹಳ ಹಿಂದೆ ಇದ್ದಾನೆ. ಆದರೆ, ಆತನ ಮೆದುಳಿನಲ್ಲಿರುವ ಬುದ್ಧಿವಂತಿಕೆಯನ್ನು ಬೆಳೆಸಿಕೊಂಡು ವಿಶ್ವವನ್ನೇ ಹಾಳುವಷ್ಟು ಮಟ್ಟಿಗೆ ಬಂದಿರುವುದು ವಿಶೇಷ. ಮೆದುಳು ಬೆಳೆಯಲು ಶಿಕ್ಷಣ ಕಾರಣ. ಹೀಗಾಗಿ ಗುಣಮಟ್ಟದ ಶಿಕ್ಷಣ ದೊರೆತಾಗ ಮಾನವ ಮಾನವೀಯ ಮೌಲ್ಯಗಳನ್ನು ಬೆಳೆಸಿಕೊಂಡು ಸಮಾಜದ ಪ್ರಗತಿಗೆ ಕಾರಣವಾಗುತ್ತಾನೆ ಎಂದರು.

ಶರಣ ಸಾಹಿತ್ಯ ಪರಿಷತ್‌ನ ಅಧ್ಯಕ್ಷ ಬಿ.ಕೆ. ರವಿಕುಮಾರ್ ಪ್ರಸ್ತಾವಿಕವಾಗಿ ಮಾತನಾಡಿ, ಶರಣ ಸಾಹಿತ್ಯ ಪರಿಷತ್ ಸಹಯೋಗದಲ್ಲಿ ನಡೆಯುತ್ತಿರುವ ಈ ದತ್ತಿ ಕಾರ್ಯಕ್ರಮವು ಬಹಳ ಉಪಯುಕ್ತತೆಯನ್ನು ಹೊಂದಿದೆ. ಉತ್ತಮ ಶಿಕ್ಷಕರು ಹಾಗೂ ಪ್ರತಿಭಾವಂತ ವಿದ್ಯಾರ್ಥಿಯನ್ನು ಅಭಿನಂದಿಸುವ ಜೊತೆಗೆ ಪ್ರೊ. ಎಂ. ಕೃಷೇಗೌಡರು ಮತ್ತು ವಿದುಷಿ ಶುಭಾ ರಾಘವೇಂದ್ರ ಅವರು ಮುದ್ದುರಾಮ ? ಒಂದು ಪರಿಮಳದ ಪಯಣ ಜುಗಳ್ ಬಂದಿ ವಿಶೇಷವಾಗಿದೆ. ಕಾರ್ಯಕ್ರಮದಲ್ಲಿ ಭಾಗವಹಿಸುವಿರುವ ಎಲ್ಲರಿಗೂ ಸಹ ಚಿರಋಣಿಯಾಗಿದ್ದೇನೆ. ನಾನು ಅಧ್ಯಕ್ಷರಾದ ನಂತರ ನಡೆಯುತ್ತಿರುವ ಮೊದಲ ಕಾರ್ಯಕ್ರಮವು ಬಹಳ ಯಶಸ್ವಿಯಾಗಿದೆ. ಇದಕ್ಕೆಲ್ಲಾ ಕಾರಣ ತಾವುಗಳು. ನಿಮ್ಮೆಲ್ಲರ ಸಹಕಾರದಿಂದ ಮುಂದಿನ ದಿನಗಳಲ್ಲಿ ಪರಿಷತ್ ಅನ್ನು ಉನ್ನತ ಮಟ್ಟಕ್ಕೆ ಕೊಂಡೊಯ್ಯೋಣ ಎಂದರು. ಕಾರ್ಯಕ್ರಮದಲ್ಲಿ ಕೆಪಿ. ಚಿಕ್ಕವೀರಯ್ಯ ಶಿಕ್ಷಕ ಪ್ರಶಸ್ತಿಯನ್ನು ಯಳಂದೂರಿನ ಕೃಷ್ಣಾ ಪುರದ ಶಾಲೆಯ ಎಂ.ರಾಜು ಅವರಿಗೆ ಹಾಗೂ ಕೆ.ಪಿ. ಶಿವಪ್ಪ ಪ್ರತಿಭಾ ಪುರಸ್ಕಾರ ಪ್ರಶಸ್ತಿಯನ್ನು ಗುಂಡ್ಲುಪೇಟೆ ತಾಲೂಕಿನ ದೊಡ್ಡತುಪ್ಪೂರು ಗ್ರಾಮದ ಮಹಾಲಕ್ಷ್ಮಿ ಅವರಿಗೆ ಗಣ್ಯ ನೀಡಿ ಅಭಿನಂದಿಸಿದರು.

ನಂತರ ಖ್ಯಾತ ವಾಗ್ಮಿ ಪ್ರೋ. ಎಂ. ಕೃಷ್ಣೇಗೌಡ ಹಾಗೂ ವಿದುಷಿ ಶುಭಾ ರಾಘವೇಂದ್ರ ಅವರು ಮುದ್ದುರಾಮ- ಒಂದು ಪರಿಮಳದ ಪಯಣ ಕುರಿತು ಗಾಯನ ಮತ್ತು ವ್ಯಾಖ್ಯಾನ ಬಹಳ ಯಶಸ್ವಿಯಾಗಿ ನಡೆಯಿತು. ಸಮಾರಂಭದಲ್ಲಿ ದತ್ತಿ ಪ್ರಯೋಜಕ ಕೆ.ಸಿ. ಶಿವಪ್ಪ, ಪ್ರಮತಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಎಚ್.ವಿ.ರಾಜೀವ್, ಮುದ್ದರಾಮ ಪ್ರಕಾಶನದ ತಳವಾರ್, ಕಾರ್ಯದರ್ಶಿ ಬಿ.ಎಸ್. ವಿನಯ್, ಸಿದ್ದಮಲ್ಲಪ್ಪ, ವೀರಭದ್ರಸ್ವಾಮಿ, ಹೊನ್ನಮೇಟಿ ಸುಂದರ್, ಆರ್.ಎಸ್. ಲಿಂಗರಾಜು, ಬಸವರಾಜಸ್ವಾಮಿ, ಕದಳಿ ಮಹಿಳಾ ವೇದಿಕೆಯ ಅಧ್ಯಕ್ಷೆ ವಸಂತಮ್ಮ, ಪದಾಧಿಕಾರಿಗಳು, ವಿವಿಧ ಸಂಘ ಸಂಸ್ಥೆಗಳ ಮುಖಂಡರು ಉಪಸ್ಥಿತರಿದ್ದರು

# ಇಂದು ಸನ್ಮಾನ, ದಿನದರ್ಶಿಕೆ ಬಿಡುಗಡೆ ಸಮಾರಂಭ


ಮೈಸೂರು: ಮೈಸೂರು ಜಿಲ್ಲಾ ಉಪ್ಪಾರ ಸಂಘದ ವತಿಯಿಂದ ಜ. 11ರ ಭಾನುವಾರ ಬೆಳಗ್ಗೆ 10.30 ಕ್ಕೆ ನಗರದ ಗೋವರ್ಧನ್ ಹೋಟೆಲ್ ಸಭಾಂಗಣದಲ್ಲಿ ವಿವಿಧ ಕ್ಷೇತ್ರಗಳ ಸಾಧಕರು, ಸಮಾಜ ಸೇವಕರಿಗೆ ಸನ್ಮಾನ ಹಾಗೂ 2026ನೇ ಸಾಲಿನ ಸಂಘದ ದಿನದರ್ಶಿಕೆ ಬಿಡುಗಡೆ ಸಮಾರಂಭವನ್ನು ಹಮ್ಮಿಕೊಳ್ಳಲಾಗಿದೆ ಎಂದು ಶ್ರೀ ಭಗೀರಥ ಸಮಾಜ ಸೇವಾ ಪ್ರಶಸ್ತಿ ಪುರಸ್ಕೃತ ಕೆ.ಟಿ.ಮೋಹನ್ ಕುಮಾರ್ ತಿಳಿಸಿದರು.

ನಗರದ ಜಿಲ್ಲಾ ಪತ್ರಕರ್ತರ ಸಂಘದ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ ಈ ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಹೊಸದುರ್ಗದ ಶ್ರೀ ಭಗೀರಥ ಪೀಠದ ಶ್ರೀ ಶ್ರೀ ಶ್ರೀ ಡಾ.ಪುರುಷೋತ್ತಮಾನಂದ ಪುರಿ ಮಹಾ ಸ್ವಾಮೀಜಿ ರವರು ವಹಿಸಲಿದ್ದಾರೆ.ಸಮಾರಂಭದ ಉದ್ಘಾಟನೆಯನ್ನು ಮಾಜಿ ಸಚಿವರು, ಎಂ ಎಸ್ ಐ ಎಲ್ ನ ಅಧ್ಯಕ್ಷರು, ಕರ್ನಾಟಕ ರಾಜ್ಯ ಉಪ್ಪಾರ ಸಂಘದ ಅಧ್ಯಕ್ಷರು ಹಾಗೂ ಚಾಮರಾಜನಗರ ವಿಧಾನಸಭಾ ಕ್ಷೇತ್ರದ ಶಾಸಕ ಸಿ.ಪುಟ್ಟರಂಗಶೆಟ್ಟಿ ನೆರವೇರಿಸುವರು. ಶ್ರೀ ಭಗೀರಥ ಮಹರ್ಷಿಯವರ ಭಾವಚಿತ್ರಕ್ಕೆ ಪುಷ್ಪಾರ್ಚನೆಯನ್ನು ಕರ್ನಾಟಕ ಉಪ್ಪಾರ ಅಭಿವೃದ್ಧಿ ನಿಗಮದ ಅಧ್ಯಕ್ಷ ಭರಮಣ್ಣ ಲಕ್ಷ್ಮಣ ಉಪ್ಪಾರ ಹಾಗೂ ರಾಜ್ಯ ಉಪ್ಪಾರ ಸಂಘದ ಪ್ರಧಾನ ಕಾರ್ಯದರ್ಶಿ ಯು.ವೆಂಕೋಬ ಅವರುಗಳು ನೆರವೇರಿಸುವರು.

ಮೈಸೂರು ಜಿಲ್ಲಾ ಉಪ್ಪಾರ ಸಂಘದ 2026ನೇ ಸಾಲಿನ ದಿನದರ್ಶಿಕೆಯನ್ನು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಎಚ್.ಎನ್.ವಿಜಯ್, ಕೆಎಂಎಫ್ ನಿರ್ದೇಶಕಿ ಶೀಲಾ ಪುಟ್ಟರಂಗಶೆಟ್ಟಿ ಹಾಗೂ ಮಾಜಿ ಉಪಮೇಯರ್ ಡಾ.ರೂಪ ಯೋಗೇಶ್ ಬಾಬು ರವರುಗಳು ಬಿಡುಗಡೆ ಮಾಡುವರು. ಸಮಾರಂಭದ ಅಧ್ಯಕ್ಷತೆಯನ್ನು ಮೈಸೂರು ಜಿಲ್ಲಾ ಉಪ್ಪಾರ ಸಂಘದ ಅಧ್ಯಕ್ಷ ನಾಗರಾಜು ಕರಳಪುರ ವಹಿಸಲಿದ್ದಾರೆ ಎಂದು ತಿಳಿಸಿದರು. ಸಂವಿಧಾನ ಮತ್ತು ಸಾಮಾಜಿಕ ಸಮೀಕ್ಷೆಗಳ ಬಗ್ಗೆ ಜಾಗೃತಿ ಉಪನ್ಯಾಸವನ್ನು ಜಿಲ್ಲಾ ಪಂಚಾಯಿತಿಯ ನಿವೃತ್ತ ಉಪ ಕಾರ್ಯದರ್ಶಿ ಕೆ.ಎಂ.ಶಿವಕುಮಾರ ಸ್ವಾಮಿ ನೀಡುವರು. ಸುದ್ದಿಗೋಷ್ಠಿಯಲ್ಲಿ ಮೈಸೂರು ಜಿಲ್ಲಾ ಉಪ್ಪಾರ ಸಂಘದ ಗೌರವಾಧ್ಯಕ್ಷ ಕನಕನಗರ ಮಹದೇವ್, ಪ್ರಧಾನ ಕಾರ್ಯದರ್ಶಿ ಜೆ.ಕೃಷ್ಣ, ಸಂಘಟನಾ ಕಾರ್ಯದರ್ಶಿ ಆರ್.ವಿನೋದ್ ಉಪ್ಪಾರ್, ಕಾರ್ಯದರ್ಶಿ ಮಲ್ಲೇಶ್, ಮಹಿಳಾ ಘಟಕದ ಪ್ರಧಾನ ಕಾರ್ಯದರ್ಶಿ ವಿಜಯ ಕುಮಾರಿ, ಪದಾಧಿಕಾರಿಗಳಾದ ಮಹೇಶ್, ವೆಂಕಟೇಶ್ ಉಪಸ್ಥಿತರಿದ್ದರು.



# ಕೇರಳ ನಡೆ ಖಂಡನೀಯ



ಮೈಸೂರು: ಕೇರಳದಲ್ಲಿ ಆಡಳಿತ ನಡೆಸುತ್ತಿರುವ ಕಮ್ಯುನಿಸ್ಟ್ ಸರ್ಕಾರ ಕಾಸರಗೋಡು ಕನ್ನಡ ಶಾಲೆಗಳು ಹಾಗೂ ಕಾಲೇಜುಗಳಲ್ಲಿ ಮಲೆಯಾಳಂ ಕಡ್ಡಾಯಗೊಳಿಸಿರುವುದು ಖಂಡನೀಯವಾಗಿದೆ ಎಂದು ನಗರ ಜಿಲ್ಲಾ ಕಾಂಗ್ರೆಸ್ ಸಮಿತಿ ವಕ್ತಾರ ಎಸ್.ರಾಜೇಶ್ ಕಿಡಿಕಾರಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಕಾಸರಗೋಡು ಜಿಲ್ಲೆಯ 180 ಶಾಲಾ ಕಾಲೇಜುಗಳಲ್ಲಿ ಸುಮಾರು 80 ಸಾವಿರ ಕನ್ನಡ ಭಾಷಿಗ ವಿದ್ಯಾರ್ಥಿಗಳಿದ್ದಾರೆ. ಹೀಗಾಗಿ ಇವರ ಹಿತ ಕಾಪಾಡುವುದು ರಾಷ್ಟ್ರಪತಿಗಳ ಕರ್ತವ್ಯವಾಗಿದೆ. ಅಲ್ಲಿನ ಸರ್ಕಾರದ ಕನ್ನಡ ಭಾಷಾ ವಿರೋಧೀ ನೀತಿ ಸಂವಿಧಾನ ವಿರೋಧಿಯಾಗಿದೆ. ರಾಷ್ಟ್ರಪತಿಗಳು ಕೂಡಲೇ ಮಧ್ಯಪ್ರವೇಶಿಸಿ ಅಲ್ಲಿನ ಸಮಸ್ಯೆ ಬಗೆಹರಿಸಬೇಕು. ಮಾತೃಭಾಷೆ ಕಲಿಯುವುದು ಪ್ರತಿಯೊಬ್ಬರ ಹಕ್ಕಾಗಿದೆ. ಶಾಲೆಗಳಲ್ಲಿ ಮಲೆಯಾಳ ಹೇರಿಕೆ ಕಡ್ಡಾಯಗೊಳಿಸಿರುವುದು ಭಾಷಾ ಸ್ವಾತಂತ್ರ ?ಯದ ಮೇಲಿನ ಪ್ರಹಾರವಾಗಿದೆ. ಇದು ದಬ್ಬಾಳಿಕೆಯಾಗಿದ್ದು, ಖಂಡನೀಯವಾಗಿದೆ ಎಂದರು.

ಇದಲ್ಲದೆ ಮನರೇಗಾ ಹೆಸರು ಬದಲಾಯಿಸಿರುವುದು ಸರಿಯಲ್ಲ. ಈಗಾಗಲೇ ಕೇಂದ್ರದಲ್ಲಿನ ಬಿಜೆಪಿ ಸರ್ಕಾರ ಜಿಎಸ್‌ಟಿ ತೆರಿಗೆ ಪಾಲಿನಲ್ಲಿ ರಾಜ್ಯಕ್ಕೆ ಅನ್ಯಾಯ ಮಾಡಿದೆ. ಇದರೊಡನೆ ಗ್ರಾಮೀಣ ಭಾಗದ ಜನರ ಕೂಲಿ ಕೆಲಸವನ್ನು ಅದಾನಿ, ಅಂಬಾನಿಗರಿಗೆ ನೀಡುವ ಸಂಚು ಕೇಂದ್ರ ಸರ್ಕಾರ ರೂಪಿಸುತ್ತಿದೆ. ದಲಿತರು, ರೈತರು, ಮಹಿಳೆಯರನ್ನು ಮನರೇಗಾದಿಂದ ಕೈಬಿಡುವ ಹಾಗೂ ಮಹಾತ್ಮಾ ಗಾಂಧಿ ಹೆಸರನ್ನು ಅಳಿಸಿಹಾಕುವ ಹುನ್ನಾರ ಕೇಂದ್ರದ್ದಾಗಿದೆ ಎಂದು ದೂರಿದರು. ಮೈಸೂರು ಬಸವಣ್ಣ, ಸಯ್ಯದ್ ಫಾರೂಕ್, ನಂಜುಂಡಸ್ವಾಮಿ ಇದ್ದರು.

# ಲಯನ್ಸ್ ಇತರರಿಗೆ ಮಾದರಿ



ಮೈಸೂರು: ಲಯನ್ಸ್ ಸೇವಾ ಕಾರ್ಯಕ್ರಮಗಳು ಇತರ ಸಂಘ-ಸಂಸ್ಥೆಗಳಿಗೆ ಮಾದರಿಯಾಗಿವೆ ಎಂದು ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಸಹಪ್ರಾಧ್ಯಾಪಕಿ ಡಾ.ಜ್ಯೋತಿ ಶಂಕರ್ ಹೇಳಿದರು.

ವಿಶ್ವೇಶ್ವರ ನಗರದ ಬಿಎಐ ಸಭಾಂಗಣದಲ್ಲಿ ಅಂತರರಾಷ್ಟ್ರೀಯ ಲಯನ್ಸ್ ಸಂಸ್ಥೆ ಜಿಲ್ಲೆ 317ಜಿ ಪ್ರಾಂತೀಯ ಸಮ್ಮೇಳನದ ಮುಖ್ಯ ಭಾಷಣಕಾರರಾಗಿ ಅವರು ಮಾತನಾಡಿದರು. ಕಾರ್ಯಕ್ರಮದಲ್ಲಿ ಹೊಲಿಗೆ ಯಂತ್ರ ವಿತರಣೆ, ತಾಲ್ಲೂಕಿನ ಬೆನಕನಹಳ್ಳಿ ಕಂಪ್ಯೂಟರ್ ವಿತರಣೆ, ಐವರು ಮಹಿಳೆಯರಿಗೆ 10ಸಾವಿರ ಚೆಕ್, ಅನಾಥಶ್ರಮಕ್ಕೆ 10 ಸಿಲಿಂಗ್ ಫ್ಯಾನ್, ರೈತರಿಗೆ 50ಸಾವಿರ ಕೊಟ್ಟಿರುವುದು. ಸರಗೂರು ಸಂತೆ ಶಾಲೆಗೆ ಕಟ್ಟಡ ನಿಧಿಗೆ 50ಸಾವಿರ ಪ್ರೋತ್ಸಾಹಧನ ವಿತರಿಸಲಾಯಿತು.

ಲಯನ್ ಜಿಲ್ಲಾ ರಾಜ್ಯಪಾಲ ಕೆ.ಎಲ್. ರಾಜಶೇಖರ್, ಪ್ರಾಂತೀಯ ಅಧ್ಯಕ್ಷ ಎಸ್. ವಾಸುಕಿ, ನಿಕಟಪೂರ್ವ ಮಲ್ಟಿಪಲ್ ಕೌನ್ಸಿಲ್ ಅಧ್ಯಕ್ಷ ಡಾ.ಎನ್.ಕೃಷ್ಣೇಗೌಡ, ಅಧ್ಯಕ್ಷ ಲಯನ್ ಎನ್.ಆರ್.ಮಹದೇವ, ಲಯನ್ ಪಿ.ರಾಜನ್, ಲಯನ್ ಟಿ.ಶಶಿಕುಮಾರ್, ಲಯನ್ ಬಿ.ಸುಧೀರ್, ಲಯನ್ ಸುರೇಶ್ ಕುಮಾರ್, ಲಯನ್ ಎಚ್.ಜಿ.ವಿಠಲ, ಲಯನ್ ವಿಶಾಲ್ ಎನ್.ರಾಜ್, ಲಯನ್ ಎಸ್.ಎಸ್.ಪ್ರಭುಸ್ವಾಮಿ, ಲಯನ್ ಪಿ.ಊಮಾಶಂಕರ್, ಲಯನ್ ಜವರಯ್ಯ ಇನ್ನಿತರರು ಉಪಸ್ಥಿತರಿದ್ದರು.

# ಬನಶಂಕರ ಆರಾಧ್ಯರಿಗೆ ಮಾಧ್ಯಮ ಅಕಾಡೆಮಿ ಪ್ರಶಸ್ತಿ

ಚಾಮರಾಜನಗರ, ಜಿಲ್ಲೆಯ ಉದಯವಾಣಿ ವರದಿಗಾರ ಕೆ.ಎಸ್. ಬನಶಂಕರ ಆರಾಧ್ಯ ಅವರು ಕರ್ನಾಟಕ ಮಾಧ್ಯಮ ಅಕಾಡೆಮಿ ಪ್ರಶಸ್ತಿಗೆ ಭಾಜನರಾಗಿದ್ದಾರೆ.



ಕಳೆದ 30 ವರ್ಷಗಳಿಂದ ನಾನಾ ಪತ್ರಿಕೆ ಹಾಗೂ ಟಿವಿ ಮಾಧ್ಯಮದಲ್ಲಿ ಸೇವೆ ಸಲ್ಲಿಸಿರುವ ಬನಶಂಕರ ಆರಾಧ್ಯರಿಗೆ 2025ನೇ ಸಾಲಿನ ಪ್ರಶಸ್ತಿಯನ್ನು ಘೋಷಿಸಲಾಗಿದೆ. ಕನ್ನಡದಲ್ಲಿ ಸ್ನಾತಕೋತ್ತರ ಪದವೀಧರರಾದ ಇವರು, ಆಂದೋಲನ, ಸೂರ್ಯೋದಯ ಪತ್ರಿಕೆ ಹಾಗೂ ಟಿ.ವಿ. 9 ಚಾಮರಾಜನಗರ ಜಿಲ್ಲಾ ವರದಿಗಾರರಾಗಿದ್ದರು. ಇದೀಗ ಕಳೆದ 14 ವರ್ಷಗಳಿಂದ ಉದಯವಾಣಿ ಜಿಲ್ಲಾ ವರದಿಗಾರರಾಗಿದ್ದಾರೆ.

### ಅಭಿನಂದನೆ

ಮಾಧ್ಯಮ ಅಕಾಡೆಮಿ ಪ್ರಶಸ್ತಿ ಗೆ ಭಾಜನರಾಗಿರುವ ಬನಶಂಕರ ಆರಾಧ್ಯ ಅವರನ್ನು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಜಿಲ್ಲಾ ಘಟಕವು ಅಭಿನಂದಿಸಿದೆ. ಅಲ್ಲದೇ ಈ ಬಾರಿ ಪ್ರಶಸ್ತಿಗೆ ಜಿಲ್ಲೆಯವರನ್ನು ಪರಿಗಣಿಸಿದ್ದಕ್ಕೆ ರಾಜ್ಯ ಸರಕಾರಕ್ಕೆ ಕೃತಜ್ಞತೆಯನ್ನು ಸಲ್ಲಿಸುತ್ತದೆ ಎಂದು ಸಂಘದ ಅಧ್ಯಕ್ಷ ಆರ್. ಎನ್. ಸಿದ್ದಲಿಂಗಸ್ವಾಮಿ, ಪ್ರಧಾನ ಕಾರ್ಯದರ್ಶಿ ಲಕ್ಕೂರು ಪ್ರಸಾದ್ ತಿಳಿಸಿದ್ದಾರೆ.

## ನಿಗಮದ ಅಧ್ಯಕ್ಷ ಎಂ.ರಾಮಪ್ಪ ಹೇಳಿಕೆ

# ಭೋವಿ ಅಭಿವೃದ್ಧಿ ನಿಗಮದಿಂದ ಫಲಾನುಭವಿಗಳಿಗೆ ಸೌಲಭ್ಯ



ಚಾಮರಾಜನಗರ, ಭೋವಿ ಅಭಿವೃದ್ಧಿ ನಿಗಮದಿಂದ ವಿವಿಧ ಯೋಜನೆಗಳಡಿ ಭೋವಿ ಸಮಾಜದ ಅರ್ಹ ಫಲಾನುಭವಿಗಳಿಗೆ ಸೌಲಭ್ಯಗಳನ್ನು ಸಮರ್ಪಕವಾಗಿ ತಲುಪಿಸಲಾಗುತ್ತಿದೆ ಎಂದು ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಎಂ. ರಾಮಪ್ಪ ಅವರು ಹೇಳಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿಂದು ಭೋವಿ ಅಭಿವೃದ್ಧಿ ನಿಗಮದ ಯೋಜನೆಗಳ ಪ್ರಗತಿ ಪರಿಶೀಲಿಸಿದ ಬಳಿಕ ಅವರು ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದರು. ಕರ್ನಾಟಕ ಭೋವಿ ಅಭಿವೃದ್ಧಿ ನಿಗಮವು ಭೋವಿ ಸಮಾಜದ ಜನರ ಅಭಿವೃದ್ದಿಗಾಗಿ ವಿವಿಧ ಯೋಜನೆಯಡಿ ಸೌಲಭ್ಯಗಳನ್ನು ನೀಡುತ್ತಿದೆ. ಜನಸಂಖ್ಯೆಗೆ ಅನುಗುಣವಾಗಿ ಗುರಿ ನಿಗದಿ ಮಾಡಲಾಗುತ್ತಿದೆ. ಈ ವರ್ಷ ಶಾಸಕರ ಅಧ್ಯಕ್ಷತೆಯಲ್ಲಿ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆ ನಡೆಯುತ್ತಿದ್ದು, ಶೀಘ್ರವಾಗಿ ಸವಲತ್ತುಗಳನ್ನು ಫಲಾನುಭವಿಗಳಿಗೆ ತಲುಪಿಸಲು ಮಾರ್ಗದರ್ಶನ ಮಾಡಲಾಗಿದೆ ಎಂದರು. ತಾವು ಅಧಿಕಾರ ವಹಿಸಿಕೊಂಡು ಮೂರು ತಿಂಗಳು ಆಗಿದ್ದು, ಈವರೆಗೆ 7 ಜಿಲ್ಲೆಗಳಲ್ಲಿ ಪ್ರವಾಸ ಕೈಗೊಂಡು ನಿಗಮದ ಕಾರ್ಯವೈಖರಿಯನ್ನು ಪರಿಶೀಲಿಸಿದ್ದೇನೆ. ಎಲ್ಲಾ ಜಿಲ್ಲೆಗಳ ನಿಗಮದ ವ್ಯವಸ್ಥಾಪಕರನ್ನು ಕರೆದು ಬೆಂಗಳೂರಿನಲ್ಲಿ ಸಭೆ ನಡೆಸಿ ಯೋಜನೆಗಳ ಪ್ರಗತಿ ಪರಿಶೀಲಿಸಲಾಗಿದೆ. ಜಿಲ್ಲಾ ಭೇಟಿಯ ವೇಳೆ ನಿಗಮ ಅನುಷ್ಠಾನ ಮಾಡುತ್ತಿರುವ ಯೋಜನೆಗಳ ಪರಾಮರ್ಶೆ ಮಾಡಲಾಗುತ್ತಿದೆ ಎಂದು ಅಧ್ಯಕ್ಷರು ತಿಳಿಸಿದರು.

ಮಹಿಳೆಯರಿಗೆ ಭೂ ಒಡೆತನ ಯೋಜನೆ ಜಾರಿ ಮಾಡಲಾಗುತ್ತಿದೆ. ಸ್ವಾವಲಂಬಿ ಸಾರಥಿ ಯೋಜನೆಯಡಿ ನೀಡಲಾಗುವ ನಾಲ್ಕು ಚಕ್ರ ವಾಹನಗಳಿಗೆ ಹೆಚ್ಚಿನ ಬೇಡಿಕೆ ಇದೆ. 2025-26ನೇ ಸಾಲಿಗೆ ಈ ಯೋಜನೆಯಡಿ ಫಾಸ್ಟ್ ಫುಡ್ ಟ್ರಕ್ ಟ್ರೈಲರ್, ಮೊಬೈಲ್ ಕಿಚನ್ ಕಿಯೋಸ್ಕ್ ಸೌಲಭ್ಯವನ್ನು ಅನುಷ್ಠಾನಗೊಳಿಸಲು ನಿಟ್ಟಿನಲ್ಲಿ ಅನುದಾನ ನಿಗದಿಪಡಿಸಲಾಗಿದೆ. ಸ್ವಯಂ ಉದ್ಯೋಗಿಗಳಾಗಿ ಸ್ವಾವಲಂಬಿ ಜೀವನ ನಡೆಸಲು ಅನುಕೂಲವಾಗುವ ಹೈನುಗಾರಿಕೆ, ಕುರಿ, ಕೋಳಿ ಸಾಕಾಣಿಕೆಗೆ ಮನವರಿಕೆ ಮಾಡಿಕೊಡಲಾಗುತ್ತಿದೆ. ಮಹಿಳಾ ಸ್ವ ಸಹಾಯಕ ಸಂಘಗಳು ಹೆಚ್ಚು ನೊಂದಣಿಯಾಗಿ ಸೌಲಭ್ಯಗಳನ್ನು ಪಡೆಯಲು ಜಾಗೃತಿ ಮೂಡಿಸುವಂತೆ ತಿಳಿಸಲಾಗಿದೆ ಎಂದು ನಿಗಮದ ಅಧ್ಯಕ್ಷರಾದ ಎಂ. ರಾಮಪ್ಪ ಅವರು ತಿಳಿಸಿದರು. ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕರಾದ ಚಂದ್ರನಾಯ್ಕ, ಹೆಚ್ಚುವರಿ ಜಿಲ್ಲಾಧಿಕಾರಿ ಟಿ. ಜವರೇಗೌಡ, ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕರಾದ ರಾಜು ಪತ್ರಿಕಾಗೋಷ್ಠಿಯಲ್ಲಿ ಇದ್ದರು.

# ಕೃಷಿಯಿಂದಲೇ ರಾಷ್ಟ್ರ ಸಮೃದ್ಧ: ಕೃಷಿ ಸಚಿವ ಚಲುವರಾಯ ಸ್ವಾಮಿ



ಮೈಸೂರು: ನಮ್ಮ ದೇಶ ಶೇ.70ರಷ್ಟು ಕೃಷಿಯನ್ನೇ ಅವಲಂಬಿಸಿದೆ ದೇಶ ಆರ್ಥಿಕ ಸಧೃತೆಯನ್ನು ಕಾಣಲು ಕೃಷಿಯನ್ನು ನಾವು ಗಂಭೀರವಾಗಿ ತೆಗೆದುಕೊಂಡು ಹೆಚ್ಚು ಹೆಚ್ಚು ಸಂಶೋಧನೆಗಳನ್ನು ಮಾಡಿ ಹೆಚ್ಚು ಹೆಚ್ಚು ಸಮಗ್ರ ಕೃಷಿಯತ್ತ ಗಮನಹರಿಸಿದಾಗ ಮಾತ್ರ ದೇಶ ಆರ್ಥಿಕವಾಗಿ ಸದೃಢವಾಗಲು ಸಾಧ್ಯ ಎಂದು ಕೃಷಿ ಸಚಿವ ಚಲುವರಾಯ ಸ್ವಾಮಿ ಅಭಿಪ್ರಾಯ ವ್ಯಕ್ತಪಡಿಸಿದರು.

ಮೈಸೂರಿನ ಮಾನಸ ಗಂಗೋತ್ರಿಯ ವಿಜ್ಞಾನ ಭವನದಲ್ಲಿ ನಡೆದ ಡಾ.ವಸಂತ ಕುಮಾರ್ ತಿಮಕಾಪುರ ವಿರಚಿತ ಕೃತಿಗಳ ಲೋಕಾರ್ಪಣೆ ಮತ್ತು ವಸಂತೋತ್ಸವ ಅಭಿನಂದನಾ ಸಮಾರಂಭದ ಕಾರ್ಯಕ್ರಮ ಉದ್ಘಾಟನೆ ಮಾಡಿ ಮಾತನಾಡಿದ ಅವರು ಇಂದು ನಮ್ಮ ದೇಶ ಹಲವಾರು ಕ್ಷೇತ್ರಗಳಲ್ಲಿ ಬೇರೆ ದೇಶಗಳಿಗೆ ಹೋಲಿಸಿದರೆ ಸಾಕಷ್ಟು ವಿಚಾರದಲ್ಲಿ ಹಿನ್ನಡೆ ಕಾಣುತ್ತಿದ್ದೇವೆ. ಇಂದಿನ ಯುವ ಪೀಳಿಗೆ ನಗರ ಪ್ರದೇಶಗಳ ವ್ಯಾಮೋಹದಿಂದ ಕೈಗಾರಿಕೆ,ಖಾಸಗಿ ಉದ್ಯೋಗಗಳಲ್ಲಿ ದುಡಿಯುತ್ತಿದ್ದಾರೆ. ಅಲ್ಲಿ ಬರುವ ಸಂಬಳ ನಂಬಿ ಜೀವನ ಮಾಡುತ್ತಾರೆ. ಇದರಿಂದ ಆರ್ಥಿಕ ಸದೃಢತೆ ಕಾಣಲು ಸಾಧ್ಯವಿಲ್ಲ ಎಂದರು.

ಸುತ್ತೂರು ಶ್ರೀ ದೇಶೀಕೇಂದ್ರ ಸ್ವಾಮೀಜಿ,ವಿಶ್ವ ಒಕ್ಕಲಿಗ ಮಹಾ ಸಂಸ್ಥಾನ ಮಠದ ಶ್ರೀ ನಿಶ್ಚಲಾನಂದ ಸ್ವಾಮೀಜಿ ಸಾನಿದ್ಯದಲ್ಲಿ ನಡೆದ ಕಾರ್ಯಕ್ರಮದಲ್ಲಿ ಡಾ.ವಸಂತ ಕುಮಾರ್ ತಿಮಕಾಪುರ ವಿರಚಿತ ವಸಂತ ವಿಹಾರ ಕೃತಿಯನ್ನು ಉದ್ಯಮಿ ರಘು ಕೌಟಿಲ್ಯ ಲೋಕಾರ್ಪಣೆ ಗೊಳಿಸಿದರು. ಮತ್ತೊಂದು ಕೃತಿಯಾದ ಪ್ಲಾಂಟ್ ಡಾಕ್ಟರ್ ಅನ್ನು ಪ್ರೊ.ಎ.ಎಚ್ ರಾಜಾಸಾಬ್ ಬಿಡುಗಡೆ ಮಾಡಿದರು.

ಕೃತಿಗಳನ್ನು ಕುರಿತು ನಿವೃತ್ತ ಪ್ರಾಧ್ಯಾಪಕ ಪ್ರೊ.ಸಿ ನಾಗಣ್ಣ ಮತ್ತು ಪ್ರೊ.ಎನ್. ನಾಗರಾಜ ಮಾತನಾಡಿದರು.ಕಾರ್ಯಕ್ರಮದ ಅಧ್ಯಕ್ಷತೆಯನ್ನು ಡಾ.ಸಿಎಲ್ ಲಕ್ಷ್ಮಿಪತಿಗೌಡ ವಹಿಸಿದ್ದರು. ವಿಸ್ಮಯ ಬುಕ್ ಹೌಸ್ ಪ್ರಕಾಶ್ ಚಿಕ್ಕಪಾಳ್ಯ ಸೇರಿ ಮತ್ತಿತರರು ಭಾಗಿಯಾಗಿದ್ದರು.

## ನಾಳೆ ಕೃತಿ ಬಿಡುಗಡೆ ಕಾರ್ಯಕ್ರಮ




ಮೈಸೂರು: ಟಿ.ನರಸೀಪುರ ತಾಲೂಕಿನ ಯಾಚೇನಳ್ಳಿಯಲ್ಲಿನ ಎಂ.ಆರ್.ಎ ಪ್ರಕಾಶನದ ವತಿಯಿಂದ ಜ.12ರಂದು ಮಧ್ಯಾಹ್ನ 2ಕ್ಕೆ ಗ್ರಾಮದ ಶ್ರೀರಾಮಕೃಷ್ಣ ಸೇವಾ ಕೇಂದ್ರ ಪ್ರೌಢಶಾಲೆಯಲ್ಲಿನ ವಿಶ್ವಮಾನವ ವೇದಿಕೆಯಲ್ಲಿ ಅವಧೂತ ಮಾದಪ್ಪ ಮತ್ತು ದಿ ಕಾಪಿ–ಎ ಫಾಟಲ್ ಪ್ಯಾಟರ್ನ್ ಕೃತಿಗಳ ಲೋಕಾರ್ಪಣೆ ಮತ್ತು ಎಂ.ಆರ್.ಎ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ ಎಂದು ಪ್ರಕಾಶಕ ಚಂದ್ರಶೇಖರ ದ.ಕೋ.ಹಳ್ಳಿ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ನಾದಾನಂದ ನಾಥ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಡಾ.ನಿಶ್ಚಲಾನಂದನಾಥ ಸ್ವಾಮೀಜಿ ಕೃತಿ ಲೋಕಾರ್ಪಣೆಗೊಳಿಸುವರು, ಅದೀಬ್ ಅಖ್ತರ್ ಅಭಿನಂದಿಸುವರು, ಮಂಜು ಮುತ್ತಗೆರೆ ಅಧ್ಯಕ್ಷತೆ ವಹಿಸುವರು, ದಿ ಕಾಪಿ– ಎ ಫಾಟಲ್ ಪ್ಯಾಟರ್ನ್ ಕೃತಿ ಕುರಿತು ಉಮೇಶ್ ದಡಮಹಳ್ಳಿ ಮಾತನಾಡುವರು, ಕೆ.ಪಿ. ಮೃತ್ಯುಂಜಯ, ಗನೇಶ ಅಮೀನಗಡ ವಿವಿಧ ಪುರಸ್ಕಾರ ಸ್ವೀಕರಿಸುವರು. ಚನ್ನಾಜಮ್ಮರನ್ನು ಅಭಿನಂದಿಸಲಾಗುವುದೆಂದರು. ರುದ್ರಗೌಡ ಮುರಾಳ, ಉಮೇಶ್ ದಡಮಹಳ್ಳಿ ಹಾಗೂ ಇನ್ನಿತರರು ಇದ್ದರು.

## ಕಪ್ಪು ಪಟ್ಟಿ ಧರಿಸಿ ಕರ್ತವ್ಯಕ್ಕೆ ಹಾಜರಾದ ಶಿಕ್ಷಕರು

ಕೆ.ಆರ್.ಪೇಟೆ: ಶಿಕ್ಷಕರು ಅರ್ಹತಾ ಪರೀಕ್ಷೆ ಎದುರಿಸಿ ತೇರ್ಗಡೆ ಹೊಂದಬೇಕು. ನಂತರ ಕರ್ತವ್ಯದಲ್ಲಿ ಮುಂದುವರೆಯಬೇಕು ಎಂದು ತೀರ್ಪು ನೀಡಿರುವ ಸುಪ್ರಿಂ ಕೋರ್ಟಿನ ತೀರ್ಪನ್ನು ವಿರೋಧಿಸಿ ತಾಲ್ಲೂಕಿನ ಶಿಕ್ಷಕರು ಕಪ್ಪು ಪಟ್ಟಿ ಧರಿಸಿ ಕರ್ತವ್ಯಕ್ಕೆ ಹಾಜರಾಗುವ ಮೂಲಕ ತಮ್ಮ ಪ್ರತಿಭಟನೆ ವ್ಯಕ್ತಪಡಿಸಿದರು.

ಇಂದು ದೇಶಾದ್ಯಂತ ರಾಷ್ಟ್ರೀಯ ಶಿಕ್ಷಕರ ಫೆಡರೇಷನ್ ಮತ್ತು ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಕರೆಯ ಮೇರೆಗೆ ತಾಲ್ಲೂಕಿನ ಎಲ್ಲಾ ಪ್ರಾಥಮಿಕ ಶಾಲಾ ಶಿಕ್ಷಕರು ಬೆಳಿಗ್ಗೆ 10ಗಂಟೆಯಿಂದ ಸಂಜೆ 4.20ವರೆಗೆ ಕೈಗೆ ಕಪ್ಪು ಪಟ್ಟಿ ಧರಿಸಿ ಶಿಕ್ಷಕರ ಅರ್ಹತಾ ಪರೀಕ್ಷೆ ವಿರೋಧಿಸಿದರು. ರಾಜ್ಯದ ಶಿಕ್ಷಕರಿಗೂ ಕೇಂದ್ರ ಸರ್ಕಾರದಂತೆ ಸಮಾನ ವೇತನ ನೀಡಬೇಕು ಮತ್ತು ಹೊಸ ಪಿಂಚಣಿ ಯೋಜನೆ ಬದಲಾಗಿ ಹಳೆಯ ಪಿಂಚಣಿ ಯೋಜನೆ ಜಾರಿ ಮಾಡಬೇಕು. ಶಿಕ್ಷಕರ ಅರ್ಹತಾ ಪರೀಕ್ಷೆ ಸಂಬಂಧ ಕೇಂದ್ರ ಸರ್ಕಾರ ವಿಶೇಷ ಕಾನೂನು ಮಂಡಿಸಿ ಸುಪ್ರಿಂ ಆದೇಶಕ್ಕೆ ತಡೆ ನೀಡಬೇಕು ಹೀಗೆ ಹಲವು ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯಿಸಿ ತಾಲ್ಲೂಕಿನಾದ್ಯಂತ ಶಿಕ್ಷಕರು ಕಪ್ಪು ಪಟ್ಟಿ ಧರಿಸಿ ಪ್ರತಿಭಟನೆ ನಡೆಸಿದರು.




# ಅಂಬೇಡ್ಕರ್ ರವರ ಪ್ರತಿಮೆ ನಿರ್ಮಾಣಕ್ಕೆ ಶಂಕುಸ್ಥಾಪನೆ



ಗುಂಡ್ಲುಪೇಟೆ: ಪಟ್ಟಣದ ಊಟಿ ಮೈಸೂರು ಮುಖ್ಯ ರಸ್ತೆಯಲ್ಲಿ ಇರುವ ಅಂಬೇಡ್ಕರ್ ಭವನದ ಮುಂಭಾಗ ಅಂಬೇಡ್ಕರ್ ರವರ ಪ್ರತಿಮೆ ನಿರ್ಮಾಣ ಮಾಡಲು ಸ್ನೇಹಜೀವಿ ಗೋಪಾಲ್ ಹೊರೆಯಾಲ ಮತ್ತು ಹಿರಿಯ ಮುಖಂಡರು ಶಂಕುಸ್ಥಾಪನೆ ನೆರವೇರಿಸಿದರು.

ನಂತರ ಮಾತನಾಡಿದ ಗೋಪಾಲ್ ಹೊರೆಯಾಲ ಕಳೆದ ಮೂರು ನಾಲ್ಕು ವರ್ಷಗಳ ಹಿಂದೆ ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಬಹಳ ವಿಜೃಂಭಣೆಯಿಂದ ಅಂಬೇಡ್ಕರ್ ಜಯಂತಿಮಾಡಿಕೊಂಡು ಬಂದಿದ್ದೇವೆ, ನಮ್ಮ ತಾಲ್ಲೂಕಿನಲ್ಲಿ ಬಾಬಾ ಸಾಹೇಬರ ಪ್ರತಿಮೆಯಾಗಬೇಕು ಎಂದು ಬಹುದಿನಗಳ ಸಮಾಜದ ಜನರ ಮನಸ್ಸಿನಲ್ಲಿ ಇತ್ತು ಅದರಂತೆ ಪ್ರತಿಮೆ ಮಾಡಲು ಇಂದು ಶಂಕುಸ್ಥಾಪನೆ ಮಾಡಲಾಗಿದೆ. ತಾಲ್ಲೂಕು ಕಚೇರಿಯಲ್ಲಿ ಅಂಬೇಡ್ಕರ್ ಪ್ರತಿಮೆ ಮಾಡಲು ನಾವೇ ಮನವಿ ಸಲ್ಲಿಸಿದ್ದೆವು ಆದರೆ ಅಲ್ಲಿ ಜಿಲ್ಲಾ ಮಟ್ಟದ ಅಧಿಕಾರಿಗಳ ಅನುಮತಿ ಪಡೆಯಬೇಕು ಎಂಬ ವಿಚಾರಕ್ಕೆ ವಿಳಂಬವಾಗಬಾರದು ಎಂಬ ಕಾರಣ ಇಲ್ಲಿ ಮಾಡಲು ಮುಂದಾಗಿದ್ದೇವೆ ಕೆಲವರು ಅಂಬೇಡ್ಕರ್ ಪ್ರತಿಮೆ ಮಾಡಲು ಅವಕಾಶ ನೀಡಲು ಅವಕಾಶ ನೀಡಬಾರದು ಎಂದು ಹೇಳುತ್ತಾರೆ, ಅಂಬೇಡ್ಕರ್ ಪ್ರತಿಮೆ ಎಲ್ಲಿ ಬೇಕಾದರೂ ಮಾಡಬಹುದು ಎಂದರು.

ಮಲ್ಲಯ್ಯನಪುರ ಗುಡ್ಡದಲ್ಲಿ ಬುದ್ದನ ಪ್ರತಿಮೆ ಮಾಡುತ್ತೇವೆ ಎಂದು ಹೊದ್ರಿ ಇಷ್ಟು ದಿನ ಆಯ್ತು ಏನು ಮಾಡಿದ್ರಿ, ಅಜ್ಞಾನಿಗಳು ಕತ್ತಲೆಯ ಕಡೆ ಕರೆದುಕೊಂಡು ಹೋದರೆ , ಜ್ಞಾನಿಗಳು ಬೆಳಕಿನ ಕಡೆ ಕರೆದೊಯ್ಯುತ್ತಾರೆ, ಎಂಬುದು ನೆನಪಿರಲಿ ರಾಜಕೀಯದ ಸ್ವಾರ್ಥಕ್ಕಾಗಿ ಬೇಡ್ಕರ್ ಪ್ರತಿಮೆ ನಿರ್ಮಾಣ ವಿರೋಧಿಸುವುದು ಸರಿಯಲ್ಲ ಯಾರ ನಡೆ ಯಾವ ಕಡೆ ಇದೆ ಎಂಬುದನ್ನು ಪ್ರತಿ ಗ್ರಾಮಗಳಲ್ಲಿ ಜನ ಗಮನಿಸುತ್ತಿದ್ದಾರೆ,ಎಂದರು.

ಸಮಾಜಕಲ್ಯಾಣ ಇಲಾಖೆ ಸಚಿವರಾದ ಹಾಗೂ ನಮ್ಮನಾಯಕರಾದ ಹೆಚ್ ಸಿ ಮಹದೇವಪ್ಪನವರು ಒಂದು ಕೋಟಿ ಅನುದಾನ ಹಾಕಿದ ಕಾರಣ ಅಂಬೇಡ್ಕರ್ ಭವನ ನವೀಕರಣ ಕಾರ್ಯ ನಡೆಯುತ್ತಿದೆ, ಏಪ್ರಿಲ್ ಅಥವಾ ಮೇ ತಿಂಗಳಲ್ಲಿ ಅಂಬೇಡ್ಕರ್ ಪ್ರತಿಮೆ ಅನಾವರಣವಾಗಲಿದೆ, ಎಷ್ಟು ಎತ್ತರದ ಯಾವ ರೀತಿ ಪ್ರತಿಮೆ ಮಾಡಬೇಕು ಎಂಬ ಬಗ್ಗೆ ಸಮಾಜದ ಹಿರಿಯರ ಮಾರ್ಗದರ್ಶನ ಪಡೆದು ಮಾಡಲಿದ್ದು ಅದಕ್ಕೆ ನಾನು ಅವರ ಜೊತೆ ಇರುತ್ತೇನೆ ಅಂಬೇಡ್ಕರ್ ಹೇಳಿದ್ದಾರೆ ಸಮಾಜಕ್ಕಾಗಿ ಯಾವ ವ್ಯಕ್ತಿ ಬದುಕುತ್ತಾನೆ ಅವನು ಸತ್ತ ಮೇಲೆ ಜೀವಂತವಾಗಿರುತ್ತಾನೆ, ಸ್ವಾರ್ಥ ಕ್ಕಾಗಿ ಬದುಕುವನು ಇದ್ದರು ಸತ್ತಂತೆರುತ್ತಾನೆ ಎಂದರು.

ಮಾಜಿ ಕಾಡಾ ಅಧ್ಯಕ್ಷ ನಂಜಪ್ಪ ಮಾತನಾಡಿ ಅಂಬೇಡ್ಕರ್ ಬಸವಣ್ಣ ಒಂದು ಸಮುದಾಯಕ್ಕೆ ಸೀಮಿತವಲ್ಲ, ಸಂವಿಧಾನ ಎಲ್ಲರಿಗಾಗಿ ಬರೆದಿದ್ದಾರೆ ನಾವು ಎಲ್ಲರನ್ನೂ ಗೌರವಿಸಬೇಕು ಎಂದರು.

ಮಾಜಿ ಸಂಸದ ಎ ಸಿದ್ದರಾಜು, ಮಾಜಿ ಕಾಡಾ ಅಧ್ಯಕ್ಷ ಹೆಚ್ ಎಸ್ ನಂಜಪ್ಪ, ಜಿ.ಪಂ ಮಾಜಿ ಉಪಾಧ್ಯಕ್ಷ ಕೆ ಎಸ್ ಮಹೇಶ್, ಸಮಾಜ ಸೇವಕ. ಗೋಪಾಲ ಹೊರೆಯಾಲ, ಮಾಜಿ ಜಿ.ಪಂ ಸದಸ್ಯ ಬೊಮ್ಮಯ್ಯ, ಕೆ ಶಿವಸ್ವಾಮಿ, ಪುರಸಭೆ ಮಾಜಿ ಸದಸ್ಯ ಮಲ್ಲರಾಜ್, ಸೋಮಣ್ಣ ,ಬಿಜಿ ಶಿವಕುಮಾರ್ ,ರಾಜು, ಹೊಸಹಳ್ಳಿ ಮಧುಸೂದನ್, ಹೆಗ್ಗವಾಡಿ ಕೆಂಪರಾಜು, ಕೆರೆಹಳ್ಳಿ ರವಿಕುಮಾರ್, ಗೋವಿಂದರಾಜು, ಸಂಪತ್ತು, ರಾಜಗೋಪಾಲ್, ಮಹೇಶ್ ರಾಘವಾಪುರ, ಮುತ್ತಣ್ಣ ಮತ್ತಿತರರಿದ್ದರು.

# ಭಾರತ್ ನಗರದ ಅವ್ಯವಸ್ಥೆ ದರ್ಶನ ಮಾಡಿದ ಅಲೆಮಾರಿ ನಿಗಮದ ಅಧ್ಯಕ್ಷೆ



ಮೈಸೂರು: ಮೈಸೂರಿನ ಸಾತಗಳ್ಳಿ ಅಂಬೇಡ್ಕರ್ ಕಾಲೋನಿಗೆ ಕರ್ನಾಟಕ ರಾಜ್ಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಲೆಮಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಜಿ.ಪಲ್ಲವಿ ಶನಿವಾರ ಭೇಟಿ ನರ್ಮ್ ಮನೆಗಳಲ್ಲಿ ವಾಸವಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಲೆಮಾರಿ ಸಮುದಾಯದವರ ಕುಂದು–ಕೊರತೆ ಆಲಿಸಿದರು.

ಸಾತಗಳ್ಳಿ ಅಂಬೇಡ್ಕರ್ ಕಾಲೋನಿಯಲ್ಲಿ 560 ಗುಂಪು ಮನೆಗಳಿದ್ದು, ಕಳೆದ 15 ವರ್ಷಗಳಿಂದ ವಾಸವಾಗಿದ್ದೇವೆ. ಕುಡಿಯುವ ನೀರಿನ ಸಮಸ್ಯೆ, ಶೌಚಾಲಯ ಹಾಗೂ ಒಳಚರಂಡಿ ವ್ಯವಸ್ಥೆ ಸರಿಯಾಗಿಲ್ಲ. ಇಲ್ಲಿನ ಅಂಬೇಡ್ಕರ್ ಸಮುದಾಯ ಭವನದಲ್ಲೇ ಸೂಕ್ತ ಸೌಲಭ್ಯಗಳು ಇಲ್ಲದೆ ಅಂಗನವಾಡಿ, ಸ್ಕೂಲ್ ನಡೆಸಲಾಗುತ್ತಿದೆ. ಚಿಂತಾಜನಕ ಸ್ಥಿತಿಯಲ್ಲಿ ಜೀವನ ನಡೆಸುತ್ತಿದ್ದೇವೆ. ಇರುವುದು ಒಂದೇ ಬೋರ್ ವೆಲ್. ಅಷ್ಟೂ ಮನೆಗಳಿಗೂ ಒಂದೇ ಬೋರ್ ವೆಲ್ ನಲ್ಲಿ ನೀರು ಪೂರೈಸಲು ಸಾಧ್ಯವಾಗುತ್ತಿಲ್ಲ. ಕಳೆದ ಹದಿನೈದು ವರ್ಷದಿಂದಲೂ ಹೀನಾಯವಾಗಿ ಬದುಕು ನಡೆಸುತ್ತಿದ್ದೇವೆ. ಮನೆಗಳ ಸುತ್ತಲೂ ಕಸ ತುಂಬಿರುತ್ತದೆ. ಸ್ವಚ್ಛತೆ ಇಲ್ಲ. ಎಷ್ಟೇ ಮನವಿ ಮಾಡಿದರೂ ಯಾರೊಬ್ಬ ಅಧಿಕಾರಿಗಳು ಬರುವುದಿಲ್ಲ. ಪುಂಡರ ಹಾವಳಿ, ರಸ್ತೆ ಅಭಿವೃದ್ಧಿಯಾಗಿಲ್ಲ. ಕಟ್ಟಡಗಳ ಛಾವಣಿ ಹಾಳಾಗಿದೆ. ಗಾಂಜ–ಡ್ರಗ್ಸ್ ಸೇವನೆ ಮಾಡುವವರು ಸ್ಥಳೀಯರ ಮೇಲೆ ಹಲ್ಲೆ ನಡೆಸುತ್ತಾರೆ. ಸಂಜೆ ವೇಳೆ ತಿರುಗಾಡುವುದ ಕಷ್ಟವಾಗಿದೆ ಎಂದು ನಿವಾಸಿಗಳು ಅಳಲು ಹೇಳಿಕೊಂಡರು.

**ಅನುದಾನ ಕೊರತೆ**

ಅನುದಾನದ ಕೊರತೆಯಿಂದಾಗಿ ಯಾವುದೇ ಅಭಿವೃದ್ಧಿ ಕಾಮಗಾರಿಗಳನ್ನು ನಡೆಸಲು ಸಾಧ್ಯವಾಗುತ್ತಿಲ್ಲ. ಕಳೆದ ಐದು ವರ್ಷದಿಂದ ಒಂದೇ ಒಂದು ರೂಪಾಯಿ ಅನುದಾನ ಬಂದಿಲ್ಲ. ಕಸ ವಿಲೇವಾರಿ ಸಂಬಂಧ ರಮ್ಮನಹಳ್ಳಿ ಪಟ್ಟಣ ಪಂಚಾಯಿತಿ ಅಧಿಕಾರಿಗಳಿಗೆ ತಿಳಿಸಿದ್ದೇವೆ. ಕುಡಿಯುವ ನೀರಿನ ವ್ಯವಸ್ಥೆ ಕುರಿತು ಮೇಲಾಧಿಕಾರಿಗಳ ಗಮನಕ್ಕೆ ತಂದಿದ್ದೇವೆ ಎಂದು ಕೊಳಗೇರಿ ಅಭಿವೃದ್ಧಿ ಮಂಡಳಿ ಕಾರ್ಯಪಾಲಕ ಇಂಜಿನಿಯರ್ ಸೈಯದ್ ಫಾತಿಮಾ ಮಾಹಿತಿ ನೀಡಿದರು.

ಬಳಿಕ ಮಾತನಾಡಿದ ನಿಗಮದ ಅಧ್ಯಕ್ಷರಾದ ಪಲ್ಲವಿ ಮಾತನಾಡಿ, ಸಾತಗಳ್ಳಿ ಅಂಬೇಡ್ಕರ್ ಕಾಲೋನಿಯಲ್ಲಿ ಪ್ರತೀ ದಿನ ಪೊಲೀಸರು ಬೀಟ್ ಮಾಡಬೇಕು. ಮಹಿಳೆಯರು ಮತ್ತು ಮಕ್ಕಳ ಸಂಖ್ಯೆ ಹೆಚ್ಚಾಗಿದ್ದು, ಯಾವುದೇ ಅಹಿತಕರ ಘಟನೆ ನಡೆಯದಂತೆ ಮುಂಜಾಗ್ರತೆ ವಹಿಸಬೇಕು. ಪ್ರತೀ ಆರು ತಿಂಗಳಿಗೊಮ್ಮೆ ಯುಜಿಡಿ ಸ್ವಚ್ಛತೆಯಾಗಬೇಕು. ಸಮಾಜ ಕಲ್ಯಾಣ ಇಲಾಖೆ, ಕೊಳಗೇರಿ ಮಂಡಳಿ, ಪಟ್ಟಣ ಪಂಚಾಯಿತಿ ಅಧಿಕಾರಿ–ಸಿಬ್ಬಂದಿಗಳು ನಿವಾಸಿಗಳಿಗೆ ಸ್ವಚ್ಛತೆ ಕುರಿತು ಅರಿವು ಮೂಡಿಸಬೇಕು ಹಾಗೂ ನಿರ್ವಹಣೆ ಮಾಡಬೇಕು ಎಂದು ಸೂಚಿಸಿದರು. ಈ ಭಾಗದ ಸಮಸ್ಯೆಯನ್ನು ಸಿಎಂ, ಸಚಿವರ ಗಮನಕ್ಕೆ ತರಲಾಗುವುದು ಎಂದು ಹೇಳಿದರು. ಅಖಿಲ ಕರ್ನಾಟಕ ಕುಳುವ ಮಹಾಸಂಘದ ಪ್ರಧಾನ ಕಾರ್ಯದರ್ಶಿ ಆನಂದ್ ಕುಮಾರ್ ಏಕಲವ್ಯ, ಉಪಾಧ್ಯಕ್ಷ ವೆಂಕಟಾಚಲ, ಸಂಘಟನಾ ಕಾರ್ಯದರ್ಶಿ ರಂಗಸ್ವಾಮಿ, ಮೈಸೂರು ಜಿಲ್ಲಾ ಕೊರಮ–ಕೊರಚ ಮಹಾಸಂಘದ ಪ್ರಧಾನ ಕಾರ್ಯದರ್ಶಿ ಮೋಹನ್ ಕಾಯಕ, ಜಂಟಿ ಕಾರ್ಯದರ್ಶಿ ಎನ್.ರವಿಕುಮಾರ್, ಉಪಾಧ್ಯಕ್ಷ ರಮೇಶ್, ಮುಖಂಡರಾದ ಗಂಗಪ್ಪ, ಜಯಪ್ರಭು, ಪ್ರಸನ್ನಕುಮಾರ್, ದುರ್ಗಪ್ಪ, ರಾಮಪ್ಪ, ಶಿವಪುತ್ರ, ನಾಗಪ್ಪ ದೊಡ್ಡಮನಿ, ಗಂಗಾಧರ ಮತ್ತಿತರರಿದ್ದರು.

# ಉದ್ದಿಮೆಗಳನ್ನು ಸ್ಥಾಪಿಸಿ ಉದ್ಯೋಗ ನೀಡಿ: ಜಿಟಿಡಿ



ಮೈಸೂರು: ಪ್ರಸ್ತುತ ದಿನದಲ್ಲಿ ಅನ್ನ ಕೊಡುವ ಭೂಮಿಯನ್ನು ಉಳಿಸಿಕೊಳ್ಳುವ ಬದಲಿಗೆ ದುಂದುವೆಚ್ಚ ಮಾಡಲು ಮಾರಾಟ ಮಾಡಿ ಕೊಳ್ಳುವುದರಿಂದ ಕೃಷಿ ಭೂಮಿ ಇಳಿಕೆಯಾಗಿ ಕೃಷಿ ಚಟುವಟಿಕೆ ಕೂಡ ಕಡಿಮೆಯಾಗಿದೆ. ಹಾಗಾಗಿ, ಹೊಸ ಹೊಸ ಗುಡಿಕೈಗಾರಿಕೆಗಳು, ಉದ್ದಿಮೆಗಳನ್ನು ಸ್ಥಾಪಿಸಿ ಉದ್ಯೋಗ ಕೊಡು ವಂತೆ ಮಾಡಬೇಕಿದೆ ಎಂದು ಶಾಸಕ ಜಿ.ಟಿ.ದೇವೇಗೌಡ ನೀಡಿದರು.

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ.ಟ್ರಸ್ಟ್, ಸರಸ್ವತಿಪುರಂ ವಲ ಯದ ಪ್ರಗತಿಬಂಧು ಸ್ವಸಹಾಯ ಸಂಘಗಳ ಒಕ್ಕೂಟದವತಿಯಿಂದ ಆಯೋಜಿಸಿದ್ದ ಸಾಮೂಹಿಕ ಸತ್ಯನಾರಾಯಣ ಪೂಜೆ ಹಾಗೂ ಸಭಾ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತ ನಾಡಿದರು. ಕಳೆದ 40–50 ವರ್ಷಗಳ ಹಿಂದೆ ಪಡುವಾರಹಳ್ಳಿ,ಒಂಟಿಕೊಪ್ಪಲು, ಕುಂಬಾರಕೊಪ್ಪಲು,ಮಂಚೇಗೌಡನಕೊಪ್ಪಲಿನ ಭಾಗದ ವರು ಸಾಕಷ್ಟು ಜಮೀನು ಹೊಂದಿದ್ದರು. ಕಾಲಕ್ರಮೇಣ ಜಮೀನು ಮಾರಾಟ ಮಾಡಿಕೊಂಡು ಬಿಟ್ಟರು. ಒಂದು ಕಾಲದಲ್ಲಿ ಜಮೀನ್ದಾರರಾಗಿದ್ದವರು ಇಂದು ತಮ್ಮ ಮಕ್ಕಳು,ಮೊಮ್ಮಕ್ಕಳಿಗೆ ಒಂದು ಮನೆಯನ್ನು ಕಟ್ಟಿಕೊಳ್ಳಲು ನಿವೇಶನ ಇಲ್ಲದ ಸ್ಥಿತಿ ನಿರ್ಮಾ ಣವಾಗಿದೆ ಎಂದು ಬೇಸರಿಸಿದರು. ಪ್ರತಿಯೊ ಬ್ಬರೂ ಉದ್ಯಮ ಸ್ಥಾಪನೆ ಮಾಡುವ ಕಡೆಗೆ ಗಮನಹರಿಸಬೇಕು. ಒಂದು ಸಣ್ಣ ಉದ್ದಿಮೆ ಸ್ಥಾಪನೆ ಮಾಡಿದರೂ ಐದಾರು ಜನರಿಗೆ ಕೆಲಸ ಕೊಡಬಹುದು. ಮಹಿಳೆಯರು ತಯಾ ರಿಸಿದ ಅನೇಕ ವಸ್ತುಗಳಿಗೆ ಮಾರುಕಟ್ಟೆಯಲ್ಲಿ ಬೇಡಿಕೆ ಇದೆ. ಇಂದು ಅನೇಕ ಕಡೆಗಳಲ್ಲಿರಾಗಿ, ಜೋಳ, ಗಂಧದ ಕಡ್ಡಿ,ಸಾಂಬಾರ್ ಪದಾರ್ಥ ಸೇರಿದಂತೆ ಅನೇಕ ವಸ್ತುಗಳನ್ನು ಉತ್ಪಾದನೆ ಮಾಡಿ ಮಾರಾಟ ಮಾಡ ಲಾಗುತ್ತಿದೆ. ಇದು ಹೆಚ್ಚಾ ಗುವಂತೆ ಮಾಡಿದರೆ ಉತ್ತಮ ಎಂದರು.

ಆದಿಚುಂಚನಗಿರಿ ಶಾಖಾ ಮಠದ ಶ್ರೀ ಸೋಮೇಶ್ವರ ನಾಥಸ್ವಾಮೀಜಿ ಸಾನ್ನಿಧ್ಯ ವಹಿಸಿ ದ್ದರು ಶಾಸಕ ಕೆ.ಹರೀಶಗೌಡ ಪತ್ನಿ ಗೌರಿ, ನಗರಪಾಲಿಕೆ ಮಾಜಿ ಸದಸ್ಯರಾದ ಭಾಗ್ಯ ಮಹದೇಶ್, ವಿಜಯಕುಮಾರ್ ನಾಗ ನಾಳ, ಜಿಲ್ಲಾ ಒಕ್ಕಲಿಗರ ಸಂಘದ ಅಧ್ಯಕ್ಷ ಮರಿಸ್ವಾಮಿ, ಪ್ರಗತಿಬಂಧು ಸ್ವಸಹಾಯ ಸಂಘದ ಪದಾಧಿ ಕಾರಿಗಳಾದ ಶೀಲಾ ಸತ್ಯನಾರಾಯಣ್, ಶಶಿ ರೇಖಾ, ಯಶೋಧಾ, ಲೀಲಾವತಿ,ಶೋಭಾ, ಶೀಲಾ, ಲತಾದೇವಿ, ಗೌರಿ,ಧನಲಕ್ಷ್ಮೀ, ಸುನಂದ, ಸುಶೀಲಾ, ಕಮಲಶ್ರೀ, ಟ್ರಸ್ಟ್ ಮೇಲ್ವಿಚಾಕ ಕೆ.ವಿಜಯಕು ಮಾರ್ ಮತ್ತಿತರರು ಹಾಜರಿದ್ದರು.

## ಸಿಎಂ ಸನ್ಮಾನಿಸಿದ ಚಿನ್ನಸ್ವಾಮಿ

ಚಾಮರಾಜನಗರ: ಕೆಪಿಸಿಸಿ ಕಾನೂನು ವಿಭಾಗದ ರಾಜ್ಯ ಕಾರ್ಯದರ್ಶಿ ವಕೀಲ ಎಂ. ಚಿನ್ನಸ್ವಾಮಿ ಮುಖ್ಯಮಂತ್ರಿ ಸಿದ್ದರಾಮಯ್ಯ ರವರಿಗೆ ಅಭಿನಂದನೆ ಸಲ್ಲಿಸಿದರು



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕರ್ನಾಟಕದ ದೀರ್ಘ ಕಾಲದ ಮುಖ್ಯ ಮಂತ್ರಿಯಾಗಿ ಇತಿಹಾಸ ನಿರ್ಮಿಸಿದ ಹಿನ್ನೆಲೆಯಲ್ಲಿ ಬೆಂಗಳೂರಿನ ಅವರ ಕಾವೇರಿ ನಿವಾಸದಲ್ಲಿ ಕನಿಷ್ಟ ವೇತನ ವ'ಂಂಡ'ಳಿಂು'ು ಮಾಜಿ ಅಧ್ಯಕ್ಷ ಕೆಪಿಸಿಸಿ ಕಾನೂನು ವಿಭಾಗದ ರಾಜ್ಯ ಕಾರ್ಯದರ್ಶಿಯಾದ ವಕೀಲ ಎಂ. ಚಿನ್ನಸ್ವಾಮಿ ಪುಷ್ಪಗುಚ್ಛ ನೀಡಿ ಅಭಿನಂದಿಸಿದರು. ಹಿರಿಯ ನಾಯಕ ಮಾಜಿ ಮುಖ್ಯ ಮಂತ್ರಿ ದಿ.ದೇವರಾಜ ಅರಸು ಅವರ ದಾಖಲೆಯನ್ನು ಸರಿಗಟ್ಟಿಸಿ, ಮುಖ್ಯಮಂತ್ರಿ ಸಿದ್ದರಾಮಯ್ಯನವರು ಇಂದು ಹೊಸ ಇತಿಹಾಸ ನಿರ್ಮಿಸಿದ್ದಾರೆ ಅವರಿಗೆ ದೇವರು ಉತ್ತಮ ಆರೋಗ್ಯ, ಸುಖ ಶಾಂತಿ ಕರುಣಿಸಿ, ಇನ್ನಷ್ಟು ಕಾಲ ರಾಜ್ಯದ ಸೇವೆ ಮಾಡಲಿ ಎಂದು ಶುಭ ಕೋರಿದರು.

# ಪೌರಕಾರ್ಮಿಕರಿಗೆ ಕಂಬಳಿ, ಸ್ಕಾರ್ಫ್, ಟೋಪಿ ವಿತರಣೆ




ರಾಮನಗರ: ಚಳಿಯ ನಡುವೆಯೂ ಬೆಳ್ಳಂಬೆಳಿಗ್ಗೆ ನಗರವನ್ನು ಸ್ವಚ್ಛಗೊಳಿಸುವ ಕಾಯಕ ಆರಂಭಿಸುವ ಪೌರ ಕಾರ್ಮಿಕರ ಬಗ್ಗೆ ವರ್ತಕ ಶ್ರೀನಿವಾಸ್ ಕಾಳಜಿವಹಿಸಿದ್ದು, ನಗರಸಭೆಯ ಅಧ್ಯಕ್ಷ ಕೆ.ಶೇಷಾದ್ರಿ ಅವರ ಸಮ್ಮುಖದಲ್ಲಿ ಕಂಬಳಿ, ಸ್ಕಾರ್ಫ್, ಟೋಪಿಗಳನ್ನು ವಿತರಿಸಿದರು.

ಈ ವೇಳೆ ಮಾತನಾಡಿದ ನಗರಸಭಾಧ್ಯಕ್ಷ ಕೆ.ಶೇಷಾದ್ರಿ, ತೀವ್ರ ಚಳಿಯ ನಡುವೆಯೂ ಪೌರ ಕಾರ್ಮಿಕರು ಬೆಳಗಿನ ಜಾವ 5 ಗಂಟೆಗೆ ನಗರವನ್ನು ಸ್ವಚ್ಛಗೊಳಿಸುವ ಕಾಯಕ ಆರಂಭಿಸುತ್ತಿದ್ದಾರೆ. ಇವರ ಬಗ್ಗೆ ಕಾಳಜಿ ಇರಿಸಿ ವರ್ತಕ ಶ್ರೀನಿವಾಸ್ ರವರು ಕಂಬಳಿ, ಪುರುಷ ಕಾರ್ಮಿಕರಿಗೆ ಟೋಪಿ, ಮಹಿಳಾ ಕಾರ್ಮಿಕರಿಗೆ ಸ್ಕಾರ್ಫ್‌ಗಳನ್ನು ಕೊಡುಗೆ ನೀಡಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ನಗರಸಭೆಯಲ್ಲಿ ಸದ್ಯ 160 ಮಂದಿ ಪೌರ ಕಾರ್ಮಿಕರಿದ್ದಾರೆ. ಈ ಪೈಕಿ 60 ಮಂದಿಗೆ ವರ್ತಕ ಶ್ರೀನಿವಾಸ್ ಅವರು ಕಂಬಳಿ ಇತ್ಯಾದಿಯನ್ನು ಕೊಡುಗೆ ನೀಡಿದ್ದಾರೆ. ಈ ಸವಲತ್ತು ಯಾರಿಗೂ ತಾರತಮ್ಯ ಇಲ್ಲದೆ ಎಲ್ಲರಿಗೂ ಸಿಗಬೇಕು ಎಂಬ ಉದ್ದೇಶಕ್ಕೆ ಉಳಿದ 100 ಮಂದಿಗೆ ನಾವೆಲ್ಲರೂ ಸೇರಿ ನೀಡುತ್ತಿದ್ದೇವೆ ಎಂದರು.

ಪೌರ ನೌಕರರು ನಗರವನ್ನು ಸ್ವಚ್ಛಗೊಳಿಸಿ ನಾಗರೀಕರ ಆರೋಗ್ಯವನ್ನು ಕಾಪಾಡುತ್ತಿದ್ದಾರೆ. ಇವರೊಂದಿಗೆ ನಾವಿದ್ದೇವೆ ಎಂಬ ಸಂದೇಶ ರವಾನಿಸಲು ನಗರಸಭೆ ಹಾಗೂ ವರ್ತಕ ಶ್ರೀನಿವಾಸ್ ಚಳಿ ತಡೆದುಕೊಳ್ಳುವ ಧಿರಿಸನ್ನು ಕೊಡುಗೆ ನೀಡುತ್ತಿದ್ದೇವೆ. ಪೌರ ಕಾರ್ಮಿಕರ ಬಗ್ಗೆ ನಗರಸಭೆಗೆ ಕಾಳಜಿ ಇದ್ದು, ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ ಎಂದರು.

ಈ ವೇಳೆ ನಗರಸಭೆಯ ಉಪಾಧ್ಯಕ್ಷೆ ಗಿರಿಜಮ್ಮ, ಸ್ಥಾಯಿ ಸಮಿತಿ ಅಧ್ಯಕ್ಷ ಫೈರೋಜ್ ಪಾಶ, ಮಾಜಿ ಅಧ್ಯಕ್ಷ ಶಿವಕುಮಾರಸ್ವಾಮಿ, ವರ್ತಕ ಶ್ರೀನಿವಾಸ್, ಅಧಿಕಾರಿ ಸುಬ್ರಮಣಿ, ಪೌರ ನೌಕರರ ಸಂಘದ ಜಿಲ್ಲಾಧ್ಯಕ್ಷ ವೆಂಕಟೇಶ್ ಮುಂತಾದವರು ಉಪಸ್ಥಿತರಿದ್ದರು.

# ಕಾರಣ ತಿಳಿಸದೆ ಆರ್.ಐ ವರ್ಗಾವಣೆ; ಆಕ್ಷೇಪ



ರಾಮನಗರ: ನಗರಸಭೆಯ ಕಂದಾಯ ನಿರೀಕ್ಷಕ ನಾಗರಾಜು ಅವರನ್ನು ಏಕಾಏಕಿ ವರ್ಗಾವಣೆ ಮಾಡಿರುವ ಕಾರಣವನ್ನು ಸರ್ಕಾರ ತಿಳಿಸಿಲ್ಲ. ಉತ್ತಮವಾಗಿ ಕರ್ತವ್ಯ ನಿರ್ವಹಿಸುತ್ತಿರುವವನ್ನು ಹೀಗೆ ಏಕಾಏಕಿ ವರ್ಗಾವಣೆ ಮಾಡುವ ಇಂತಹ ನಡೆಗಳು ಸರ್ಕಾರಿ ನೌಕರರಲ್ಲಿ ನೈತಿಕತೆ ಕುಸಿಯಲು ಕಾರಣವಾಗುತ್ತದೆ ಎಂದು ಕರ್ನಾಟಕ ರಜ್ಯ ಸರ್ಕಾರಿ ಎಸ್ಸಿ ಎಸ್ಟಿ ನೌಕರರ ಸಮನ್ವಯ ಸಮಿತಿ ಅಧ್ಯಕ್ಷ ಡಿ.ಶಿವಶಂಕರ್ ಅಸಮಾಧಾನ ವ್ಯಕ್ತಪಡಿಸಿದರು.

ನಗರದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು. ರಾಮನಗರ ನಗರಸಭೆಯ ಕಂದಾಯ ಅಧಿಕಾರಿ ಆರ್.ನಾಗರಾಜು, ಕರ್ನಾಟಕ ರಾಜ್ಯ ಪೌರ ನೌಕರರ ಸಂಘದ ರಾಜ್ಯ ಉಪಾಧ್ಯಕ್ಷರಾಗಿಯೂ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಕಂದಾಯ ನಿರೀಕ್ಷಕರಾಗಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಅವರ ವಿರುದ್ಧ ಸಾರ್ವಜನಿಕರಿಂದ ಯಾವ ದೂರುಗಳು ಇಲ್ಲ. ಹೀಗಿದ್ದೂ ಅವರ ವರ್ಗಾವಣೆಯಾಗಿದೆ. ಇದರ ಹಿಂದೆ ಪಟ್ಟಭದ್ರ ಹಿತಾಸಕ್ತಿಗಳ ಕೈವಾಡವಿದೆ ಎಂದರು.

ಮಂಡ್ಯದಿಂದ ರಾಮನಗರಕ್ಕೆ ಅವರು ಕೇವಲ 5 ತಿಂಗಳು 18 ದಿನಗಳಾಗಿವೆ. ಅಷ್ಟರಲ್ಲಾಗಲೆ ಅವರ ವಗಾವಣೆಗೆ ಆದೇಶವಾಗಿದೆ. ಕಾಣದ ಕೈಗಳು ಅವರನ್ನು ಕಾನೂನು ಬಾಹೀರವಾಗಿ ವರ್ಗಾವಣೆ ಮಾಡಿಸಿವೆ. ಅತ್ಯಂತ ತಳಮಟ್ಟದಿಂದ ಬಂದಿರುವ ನಾಗರಾಜು ಅವರ ಏಕಾಏಕಿ ವಗಾವಣೆ ಎಲ್ಲ ನೌಕರರಲ್ಲೂ ನೋವುಂಟು ಮಾಡಿದೆ. ಸರ್ಕಾರ ತಕ್ಷಣ ಅವರ ವರ್ಗಾವಣೆ ಆದೇಶವನ್ನು ಹಿಂದಕ್ಕೆ ಪಡೆಯಬೇಕು, ಇಲ್ಲದಿದ್ದರೆ ರಾಜ್ಯಾದ್ಯಂತ ಹೋರಾಟಕ್ಕೆ ಕರೆ ನೀಡಬೇಕಾಗುತ್ತದೆ ಎಂದು ಅವರು ಎಚ್ಚರಿಸಿದ್ದಾರೆ. ಪತ್ರಿಕಾಗೋಷ್ಠಿಯಲ್ಲಿ ಸಂಘದ ಹಿರಿಯ ಉಪಾಧ್ಯಕ್ಷರುಗಳಾದ ಆರ್.ಮೋಹನ್ ಮತ್ತು ಬಸವರಾಜು ಉಪಸ್ಥಿತರಿದ್ದರು.

**ವಿಶ್ವ ಮಾನವ ಕುವೆಂಪು ಜನ್ಮದಿನ**

# ಕುವೆಂಪು ಗೀತ ಗಾಯನ ಕಾರ್ಯಕ್ರಮ

ಚಾಮರಾಜನಗರ: ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ವಿಶ್ವ ಮಾನವ ಕುವೆಂಪು ರವರ ಜನ್ಮದಿನ ಹಾಗೂ ಕುವೆಂಪು ಗೀತ ಗಾಯನ ಕನ್ನಡ ಸಾಹಿತ್ಯ ಪರಿಷತ್ತಿನ ಸಭಾಂಗಣದಲ್ಲಿ ಜರುಗಿತು.

ಕುವೆಂಪು ರವರ ಗೀತೆಯನ್ನು ಹಾಡುವ ಮೂಲಕ ಗಡಿನಾಡು ಜನಪದ ಗಾಯಕ ಜ ಸುರೇಶ್ ನಾಗ್ ಹರದನಹಳ್ಳಿ ಉದ್ಘಾಟಿಸಿದರು. ಕುವೆಂಪು ಮಾನವೀಯತೆಯ ಸಾರವನ್ನು ಜಗತ್ತಿಗೆ ಕನ್ನಡ ಸಾಹಿತ್ಯ ರಚನೆಯ ಮೂಲಕ ಹರಡಿ. ಕನ್ನಡಿಗರಿಗೆ ಗೌರವ ತಂದವರು ಎಂದರು.

ಭಾವಚಿತ್ರಕ್ಕೆ ಪುಷ್ಪ ಸಲ್ಲಿಸಿ. ಮಾತನಾಡಿದ ಎಸ್ ಲಕ್ಷ್ಮೀನರಸಿಂಹ ಕುವೆಂಪು ವಿಶ್ವಕವಿ. ಅವರ ಭಾವಗೀತೆಗಳು, ನಾಟಕಗಳು,ಕೃತಿಗಳು ಸಾಮಾಜಿಕ, ಪರಿಸರ ಹಾಗೂ ಗಂಭೀರ ವಿಚಾರಗಳ ಸಂಪೂರ್ಣ ಚಿಂತನೆಯ ಸಾಹಿತ್ಯವಾಗಿದೆ. ಇಂಗ್ಲಿಷ್ ಸಾಹಿತ್ಯ ರಚನೆಯ ಒಲವು ಹೊಂದಿದ್ದ ಕುವೆಂಪು ರವರನ್ನು ಗುರುಗಳ ಮಾತಿನಂತೆ ಕನ್ನಡದಲ್ಲಿ ಬರೆಯಲು ಆರಂಭಿಸಿ ಕನ್ನಡಕ್ಕೆ ಜ್ಞಾನಪೀಠ ಪ್ರಶಸ್ತಿಯನ್ನು ತಂದು




ಕೊಟ್ಟವರು ಎಂದರು.ಶಿಕ್ಷಕ ಯಳಂದೂರು ರಂಗನಾಥ್ ಕುವೆಂಪುರವರ ಕವಿತೆಗಳ ವಾಚನ ನಡೆಸಿದ

ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಸುರೇಶ್ ಎನ್ ಋಗ್ವೇದಿ ಮಾತನಾಡಿ. ಕುವೆಂಪು ಸಾಹಿತ್ಯದ ಮೇಲೆ ಶಿಖರ. ಕುವೆಂಪುರವರು ರಾಮಕೃಷ್ಣ ಪರಮಹಂಸರ ಚಿಂತನೆ, ರಾಮಕೃಷ್ಣ ಆಶ್ರಮದ ಪ್ರಭಾವಕೆ ಒಳಗಾಗಿ ಆಧ್ಯಾತ್ಮಿಕ ಹಾಗೂ ಪರಿಸರ, ಸಾಮಾಜಿಕ ಮೌಲ್ಯಗಳನ್ನು ಸಮಾಜಕ್ಕೆ ಸಾಹಿತ್ಯದ ಮೂಲಕ ನೀಡಿ ಮಾನವ ಕಲ್ಯಾಣವನ್ನು ಉಂಟು ಮಾಡಿದವರು . ಇಂದಿಗೂ ಕುವೆಂಪುರವರ ಲಕ್ಷಾಂತರ ಓದುಗರು ಇರುವುದನ್ನು ಕಾಣಬಹುದು. ಕುವೆಂಪು ಅವರಿಗೆ ಆಧ್ಯಾತ್ಮ ಪುರುಷರ ಪ್ರಭಾವವಿದ್ದು ,ರಾಷ್ಟ್ರೀಯ ಚಿಂತನೆಗಳನ್ನು ಹಾಗೂ ನಾಡಿನ ಭಾವಗಳನ್ನು ಶಕ್ತಿಯುತವಾಗಿ ಸಾಹಿತ್ಯದ ಮೂಲಕ ರಚಿಸಿ ಪ್ರೇರಣೆ ನೀಡಿದ್ದರು ಎಂದು ಹೇಳಿದರು. ಕನ್ನಡ ಮಹಾಸಭಾ ಅಧ್ಯಕ್ಷ ಶ್ರೀ ಶ್ರೀನಿವಾಸಗೌಡ, ಕನ್ನಡ ಸಾಹಿತ್ಯ ಪರಿಷತ್ತಿನ ಬಿಕೆ ಆರಾಧ್ಯ, ಶಿವಲಿಂಗಮೂರ್ತಿ, ರವಿ ಚಂದ್ರ ಪ್ರಸಾದ್, ಪದ್ಮಪುರುಷೋತ್ತಮ್, ಜಗದೀಶ ಇತರರು ಹಾಜರಿದ್ದರು.

# ಮನರೇಗಾ ದುರುಪಯೋಗ ತಡೆಯುವ ಉದ್ದೇಶದಿಂದ ವಿಬಿ-ಜಿ ರಾಮ್ ಜಿ ಮಸೂದೆ

## ಮೈಸೂರು-ಕೊಡಗು ಸಂಸದ ಯದುವೀರ್ ಒಡೆಯರ್ ಸ್ಪಷ್ಟನೆ

**ಮಂಡ್ಯ:** ಹೊಸ ಕಾಯ್ದೆಯಿಂದ ನರೇಗಾ ಯೋಜನೆಯ ಅವ್ಯವಹಾರ, ದುರುಪಯೋಗಗಳನ್ನು ತಡೆಯುವ ಉದ್ದೇಶದಿಂದ ವಿಬಿ ಜಿರಾಮ್ ಜಿ ಯೋಜನೆಯಾಗಿ ಸ್ವರೂಪ ಬದಲಿಸಲಾಗಿದೆ ಎಂದು ಮೈಸೂರು-ಕೊಡಗು ಸಂಸದ ಯದುವೀರ್ ಒಡೆಯರ್ ತಿಳಿಸಿದರು.




ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮನರೇಗಾ ಯೋಜನೆಯ ಲೋಪದೋಷಗಳನ್ನು ಸರಿಪಡಿಸಿ ಹೊಸದಾಗಿ ವಿಬಿಜಿ ರಾಮಜಿ ಕಾಯ್ದೆ ಜಾರಿಗೆ ತರಲಾಗಿದೆ. ಮನರೆಗಾದಲ್ಲಿನ ಭ್ರಷ್ಟಾಚಾರವನ್ನು ತಡೆಗಟ್ಟಲು ಪಾರದರ್ಶಕತೆ ಕಾಯ್ದುಕೊಳ್ಳಲು ಹಾಗೂ ರಾಜ್ಯ ಸರಕಾರಗಳ ಸಹಭಾಗಿತ್ವದೊಂದಿಗೆ ಯೋಜನೆ ಮುಂದುವರೆಸಲು ಸ್ವರೂಪ ಬದಲಿಗೆ ಹೊಸದಾಗಿ ವಿಬಿಜಿ ರಾಮ್ ಜಿ ಕಾಯ್ದೆಯನ್ನು ಜಾರಿಗೆ ತರಲಾಗಿದೆ ಎಂದು ಸಮರ್ಥಿಸಿಕೊಂಡರು.

ನಕಲಿ ಜಾಬ್ ಕಾರ್ಡ್‌ಗಳು, ಕೃತಕ ಪಲಾನುಭವಿಗಳು, ಕಲ್ಪಿತ ಮಾಸ್ಟರ್ ರೋಲ್‌ಗಳು, ಕಾರ್ಮಿಕರಿಗೆ ಭಾಗಶಃ ವೇತನ ಪಾವತಿಯಂತಹ ಅನೇಕ ಹಗರಣಗಳು ನಡೆದಿವೆ. ಇದರಿಂದ ಪಶ್ಚಿಮ ಬಂಗಳ, ಪಂಜಾಬ್, ತೆಲಂಗಾಣ ರಾಜ್ಯಗಳಲ್ಲಿ ಸಾವಿರಾರು ಕೋಟಿ ರೂ ಹಣ ದುರ್ಬಳಕೆಯಾಗಿರುವುದು ಬಹಿರಂಗಗೊಂಡಿವೆ ಎಂದು ಹೇಳಿದರು.

ಮನರೇಗಾ ಕಾಮಗಾರಿಗಳು ಕೃಷಿ ಋತುವಿನಲ್ಲಿ ಮುಂದುವರೆದ ಕಾರಣದಿಂದ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಕಾರ್ಮಿಕರ ಕೊರತೆ ಸೃಷ್ಟಿಸುತ್ತಿದೆ. ಇದರಿಂದ ಕೃಷಿಯ ವೆಚ್ಚವು ದುಬಾರಿಯಾಗಿತ್ತು. ಕಾನೂನಿನಲ್ಲಿ ನಿರುದ್ಯೋಗ ಭತ್ಯೆ, ವಿಳಂಬದ ವೇತನ ಪಾವತಿಗೆ ಪರಿಹಾರ ಒದಿಗಸಲಾಗಿತ್ತು ಆದರೆ ಅವುಗಳ ಪಾವತಿ ವಿರಳ ಮತ್ತು ನಿಬಂಧನೆಗಳು ಸಾಂಕೇತವಾಗಿ ಮಾತ್ರ ಇದ್ದವು ಎಂದು ತಿಳಿಸಿದರು.

ವಿಬಿ ಗ್ರಾಮ ಜಿ ಯೋಜನೆಯಡಿ ಕೂಲಿ ದಿನಗಳ ಸಂಖ್ಯೆಯನ್ನು 100 ರಿಂದ 125 ಕ್ಕೆ ಹೆಚ್ಚಿಸಲಾಗಿದೆ. ಹೊಸ ಯೋಜನೆಯಡಿ ಕೇಂದ್ರ ಸರಕಾರ ಶೇ.60ರಷ್ಟು ರಾಜ್ಯ ಸರ್ಕಾರ ಶೇ. 40 ರಷ್ಟು ಹಣ ಭರಿಸಬೇಕಾಗಿದೆ. ಜಲ ಸಂಬಂಧಿ ಕಾಮಗಾರಿ, ಗ್ರಾಮೀಣ ಮೂಲ ಸೌಕರ್ಯ, ಜೀವನೋಪಾಯ ಸಂಬಂಧ ಮೂಲಸೌಕರ್ಯ, ಹವಾಮಾನ ವೈಪರಿತ್ಯ, ವಿಪತ್ತಿನ ಸನ್ನದ್ದತೆಗಳನ್ನು ತಗ್ಗಿಸಲು ವಿಶೇಷ ಕಾರ್ಯಗಳಿಗೆ ನೇರವಾಗಿ ಕೊಡುಗೆ ನೀಡುತ್ತದೆ ಎಂದರು. ಈ ಯೋಜನೆಯಲ್ಲಿ ಎಐ ತಂತ್ರಜ್ಞಾನ ಬಳಸಲಾಗುತ್ತಿದೆ. ಜಿಯೋ-ಟ್ಯಾಗಿಂಗ್, ಉಪಗ್ರಹ ಚಿತ್ರಣ, ನೈಜ-ಸಮಯದ ಟ್ಯಾಗಿಂಗ್‌ಗೆ ಮೊಬೈಲ್ ಅಪ್ಲಿಕೇಶನ್, ಎಐ ಆಧಾರಿತ ವಂಚನೆ ಪತ್ತೆ ಮತ್ತು ವಿಶ್ಲೇಷಣೆ, ಕಾಲ ಮಿತಿಯಲ್ಲಿ ವೇತನ ಪಾವತಿ, ಧನಸಹಾಯದ ಚೌಕಟ್ಟು ಮತ್ತು ಹಣಕಾಸಿನ ಶಿಸ್ತು ಸೇರಿದಂತೆ ಹಲವು ವಿಭಾಗಗಳಲ್ಲಿ ಭ್ರಷ್ಟಾಚಾರ ಮತ್ತು ಹಣ ದುರುಪಯೋಗ ನಿಯಂತ್ರಿಸುತ್ತದೆ ಎಂದು ವಿವರಿಸಿದರು.

2005ರಿಂದ ಜಾರಿಯಲ್ಲಿರುವ ಮನರೇಗಾ ಯೋಜನೆಗೆ 12.5 ಲಕ್ಷ ಕೋಟಿ ರೂಗಳ ಅನುದಾನ ಬಳಕೆಯಾಗಿದೆ. ಆದರೆ, ಎನ್‌ಡಿಎ ಸರಕಾರದ ಅವದಿಯಲ್ಲೇ 8 ಲಕ್ಷ ಕೋಟಿ ರೂ.ಗಳ ಅನುದಾನ ಬಿಡುಗಡೆಯಾಗಿದ್ದು. ಉಳಿದಂತೆ ಅಧಿಕ ಅವಧಿಗೆ ಉಪಿಎ ಸರಕಾರದಿಂದ 4.5 ಲಕ್ಷ ಕೋಟಿ ರೂ.ಗಳ ಅನುದಾನ ನೀಡದೆ ಎಂದು ಪ್ರಶ್ನೆಯೊಂದಕ್ಕೆ ಉತ್ತರ ನೀಡಿದರು.

ಗೋಷ್ಠಿಯಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಇಂದ್ರೇಶ್, ಜಿಲ್ಲಾ ರೈತ ಮೋರ್ಚಾ ಅಧ್ಯಕ್ಷ ಅಶೋಕ್, ಜಿಲ್ಲಾ ವಕ್ತಾರ ಸಿ.ಟಿ.ಮಂಜುನಾಥ್, ಮಾಧ್ಯಮ ವಕ್ತಾರ ನಾಗಾನಂದ ಇದ್ದರು.

# ಜ್ಞಾನ ಎಂದರೆ ಮನಸ್ಸಿನ ಮೇಲೆ ನಿಯಂತ್ರಣ

## ರಾಜ ಯೋಗಿನಿ ಬ್ರಹ್ಮಾಕುಮಾರಿ ದಾನೇಶ್ವರೀಜೀ ಅಭಿಮತ

**ಚಾಮರಾಜನಗರ:** ಮನಸ್ಸಿನ ಮೇಲೆ ನಿಯಂತ್ರಣವಿಲ್ಲದೆ ನಿನ್ನ ಬಳಿ ಎಷ್ಟೇ ಜ್ಞಾನವಿದ್ದರೂ ಅದು ವ್ಯರ್ಥವಾಗಿರುತ್ತದೆ ಜ್ಞಾನ ಎಂದರೆ ಮನಸ್ಸಿನ ಮೇಲೆ ನಿಯಂತ್ರಣ ಎಂದು ಅರ್ಥ ಎಂದು ರಾಜ ಯೋಗ ಶಿಕ್ಷಣ ತಜ್ಞೆ ರಾಜಯೋಗಿನಿ ಬ್ರಹ್ಮಾಕುಮಾರಿ ದಾನೇಶ್ವರೀಜೀ ಅಭಿಪ್ರಾಯಪಟ್ಟರು.

ಅವರು ಹಸಿರು ಪಡೆ ವತಿಯಿಂದ ಪ್ರಕಾಶಭವನದಲ್ಲಿ ಏರ್ಪಡಿಸಲಾಗಿದ್ದ ಹಸಿರುಪಡೆ ದಿನದರ್ಶಿನಿಯನ್ನು ಬಿಡುಗಡೆಗೊಳಿಸಿ ಮಾತನಾಡುತ್ತಿದ್ದರು.

ಹೊಸ ವರುಷವು ಹರುಷವನ್ನು ತರಲಿ, ಇದಕ್ಕಾಗಿ ಜೀವನದ ಕಹಿಯನ್ನು ಮರೆತು ಸಿಹಿಯನ್ನು ನೆನೆಯೋಣ. ಪಾಪ ಕರ್ಮಗಳ ಹೊರೆಯನ್ನು ಇಳಿಸಿ ಪುಣ್ಯಕರ್ಮಗಳ ನಿಧಿಯನ್ನು ಪಡೆಯೋಣ. ಸಂಕುಚಿತ ಮನೋಭಾವನೆಯನ್ನು ತ್ಯಜಿಸಿ, ವಿಶಾಲ ಭಾವನೆಗಳನ್ನು ಬೆಳೆಸಿಕೊಂಡು ವಿಶ್ವಕಲ್ಯಾಣಿಯಾಗೋಣ, ಮುಖದಲ್ಲಿ ಮಂದಹಾಸವನ್ನು ಪಡೆದು ಅನ್ಯರ ಮುಖದಲ್ಲಿಯೂ ನಗುವನ್ನು ತರೋಣ. ಮಗುವಿನಂತೆ ಕೆಟ್ಟದ್ದರಿಂದ ಮುಗ್ದರಿದ್ದು.ಒಳ್ಳೆಯದಕ್ಕೆ ಅಂಟಿಕೊಳ್ಳೋಣ. ಹೆಜ್ಜೆ ಹೆಜ್ಜೆಗೂ ಪರಮಾತ್ಮನನ್ನು ನೆನೆಯುತ್ತಾ ಮುಂದೆ ಸಾಗೋಣ ಎಂದರು. ಹಸಿರು ಪಡೆಯವರು ಬಿಡುಗಡೆ ಮಾಡಿರುವ, ಪರಿಸರದಿಂದ ನಾವು ಪರಿಸರಕ್ಕಾಗಿ ನಾವು, ಸಕಲ ಜೀವಿಗಳ ಉಳಿವಿಗಾಗಿ ಪ್ರತಿ ಹನಿ ನೀರು ಅತ್ಯಮೂಲ, ಪರಿಸರ ಸಂರಕ್ಷಣೆಗೆ ಪ್ರತಿಯೊಬ್ಬರೂ ಕೈಜೋಡಿಸೋಣ, ಗಿಡ ನಕ್ಕರೆ ಜಗ ನಗುವುದು ಗಿಡ ಅಳಿದರೆ ಜಗ ಅಳಿಯುವುದು, ಗಿಡ ನೆಟ್ಟು ಬೆಳೆಸುವುದೆಂದರೆ ಅತಿ ದೊಡ್ಡ ಸಮಾಜ ಸೇವೆ, ಪ್ರಕೃತಿ ಇದ್ದರೆ ನಾವು,ಪ್ರಕೃತಿ ಮುನಿದರೆ ಸಾವು, ಪ್ಲಾಸ್ಟಿಕ್ ಬ್ಯಾಕ್ ತ್ಯಜಿಸಿ ಬಟ್ಟೆ ಬ್ಯಾಗ್ ಗಳನ್ನು ಉಪಯೋಗಿಸಿ.ಈ ಘೋಷವಾಕ್ಯಗಳು ಇಂದಿನ ಸಮಾಜಕ್ಕೆ ಬಹಳ ಅವಶ್ಯಕವಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಓಂ ಶಾಂತಿ ನ್ಯೂಸ್ ಸರ್ವಿಸ್ ನ ಬ್ರಹ್ಮಾ ಕುಮಾರ ಆರಾಧ್ಯ, ಸಂಜೀವಿನಿ ಟ್ರಸ್ಟ್ ನ ಕಾರ್ಯದರ್ಶಿ ಬಿಕೆ ಸತೀಶ್, ಆರೋಗ್ಯ ಇಲಾಖೆಯ, ಗೀತಾ ಪುಷ್ಪ, ನ್ಯಾಯಾಂಗ ಇಲಾಖೆಯ ಶ್ರೀನಿವಾಸ್, ಶಿಕ್ಷಣ ಇಲಾಖೆಯ ನಾಗರಾಜು ಪ್ರಮಿಳ ಊದುಗಡ್ಡಿ, ಸುಂದರ್, ಅರಣ್ಯ ಇಲಾಖೆಯ ಪುಟ್ಟಶೇಖರ ಮೂರ್ತಿ ಪೊಲೀಸ್ ಇಲಾಖೆಯ ಸಿದ್ದಯ್ಯ, ಲಕ್ಷ್ಮೀನರಸಿಂಹ ಪ್ರಸಾದ್, ಸುನೀತಾ, ರಂಗನಾಥ್, ಅಕ್ಷತಾ ಜೈನ್, ಪಾರ್ವತಿ ಮುಂತಾದವರು ಹಾಜರಿದ್ದರು.




# ಯಾರ ಬೆದರಿಕೆಗಳಿಗೂ ನಾನು ಜಗ್ಗುವುದಿಲ್ಲ, ಬಗ್ಗುವುದಿಲ್ಲ: ಕೆ.ಎಂ.ಉದಯ್

**ಕೆ.ಎಂ.ದೊಡ್ಡಿ:** ಕಳೆದ ಎರಡೂವರೆ ವರ್ಷಗಳಿಂದ ಮದ್ದೂರು ವಿಧಾನಸಭಾ ಕ್ಷೇತ್ರದಲ್ಲಿ ನಡೆಯುತ್ತಿರುವ ಅಭಿವೃದ್ಧಿ ಕೆಲಸಗಳನ್ನು ಕಂಡು ವಿರೋಧಿಗಳು ನನ್ನ ವಿರುದ್ಧ ಜನರನ್ನು ಎತ್ತಿ ಕಟ್ಟುತ್ತಿದ್ದು ಯಾರ ಬೆದರಿಕೆಗಳಿಗೂ ನಾನು ಜಗ್ಗುವುದಿಲ್ಲ...ಬಗ್ಗುವುದಿಲ್ಲ ಎಂದು ಶಾಸಕ ಕೆ.ಎಂ.ಉದಯ್ ಎಚ್ಚರಿಸಿದರು.

ಸಮೀಪದ ಕಾಡುಕೊತ್ತನಹಳ್ಳಿ ಶ್ರೀಮಹದೇಶ್ವರ ದೇವಾಲಯದ ಸಮೀಪದ ಹೆಬ್ಬಕವಾಡಿ ನಾಲೆ ಬಳಿ ಕಾವೇರಿ ನೀರಾವರಿ ನಿಗಮದ ವತಿಯಿಂದ ಸುಮಾರು 40 ಕೋಟಿ ರು. ವೆಚ್ಚದಲ್ಲಿ ಹೆಬ್ಬಕವಾಡಿ ನಾಲಾ ಆಧುನಿಕರಣ ಕಾಮಗಾರಿಗೆ ಭೂಮಿಪೂಜೆ ನೆರೆವೆರಿಸಿ ಮಾತನಾಡಿದರು.



ಗೆಜ್ಜಲಗೆರೆ ಸೇರಿದಂತೆ ಮದ್ದೂರಿನ ಸುತ್ತಾಮುತ್ತ ನಾಲ್ಕು ಗ್ರಾಮ ಪಂಚಾಯ್ತಿಗಳನ್ನು ನಗರಸಭೆಗೆ ಸೇರ್ಪಡೆ ಮಾಡಿರುವುದು ನನ್ನ

ಸ್ವಾರ್ಥಕ್ಕಲ್ಲ. ಗ್ರಾಮಗಳ ಅಭಿವೃದ್ಧಿಗಾಗಿ ಸೇರಿಸಿದ್ದೇನೆ. ಕೆಲವರು ಇದರಲ್ಲಿ ರಾಜಕಾರಣ ಮಾಡುತ್ತಿದ್ದಾರೆ. ಗ್ರಾಪಂಗಳು ನಗರಸಭೆಗೆ ಸೇರಿದರೆ ಅಭಿವೃದ್ಧಿ ಸಾಧ್ಯ ಎಂಬ ಚಿಂತನೆ ಹೊಂದಿದ್ದೇನೆ ಎಂದು ತಿಳಿಸಿದರು. ಜನರ ಕಲ್ಯಾಣಕ್ಕಾಗಿ ನಾನು ಸರಕಾರ ಮಟ್ಟದಿಂದ ಪುರಸಭೆಯಿಂದ ನಗರಸಭೆಯನ್ನು ಮಾಡಿದ್ದೇನೆ. ಇದರಿಂದ ನನಗೆ ವೈಯಕ್ತಿಕ ಉಪಯೋಗವಿಲ್ಲದ್ದರೂ ಕೆಲವರು ನಗರಸಭೆಗೆ ಗ್ರಾಪಂಗಳ ಸೇರ್ಪಡೆ ವಿರುದ್ಧ ಹೋರಾಟ ನಡೆಸುತ್ತಿದ್ದಾರೆ ಎಂದು ಟೀಕಿಸಿದರು.

ಸರಕಾರದಿಂದ 1500 ಕೋಟಿಗೂ ಹೆಚ್ಚಿನ ಅನುದಾನ ತಂದು ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸಲಾಗುತ್ತಿದ್ದೇನೆ. ಈ ವಿಚಾರದಲ್ಲಿ ಯಾರ ಮುಲಾಜಿಗೂ ಒಳಗಾಗಿಲ್ಲ. ಕ್ಷೇತ್ರದ ರೈತರ ಹಾಗೂ ಜನತೆಯ ಕಲ್ಯಾಣಕ್ಕೆ ಬದ್ಧನಾಗಿ ಕೆಲಸ ಮಾಡುತ್ತಿದ್ದೇನೆ ಎಂದರು.

ನಾನು ಶಾಸಕನಾಗಿ ಆಯ್ಕೆಯಾಗಿ ಗ್ರಾಮಗಳಿಗೆ ಭೇಟಿ ನೀಡಿದಾಗ ರೈತರು ಹಾಗೂ ಜನತೆ ನನಗೆ ರಸ್ತೆ, ಚರಂಡಿ ಹಾಗೂ ಕಾಲುವೆಗಳ ಆಧುನಿಕರಣಕ್ಕೆ ಸಂಬಂಧಿಸಿದಂತೆ ಮನವಿ ಸಲ್ಲಿಸಿದ್ದರು. ರೈತರ ಮನವಿಗೆ ಸ್ಪಂದಿಸಿ ಸರ್ಕಾರದಿಂದ ಹೆಚ್ಚಿನ ಅನುದಾನ ತಂದು ನಾಲೆಗಳ ಆಧುನಿಕರಣ ಕಾಮಗಾರಿಗೆ ಚಾಲನೆ ನೀಡಿದ್ದೇನೆ ಎಂದರು.

ನಾಲೆಗಳು, ಕಾಲುವೆಗಳು ಆಧುನಿಕರಣಗೊಳ್ಳದೆ ಈ ಹಿಂದೆ ಕೆ.ಆರ್.ಎಸ್ ಜಲಾಶಯದಿಂದ ನೀರು ವಿಳಂಬವಾಗಿ ಬರುತ್ತಿತ್ತು. ಇದರಿಂದ ರೈತರಿಗೆ ನಿಗದಿತ ವೇಳೆಯಲ್ಲಿ ನೀರು ಸಿಗದೆ ಬೆಳೆಗಳು ಒಣಗುತ್ತಿದ್ದವು. ಈಗ ನಾಲೆಗಳ ಅಭಿವೃದ್ಧಿಯಿಂದ ಸರಾಗವಾಗಿ ಒಂದೇ ದಿನದಲ್ಲಿ ಜಮೀನುಗಳಿಗೆ ತಲುಪಿ ಬೆಳೆಗಳಿಗೆ ಸೂಕ್ತ ಸಮಯದಲ್ಲಿ ನಿರುಣಿಸುವಂತೆ ಮಾಡಿದ್ದೇನೆ ಎಂದು ಹೇಳಿದರು.

ಹೆಬ್ಬಕವಾಡಿ ನಾಲೆಯನ್ನು ಸುಮಾರು 40 ಕೋಟಿ ರು. ವೆಚ್ಚದಲ್ಲಿ ಸುಮಾರು 30 ರಿಂದ 40 ಗ್ರಾಮಗಳ ರೈತರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಕಾಮಗಾರಿಗೆ ಚಾಲನೆ ನೀಡಿದ್ದೇವೆ. ರೈತರು ಭವಿಷ್ಯದ ದೃಷ್ಟಿಯಿಂದ ಒಂದು ಬೆಳೆಗೆ ಮಹತ್ವ ನೀಡದೆ ನಾಲಾ ಅಧುನಿಕರಣಕ್ಕೆ ಸಹಕಾರ ನೀಡಬೇಕು ಎಂದು ಕೋರಿದರು.

ಕಾಡುಕೊತ್ತನಹಳ್ಳಿಗೆ 2ಕೋಟಿಗೂ ಹೆಚ್ಚಿನ ಅನುದಾನವನ್ನು ಒಂದೇ ಗ್ರಾಮಕ್ಕೆ ನೀಡಿದ್ದು ಹೆಬ್ಬಕವಾಡಿ ನಾಲೆ ವ್ಯಾಪ್ತಿಯ ಭಾಗದ ರೈತರು ಕಾಮಗಾರಿಗೆ ಹಾಗೂ ಶಾಸಕರ ಅಭಿವೃದ್ಧಿಗೆ ಸಹಕಾರ ನೀಡಬೇಕು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಹಿರಿಯ ಕಾರ್ಯಪಾಲಕ ಅಭಿಯಂತರು ನಂಜುಂಡೇಗೌಡ, ಕಾಡುಕೊತ್ತನಹಳ್ಳಿ, ಗ್ರಾ.ಪಂ ಅಧ್ಯಕ್ಷ ಜಯರಾಜು, ಮಾಜಿ ಅಧ್ಯಕ್ಷ ದಯಾನಂದ್, ತಾಪಂ ಮಾಜಿ ಸದಸ್ಯ ಕಪನಿಗೌಡ, ಕೆಪಿಸಿಸಿ ಸದಸ್ಯ ಎಸ್.ಚಿದಂಬರ ಮೂರ್ತಿ, ಮುಖಂಡರಾದ ಮಾದೇಗೌಡ,ಕೆ.ಸಿ. ಮಹದೇವು, ಎಸ್ಸಿ ಬ್ಲಾಕ್ ಅಧ್ಯಕ್ಷ ಅಮೀನ್ ಶಿವಲಿಂಗಯ್ಯ , ಯುವ ಕಾಂಗ್ರೆಸ್ ಘಟಕದ ಅಧ್ಯಕ್ಷ ಪ್ರಜಾಪ್ರಿಯ ವೆಂಕಟೇಶ್, ಯಡಗನಹಳ್ಳಿ ಕೆಂಚೆಗೌಡ , ಗ್ರಾಪಂ ಉಪಾಧ್ಯಕ್ಷ ಲೋಕೇಶ್, ಎಇಇ ರಾಜೇಶ್, ಸೇರಿದಂತೆ ಹಲವರು ಉಪಸ್ಥಿತರಿದ್ದರು.

## ಸೂಳೆಕೆರೆಯಲ್ಲಿ ಹೂಳೆತ್ತುವ ಕಾಮಗಾರಿಗೆ ಜ.18 ಭೂಮಿಪೂಜೆ

ಸೂಳೆಕೆರೆಯಲ್ಲಿ ಹೂಳೆತ್ತುವ ಅಧುನಿಕರಣಗೊಳಿಸುವ ಸಂಬಂಧ ಜ.18 ರಂದು ಕಾಮಗಾರಿಗೆ ಗುದ್ದಲಿಪೂಜೆ ನೆರವೇರಿಸಲಾಗುವುದು. ಈಗಾಗಲೇ ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳು 300 ಎಕರೆಯನ್ನು ಒತ್ತುವರಿ ತೆರವು ಮಾಡಿದ್ದು ನಾಲಾ ವ್ಯಾಪ್ತಿಯ ಪಿಕಪ್ ನಾಲೆಗಳ ದುರಸ್ತಿ , ನಾಲೆಗಳ ಆಧುನಿಕರಣ ರಸ್ತೆಗಳು ಕಾಮಗಾರಿಗಳನ್ನು ನಡೆಸುವಾಗ ರೈತರು ಹಾಗೂ ಜನತೆ ಯಾವುದೇ ಅಡಚಣೆ ಮಾಡದೆ ಸಹಕಾರ ನೀಡಿದರೆ ಅಭಿವೃದ್ಧಿ ಸಾಧ್ಯ ಎಂದರು.



# 2020 ಹಾಗೂ 2021 ರ ರಾಜ್ಯ ಚಲನಚಿತ್ರ ಪ್ರಶಸ್ತಿಗಳು ಪ್ರಕಟ

## ಡಾ.ಜಯಮಾಲಾ, ಸಾ.ರಾ.ಗೋವಿಂದುಗೆ ಡಾ.ರಾಜ್‌ಪ್ರಶಸ್ತಿ | ಎಂ.ಎಸ್.ಸತ್ಯು, ಶಿವರುದ್ರಯ್ಯಗೆ ಪುಟ್ಟಣ್ಣ ಕಣಗಾಲ್ ಪ್ರಶಸ್ತಿ

- ಎಂ.ಎಸ್.ಸತ್ಯು, ಶಿವರುದ್ರಯ್ಯಗೆ ಪುಟ್ಟಣ್ಣ ಕಣಗಾಲ್ ಪ್ರಶಸ್ತಿ
- ಪ್ರಗತಿ ಅಶ್ವತ್ಥ, ಸುಂದರರಾಜ್ ಗೆ ಡಾ.ವಿಷ್ಣುವರ್ಧನ್ ಪ್ರಶಸ್ತಿ

**ಬೆಂಗಳೂರು:** ಕರ್ನಾಟಕ ಸರ್ಕಾರವು ಚಲನಚಿತ್ರ ರಂಗದಲ್ಲಿನ ಜೀವಮಾನ ಸಾಧನೆಗಾಗಿ ನೀಡುವ ಡಾ.ರಾಜಕುಮಾರ್, ಪುಟ್ಟಣ್ಣ ಕಣಗಾಲ್ ಹಾಗೂ ಡಾ.ವಿಷ್ಣುವರ್ಧನ್ ಪ್ರಶಸ್ತಿಗಳನ್ನು ಪ್ರಕಟಿಸಿದೆ.


2020 ಹಾಗೂ 2021 ನೇ ಕ್ಯಾಲೆಂಡರ್ ವರ್ಷಗಳ ಪ್ರಶಸ್ತಿಗಳು ಇವುಗಳಾಗಿವೆ.

ಹಿರಿಯ ನಟಿ ಡಾ.ಜಯಮಾಲಾ, ಸಾ.ರಾ. ಗೋವಿಂದು ಅವರಿಗೆ ಡಾ.ರಾಜ್‌ಪ್ರಶಸ್ತಿ, ಎಂ.ಎಸ್.ಸತ್ಯು, ಕೆ.ಶಿವರುದ್ರಯ್ಯ ಅವರಿಗೆ ಪುಟ್ಟಣ್ಣ ಕಣಗಾಲ್ ಪ್ರಶಸ್ತಿ, ಹಿರಿಯ ಸಿನಿಮಾ ಛಾಯಾಗ್ರಾಹಕ ಪ್ರಗತಿ ಅಶ್ವತ್ಥನಾರಾಯಣ, ಎಂ.ಕೆ.ಸುಂದರರಾಜ್ ಅವರು ಡಾ.ವಿಷ್ಣುವರ್ಧನ್ ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ ಎಂದು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಆಯುಕ್ತರಾದ ಹೇಮಂತ್ ಎಂ. ನಿಂಬಾಳ್ಕರ್ ತಿಳಿಸಿದ್ದಾರೆ.

ಈ ಕುರಿತು ಪ್ರಕಟಣೆ ನೀಡಿರುವ ಅವರು, 2020 ಹಾಗೂ 2021 ರ ಜೀವಮಾನ ಸಾಧನೆ ಪ್ರಶಸ್ತಿಗಳ ಆಯ್ಕೆಗೆ ಹಿರಿಯ ಸಾಹಿತಿ, ಚಲನಚಿತ್ರ ನಿರ್ದೇಶಕ ಪ್ರೊ. ಬರಗೂರು ರಾಮಚಂದ್ರಪ್ಪ ಅವರ ಅಧ್ಯಕ್ಷತೆಯಲ್ಲಿ ರಚಿಸಲಾಗಿದ್ದ ಸಮಿತಿಯಲ್ಲಿ, ಹಿರಿಯ ಸಿನೆಮಾಟೋಗ್ರಾಫರ್ ಬಿ.ಎಸ್.ಬಸವರಾಜ, ಹಿರಿಯ ಪತ್ರಕರ್ತ ರಘುನಾಥ ಚ.ಹ., ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕಿ ಗಾಯತ್ರಿ ಹಾಗೂ ವಾರ್ತಾ ಇಲಾಖೆಯ ಆಯುಕ್ತರು ಸದಸ್ಯರಾಗಿದ್ದರು, ಸಮಿತಿಯು ವಿಸ್ತೃತವಾಗಿ ಚರ್ಚಿಸಿದ ಬಳಿಕ ಸರ್ಕಾರಕ್ಕೆ ಕಳುಹಿಸಿದ್ದ ಸಲಹೆಗೆ ಮುಖ್ಯಮಂತ್ರಿ ಸಿದ್ಧರಾಮಯ್ಯನವರು ಅನುಮೋದನೆ ನೀಡಿದ ಬಳಿಕ ಸರ್ಕಾರದ ಆದೇಶ ಪ್ರಕಟಿಸಲಾಗಿದೆ. ಈ ಪ್ರಶಸ್ತಿಗಳು ತಲಾ 50 ಗ್ರಾಂ ಚಿನ್ನದ ಪದಕ ಹಾಗೂ ತಲಾ 5 ಲಕ್ಷ ರೂ.ಗಳ ನಗದು ಪುರಸ್ಕಾರ ಒಳಗೊಂಡಿದೆ.

**ಪ್ರಶಸ್ತಿ ಪುರಸ್ಕೃತರ ಪರಿಚಯ:**

**ಡಾ.ಜಯಮಾಲಾ– 2020 ರ ಡಾ.ರಾಜಕುಮಾರ್ ಪ್ರಶಸ್ತಿ;** ಕನ್ನಡ ಚಿತ್ರರಂಗ ಕಂಡ ಪ್ರತಿಭಾವಂತ ನಾಯಕ ನಟಿ ಜಯಮಾಲಾ. ಪಣಂಬೂರಿನಲ್ಲಿ 1959ರ ಫೆಬ್ರವರಿ 28ರಂದು ಜನಿಸಿದರು. ತಂದೆ ಓಮಯ್ಯ, ತಾಯಿ ಕಮಲಮ್ಮ. ಅವರ ಹಿರಿಯ ಸಹೋದರಿ ರತ್ನಮಾಲಾ ಗಾಯಕ ಮತ್ತು ನಟಿ. ಕಾಲಾನಂತರ ಜಯಮಾಲಾ ಅವರ ತಂದೆ ಚಿಕ್ಕಮಗಳೂರಿಗೆ ವಲಸೆ ಬಂದು ನೆಲೆಸಿದರು. ಪ್ರವೃತ್ತಿಯಲ್ಲಿ ಓಮಯ್ಯ ಯಕ್ಷಗಾನ ಕಲಾವಿದ. ಮನೆಯಲ್ಲಿನ ಕಲೆಯ ವಾತಾವರಣ ಜಯಮಾಲಾ ಅವರಿಗೆ ನಟನೆಯೆಡೆಗಿನ ಆಸಕ್ತಿಗೆ ಪ್ರೇರಣೆಯಾಯಿತು. ಸಂಗೀತದಲ್ಲೂ ಅಪಾರ ಆಸಕ್ತಿ ಇದ್ದ ಜಯಮಾಲಾ ಶಾಲೆ – ಕಾಲೇಜಿನಲ್ಲಿ ಹಾಡುಗಾರಿಕೆಯಿಂದ ಗುರುತಿಸಿಕೊಂಡಿದ್ದರು.




ಮುಂದೆ ತಂದೆ ಅನಾರೋಗ್ಯಕ್ಕೀಡಾದಾಗ ಜಯಮಾಲಾ ಅವರಿಗೆ ದುಡಿಯಬೇಕಾದ ಅನಿವಾರ್ಯತೆ ಸೃಷ್ಟಿಯಾಯಿತು. ಅಕ್ಕ ರತ್ನಮಾಲಾ ಜೊತೆ ಜಯಮಾಲಾ ಕೂಡ ನಾಟಕಗಳಲ್ಲಿ ಅಭಿನಯಿಸತೊಡಗಿದರು. 'ಗೀತಾರಹಸ್ಯ' ನಾಟಕ ಜಯಮಾಲಾ ಅವರಿಗೆ ಹೆಸರು ತಂದುಕೊಟ್ಟಿತು. ನಾಟಕಗಳಲ್ಲಿ ಜಯಮಾಲಾ ಅವರ ಪ್ರತಿಭೆಯನ್ನು ಗಮನಿಸಿದ ತುಳು ನಟ, ನಿರ್ಮಾಪಕ ಆನಂದಶೇಖರ್ ತಮ್ಮ 'ಕಾಸ್ದಾಯೆ ಕಂಡನೆ' ತುಳು ಚಿತ್ರದಲ್ಲಿ ಅವಕಾಶ ಕಲ್ಪಿಸಿದರು. ಮುಂದೆ ಜಯಮಲಾ 'ಯಾನ್ ಸನ್ಯಾಸಿ ಆಪೆ', 'ಏರ್ ಮಲ್ತಿನ ತಪ್ಪು', 'ಬಯ್ಯಮಲ್ಲಿಗೆ' ತುಳು ಚಿತ್ರಗಳಲ್ಲಿ ಅಭಿನಯಿಸಿದರು.

ಜಯಮಾಲಾ ಕ್ಯಾಮೆರಾ ಎದುರಿಸಿದ ಮೊದಲ ಕನ್ನಡ ಸಿನಿಮಾ 'ಬೂತಯ್ಯನ ಮಗ ಅಯ್ಯು'. ಮುಂದೆ 'ಯಾರು ಹಿತವರು' ಚಿತ್ರದಲ್ಲಿ ನಾಯಕಿಯಾಗಿ ಬಡ್ತಿ ಪಡೆದರು. ವರನಟ ಡಾ. ರಾಜಕುಮಾರ್ ಅವರ 'ಪ್ರೇಮದ ಕಾಣಿಕೆ' ಸಿನಿಮಾ ಜಯಾಮಾಲ ಅವರ ವೃತ್ತಿಬದುಕಿಗೆ ತಿರುವು ನೀಡಿತು. ಮುಂದೆ ರಾಜ್ ಅವರೊಂದಿಗೆ ಏಳು ಚಿತ್ರಗಳಲ್ಲಿ ಅಭಿನಯಿಸಿ ಖ್ಯಾತಿ ಗಳಿಸಿದರು. ಜಯಮಾಲಾ ಅವರು ನಾಯಕನಟಿಯಾಗಿ 70ಕ್ಕೂ ಹೆಚ್ಚು ಸಿನಿಮಾಗಳಲ್ಲಿ ನಟಿಸಿದ್ದಾರೆ. ಈ ಪಟ್ಟಿಯಲ್ಲಿ ತೆಲುಗು, ತುಳು, ತಮಿಳು – ಮಲಯಾಳಂ ಚಿತ್ರಗಳೂ ಇವೆ. ಎಂ.ಟಿ.ವಾಸುದೇವನಾಯರ್ ಅವರ ಮಲಯಾಳಂ ಸಿನಿಮಾ 'ದೇವಲೋಗಂ' ಅವರಿಗೆ ಹೆಸರು ತಂದುಕೊಟ್ಟಿತು. ಪೋಷಕ ಕಲಾವಿದೆಯಾಗಿಯೂ ಅವರು ಯಶಸ್ವಿ ನಟಿಯಾಗಿ ಗುರುತಿಸಿಕೊಂಡರು.

ಗಿರೀಶ್ ಕಾಸರವಳ್ಳಿ ನಿರ್ದೇಶನದ 'ತಾಯಿ ಸಾಹೇಬ', ಜಯಮಾಲಾ ಅವರ ಪ್ರತಿಭೆಯ ಮತ್ತೊಂದು ಮಜಲನ್ನು ಪರಿಚಯಿಸಿತು. ಸ್ವರ್ಣಕಮಲ ರಾಷ್ಟ್ರ ಪ್ರಶಸ್ತಿ ಗಳಿಸಿದ ಸಿನಿಮಾ ಹತ್ತಾರು ಚಿತ್ರೋತ್ಸವಗಳಲ್ಲಿ ಪ್ರದರ್ಶನಗೊಂಡು ಹತ್ತು – ಹಲವು ಪ್ರಶಸ್ತಿಗಳನ್ನು ಗಳಿಸಿತು. ಪ್ರೇಮದ ಕಾಣಿಕೆ, ಗಿರಿಕನ್ಯೆ, ಬಡವರ ಬಂಧು, ತ್ರಿಮೂರ್ತಿ, ಸಂಗೀತ, ಖಂಡವಿದೆಕೋ ಮಾಂಸವಿದೆಕೋ, ಗಂಗವ್ವ ಗಂಗಾಮಾಯಿ, ಅಂತ, ಚಂಡಿಚಾಮುಂಡಿ, ಮುತ್ತಿನಂಥ ಅತ್ತಿಗೆ, ನಾಗ ಕಾಳ ಭೈರವ, ಜನ್ಮಜನ್ಮದ ಅನುಬಂಧ.. ಅವರ ಕೆಲವು ಪ್ರಮುಖ ಸಿನಿಮಾಗಳು.

ಚಿತ್ರೋದ್ಯಮದ ಒಳಹೊರಗುಗಳನ್ನು ಅರಿತ ಅವರು ಚಿತ್ರ ನಿರ್ಮಾಣದಲ್ಲೂ ಸೈ ಎನಿಸಿಕೊಂಡರು. ಅಗ್ನಿಪರೀಕ್ಷೆ, ಮಹೇಂದ್ರವರ್ಮ, ಮಿ.ಮಹೇಶ್ ಕುಮಾರ್, ತಾಯಿ ಸಾಹೇಬ, ತುತ್ತೂರಿ... ಅವರ ನಿರ್ಮಾಣದ ಚಿತ್ರಗಳು. ರಾಜಕೀಯ ಕ್ಷೇತ್ರದಲ್ಲೂ ಯಶಸ್ವಿಯಾದ ಜಯಮಾಲಾ ಅವರು ಸಚಿವೆಯಾಗಿ ಕಾರ್ಯನಿರ್ವಹಿಸಿದ್ದಾರೆ. ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷೆಯಾಗಿ ಸೇವೆ ಸಲ್ಲಿಸಿದ್ದಾರೆ. ಚಿಕ್ಕಂದಿನಲ್ಲಿ ಓದಲು ಸಾಧ್ಯವಾಗದಿದ್ದ ಅವರು ಮುಂದೆ ರಾಜ್ಯಶಾಸ್ತ್ರದಲ್ಲಿ ಎಂ.ಎ ಪದವಿ ಪಡೆದರು. 2008ರಲ್ಲಿ ಪಿಎಚ್ ಡಿ ಪದವಿ ಗಳಿಸಿದರು.

**ಸಾ.ರಾ.ಗೋವಿಂದು–2021 ರ ಡಾ.ರಾಜಕುಮಾರ್ ಪ್ರಶಸ್ತಿ;** ಮೈಸೂರು ಜಿಲ್ಲೆ ಕೆ.ಆರ್.ನಗರ ತಾಲ್ಲೂಕಿನ ಸಾಲಿಗ್ರಾಮ ಗ್ರಾಮದಲ್ಲಿ 1953 ರ ಜುಲೈ 13 ರಂದು ರಾಮೇಗೌಡ ಹಾಗೂ ಹನುಮಮ್ಮ ಅವರ ಉದರದಲ್ಲಿ ಜನಿಸಿದ ಗೋವಿಂದು ಅವರು, ಹಾಸನದಲ್ಲಿ ಡಿಪ್ಲೊಮಾ ಮೆಕ್ಯಾನಿಕಲ್ ತರಬೇತಿ ಪಡೆದ ಅವರು, ಉದ್ಯೋಗ ಅರಸಿ ಬೆಂಗಳೂರಿಗೆ ಬಂದ ಅವರು ತಮ್ಮ ಸ್ವಗ್ರಾಮ ಸಾಲಿಗ್ರಾಮದ ಸುಬ್ರಹ್ಮಣ್ಯ ಅವರ ಕಾರ್ಖಾನೆಯಲ್ಲಿ ಕೆಲಸಕ್ಕೆ ಸೇರಿದರು. ಇವರ ಸಹಪಾಠಿ ಪಾರ್ವತಮ್ಮ ರಾಜಕುಮಾರ್ ಅವರ ಸಹೋದರ ಎಸ್.ಎ.ಗೋವಿಂದರಾಜ ಅವರ ಮೂಲಕ ಡಾ.ರಾಜಕುಮಾರ್ ಅವರ ನಿರ್ಮಾಣ ಸಂಸ್ಥೆ ಪೂರ್ಣಿಮಾ ಎಂಟರ್ ಪ್ರೈಸಸ್‌ನ ಮೊದಲ ಚಿತ್ರ ?ತ್ರಿಮೂರ್ತಿ? ಚಲನಚಿತ್ರದ ನಿರ್ಮಾಣದಲ್ಲಿ ತೊಡಗಿಸಿಕೊಂಡರು. ಡಾ.ರಾಜ್ ನಿರ್ಮಾಣ ಸಂಸ್ಥೆಗಳಲ್ಲಿ ಪ್ರಮುಖ ಜವಾಬ್ದಾರಿಗಳನ್ನು ನಿರ್ವಹಿಸುತ್ತ ಡಾ.ರಾಜ್ ಅಭಿಮಾನಿಗಳ ಸಂಘವನ್ನು ಬಲಗೊಳಿಸಿದರು. ರಾಜ್ಯದಾದದ್ಯಂತ ಸುಮಾರು 17 ಸಾವಿರ ಘಟಕಗಳನ್ನು ಸ್ಥಾಪಿಸಿ, ಗೋಕಾಕ್ ಚಳವಳಿಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡರು. ಕನ್ನಡ ನೆಲ, ಜಲ, ನಾಡು, ನುಡಿಯ ವಿಷಯದಲ್ಲಿ ಹೋರಾಡಿದರು. ತನು ಚಿತ್ರ ಹೆಸರಿನ ಸ್ವಂತ ನಿರ್ಮಾಣ ಸಂಸ್ಥೆ ಮೂಲಕ ಏಳು ಸುತ್ತಿನ ಕೋಟೆ, ಲಾಲಿ ಹಾಡು ಸೇರಿದಂತೆ ಸುಮಾರು 16 ಚಿತ್ರಗಳನ್ನು ನಿರ್ಮಿಸಿದ್ದಾರೆ. ಕರ್ನಾಟಕ ಚಲಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷರಾಗಿ ಎರಡು ಅವಧಿಗಳಲ್ಲಿ ಕಾರ್ಯನಿರ್ವಹಿಸಿದ್ದಾರೆ. ಡಾ.ರಾಜ್ ಹೆಸರಿನ ಪ್ರಶಸ್ತಿಯನ್ನು ಪಡೆಯುತ್ತಿರುವುದಕ್ಕೆ ಸಂತಸ ವ್ಯಕ್ತಪಡಿಸಿರುವ ಅವರು ಈ ಪ್ರಶಸ್ತಿಯನ್ನು ಡಾ.ರಾಜಕುಮಾರ್ ಅವರಿಗೆ ಅರ್ಪಿಸುವುದಾಗಿ ಹೇಳಿದ್ದಾರೆ.



**ಎಂ.ಎಸ್.ಸತ್ಯು –2020 ರ ಪುಟ್ಟಣ್ಣ ಕಣಗಾಲ್ ಪ್ರಶಸ್ತಿ;** ಎಂ.ಎಸ್. ಸತ್ಯು ಎಂದೇ ಹೆಸರಾಗಿರುವ ಮೈಸೂರು ಶ್ರೀನಿವಾಸ ಸತ್ಯು ಅವರು ಪ್ರಸಿದ್ಧ ಭಾರತೀಯ ಚಿತ್ರ ನಿರ್ದೇಶಕ, ಚಿತ್ರಕಥಾ ಬರಹಗಾರ ಮತ್ತು ರಂಗಭೂಮಿ ಕಾರ್ಯಕರ್ತ. ಸಾಮಾಜಿಕ ನ್ಯಾಯ, ಶೋಷಿತ ವರ್ಗಗಳ ಬದುಕು, ಮಾನವೀಯ ಮೌಲ್ಯಗಳು ಅವರ ಚಿತ್ರಗಳ ಮುಖ್ಯ ವಿಷಯಗಳು.



ಮೈಸೂರಿನಲ್ಲಿ 1930 ಜುಲೈ 06 ರಂದು ಜನಿಸಿದ ಮೈಸೂರು ಶ್ರೀನಿವಾಸ ಸತ್ಯು, ಅವರಿಗೆ ಚಿಕ್ಕಂದಿನಿಂದಲೂ ರಂಗಭೂಮಿಯ ಕಡೆ ಒಲವು. ರಂಗಭೂಮಿಯ ಸ್ಟೇಜ್ ಡಿಸೈನರ್. ಕಲಾನಿರ್ದೇಶಕ, ರಂಗಭೂಮಿಯಲ್ಲಿ ನಾಲ್ಕುದಶಕಗಳಿಗೂ ಹೆಚ್ಚು ಕಾಲ ಶ್ರಮಿಸಿರುವ ಎಂ.ಎಸ್.ಸತ್ಯು ಹಿಂದೂಸ್ತಾನಿ ಥಿಯೇಟರ್, ಹಬೀಬ್ ತನ್ವೀರ್ ಅವರ ಥೀಯೇಟರ್ ಹಾಗೂ ದೆಹಲಿಯ ಕನ್ನಡ ಭಾರತಿ ಹಾಗೂ ಇತರ ತಂಡಗಳಲ್ಲಿ ರಂಗಭೂಮಿ ಡಿಸೈನರ್ ಹಾಗೂ ಕಲಾನಿರ್ದೇಶಕರಾಗಿ ಕೆಲಸ ಮಾಡಿದರು. 1952 ರಲ್ಲಿ ಚೇತನ್ ಆನಂದ್ ಅವರ ಬಳಿ ಸಹಾಯಕ ನಿರ್ದೇಶಕರಾಗಿ ಕೆಲಸ ಮಾಡಿದ ಎಂ.ಎಸ್.ಸತ್ಯು, ಚೇತನ್ ಆನಂದ್ ಅವರು ನಿರ್ದೇಶಿಸಿದ "ಹಖೀಕತ್" ಚಲನಚಿತ್ರದ ಕಲಾ ನಿರ್ದೇಶಕರಾಗಿ ಕೆಲಸ ಮಾಡಿದರು. ಇದು ಅವರ ವೃತ್ತಿ ಬದುಕಿಗೆ ತಿರುವು ನೀಡಿತು. ಈ ಚಿತ್ರದ ಕಲಾನಿರ್ದೇಶನಕ್ಕಾಗಿ ಅವರಿಗೆ ಫಿಲಂ ಫೇರ್ ಪ್ರಶಸ್ತಿ ಲಭಿಸಿತು.

15 ಸಾಕ್ಷ್ಯ ಚಿತ್ರಗಳು ಹಾಗೂ ಎಂಟು ಕಥಾಚಿತ್ರಗಳನ್ನು ನಿರ್ದೇಶಿಸಿರುವ ಎಂ.ಎಸ್.ಸತ್ಯು, ಕನ್ನಡ, ಹಿಂದಿ ಹಾಗೂ ಉರ್ದು ಭಾ?ಗಳಲ್ಲಿ ಚಲನಚಿತ್ರಗಳನ್ನು ಮಾಡಿರುವುದು ಅವರ ವೈಶಿಷ್ಟವೇ ಆಗಿದೆ. 1974 ರಲ್ಲಿ ಅವರು ನಿರ್ದೇಶಿಸಿದ ಭಾರತ ವಿಭಜನೆ ಕಾಲದ ಕಥಾಹಂದರವುಳ್ಳ ಚಿತ್ರ "ಗರಂ ಹವಾ" ಎಂಎಸ್.ಸತ್ಯು ಅವರನ್ನು ಶ್ರೇಷ್ಠ ನಿರ್ದೇಶಕರ ಸ್ಥಾನದಲ್ಲಿ ನಿಲ್ಲಿಸಿತು. ಈ ಚಿತ್ರಕ್ಕೆ 1974 ರಲ್ಲಿ ಕೇಂದ್ರ ಸರ್ಕಾರವು ರಾಷ್ಟ್ರೀಯ ಭಾವೈಕ್ಯತೆ ಬಗ್ಗೆ ಅತ್ಯುತ್ತಮ ಕಥಾಚಿತ್ರಕ್ಕೆ ನೀಡುವ ನರ್ಗೀಸ್ ದತ್ ರಾಷ್ಟ್ರೀಯ ಪ್ರಶಸ್ತಿ ನೀಡಿದೆ. ಅಲ್ಲದೆ "ಗರಂ ಹವಾ" ವಿಶ್ವದ ಪ್ರತಿಷ್ಠಿತ ಕಾನ್ ಚಲನಚಿತ್ರೋತ್ಸವದ ಸ್ಪರ್ಧಾತ್ಮಕ ವಿಭಾಗದಲ್ಲಿತ್ತು.

ಸಾಂಪ್ರದಾಯಿಕ ನಿರೂಪಣಾ ಮಾರ್ಗವನ್ನು ಬಿಟ್ಟು ತಾತ್ವಿಕ ನೆಲೆಗಟ್ಟಿನ, ವಸ್ತುನಿಷ್ಠ ನಿರೂಪಣೆಗೆ ಹೆಸರಾದವರು ಎಂ.ಎಸ್.ಸತ್ಯು. ಏಕ್ ಥ ಚೋಟು, ಏಕ್ ಥಾ ಮೋಟು, ಗರಂಹವಾ, ಚಿತೆಗೂ ಚಿಂತೆ, ಕನ್ನೇಶ್ವರ ರಾಮ, ಕಹಾಂ ಕಹಾಂ ಸೇ ಗುಜರ್ಗಯಾ, ಬರ, ಇಜ್ಯೋಡು, ಸೂಖ, ಘಳಿಗೆ, ಕೊಟ್ಟ ಅವರು ನಿರ್ದೇಶಿಸಿದ ಚಲನಚಿತ್ರಗಳು. "ಕಾಕನ ಕೋಟೆ" ಚಲನಚಿತ್ರದ ಕಲಾನಿರ್ದೇಶಕರಾಗಿ ಅವರು ಕೆಲಸ ಮಾಡಿದ್ದಾರೆ. "ಬರ" ಚಿತ್ರದ ನಿರ್ದೇಶನಕ್ಕಾಗಿ ಸತ್ಯು ಅವರು 1981–82 ನೇ ಸಾಲಿನ ಕರ್ನಾಟಕ ರಾಜ್ಯ ಸರ್ಕಾರದ ಚಲನಚಿತ್ರ ಪ್ರಶಸ್ತಿ ಪಡೆದಿದ್ದಾರೆ. ರಂಗಭೂಮಿ ಹಾಗೂ ಚಲನಚಿತ್ರರಂಗಕ್ಕೆ ಎಂ.ಎಸ್.ಸತ್ಯು ಅವರು ಸಲ್ಲಿಸಿರುವ ಸೇವೆಯನ್ನು ಪರಿಗಣಿಸಿ ಭಾರತ ಸರ್ಕಾರವು 1975 ರಲ್ಲಿ ಪದ್ಮಶ್ರೀ ಪ್ರಶಸ್ತಿ ನೀಡಿ ಗೌರವಿಸಿದೆ. 2024 ರಲ್ಲಿ ನಡೆದ 15 ನೇ ಬೆಂಗಳೂರು ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಜೀವಮಾನ ಸಾಧನೆ ಪ್ರಶಸ್ತಿಯ ಗೌರವಕ್ಕೆ ಭಾಜನರಾಗಿದ್ದಾರೆ.

**ಶಿವರುದ್ರಯ್ಯ ಕೆ. – 2021 ರ ಪುಟ್ಟಣ್ಣ ಕಣಗಾಲ್ ಪ್ರಶಸ್ತಿ;** ಇಂದಿನ ಬೆಂಗಳೂರು ದಕ್ಷಿಣ (ರಾಮನಗರ) ಜಿಲ್ಲೆ ಚನ್ನಪಟ್ಟಣ ತಾಲ್ಲೂಕಿನ ನೀಲಕಂಠನಹಳ್ಳಿಯಲ್ಲಿ 1953 ರ ಮೇ 15 ರಂದು ಕುನ್ನಯ್ಯ ಹಾಗೂ ತಿರುಮಲಮ್ಮ ನವರ ಪುತ್ರನಾಗಿ ಜನಸಿದ ಶಿವರುದ್ರಯ್ಯ ಅವರು ಈ ಹಿಂದೆ ವಾರ್ತಾ ಇಲಾಖೆಯ ಸಂಗೀತ ಮತ್ತು ನಾಟಕ ವಿಭಾಗದಲ್ಲಿ ಅಧಿಕಾರಿಯಾಗಿ ಸೇವೆ ಸಲ್ಲಿಸಿ ಸ್ವಯಂ ನಿವೃತ್ತಿ ಪಡೆದವರು. ಚಲನಚಿತ್ರ ಕ್ಷೇತ್ರದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿರುವ ಇವರು, ದೇವನೂರು ಮಹದೇವ, ಸಾಯಿಸುತೆ, ಅಶ್ವತ್ಥ, ಕೆ.ಸದಾಶಿವ, ಕುಂ.ವೀರಭದ್ರಪ್ಪ, ಈಶ್ವರಚಂದ್ರ, ಚಾರ್ಲ್ಸ್ ಡಿಕೆನ್ಸನ್ ಸೇರಿದಂತೆ ಹಲವು ಲೇಖಕರ ಕೃತಿಗಳನ್ನಾಧರಿಸಿ ಸುಮಾರು 11 ಸಿನೆಮಾಗಳನ್ನು ನಿರ್ದೇಶಿಸಿದ್ದಾರೆ. ಹಲವು ರಾಜ್ಯ, ರಾಷ್ಟ್ರ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಅನೇಕ ಪ್ರಶಸ್ತಿ ಪುರಸ್ಕಾರಗಳು ದೊರೆಕಿವೆ. ವನ್ಯಜೀವಿ ಛಾಯಾಗ್ರಾಹಣ ಹಾಗೂ ರಂಗಭೂಮಿ ಕ್ಷೇತ್ರದಲ್ಲಿಯೂ ಗಮನಾರ್ಹ ಕಾರ್ಯಗಳನ್ನು ನಿರ್ವಹಿಸಿದ್ದಾರೆ.




**ಪ್ರಗತಿ ಅಶ್ವತ್ಥನಾರಾಯಣ –2020 ರ ಡಾ.ವಿಷ್ಣುವರ್ಧನ್ ಪ್ರಶಸ್ತಿ;**

**ಪ್ರಗತಿ ಅಶ್ವತ್ಥ ನಾರಾಯಣ–ಸಿನಿಮಾ ಸ್ಥಿರಚಿತ್ರ ಛಾಯಾಗ್ರಾಹಕ:** ಕನ್ನಡ ಚಿತ್ರರಂಗದ ಬೆಳವಣಿಗೆಯ ಹಾದಿಯಲ್ಲಿ ಪ್ರಗತಿ ಸ್ಟುಡಿಯೋ ಹೆಸರು ಕಡ್ಡಾಯವಾಗಿ ಪ್ರಸ್ತಾಪವಾಗುತ್ತದೆ. ಸ್ಥಿರಚಿತ್ರ ಛಾಯಾಗ್ರಹಣದ ಮೂಲಕ ನಾಲ್ಕು ದಶಕಗಳ ಕಾಲ ಕನ್ನಡ ಚಿತ್ರ ಜಗತ್ತಿನ ಭಾಗವಾಗಿದ್ದು 'ಪ್ರಗತಿ'ಯ ಹೆಮ್ಮೆ. ಅಧಿಕೃತವಾಗಿ ಅಶ್ವತ್ಥರ ಸ್ಥಿರಚಿತ್ರ ಛಾಯಾಗ್ರಹಣ ವೃತ್ತಿ ಆರಂಭವಾಗಿದ್ದು ಮದರಾಸಿನಲ್ಲಿ 'ಬೆಳ್ಳಿಮೋಡ' ಚಿತ್ರದೊಂದಿಗೆ. ಅವರು ಛಾಯಾಗ್ರಹಣ ಮಾಡಿದ ಕೊನೆಯ ಚಿತ್ರ 'ಪ್ರೇಮ ಪ್ರೇಮ ಪ್ರೇಮ'. 'ಪ್ರಗತಿ' ಸ್ಟುಡಿಯೋ ಆರಂಭಿಸಿದ ನಂತರ ಸುಮಾರು 275 ಸಿನಿಮಾಗಳಿಗೆ ಅಶ್ವತ್ಥರು ಸ್ಟಿಲ್ ಫೋಟೊಗ್ರಫಿ ಮಾಡಿದ್ದಾರೆ. ಮದರಾಸಿನಲ್ಲಿದ್ದಾಗ ಮಲಯಾಳಂ ಚಿತ್ರಗಳೂ ಸೇರಿದಂತೆ 25ಕ್ಕೂ ಹೆಚ್ಚು ಚಿತ್ರಗಳಿಗೆ ದುಡಿದಿದ್ದರು. ಒಟ್ಟಾರೆ ಸ್ಟಿಲ್ ಫೋಟೊಗ್ರಾಫರ್ ಆಗಿ ಅವರು ಕೆಲಸ ಮಾಡಿದ ಚಿತ್ರಗಳ ಸಂಖ್ಯೆ 300 ದಾಟುತ್ತದೆ.



ಪುಟ್ಟಣ್ಣ ಕಣಗಾಲ್ ನಿರ್ದೇಶನದ ಹನ್ನೊಂದು, ಸಿದ್ದಲಿಂಗಯ್ಯನವರ ಹದಿನಾಲ್ಕು ಸಿನಿಮಾಗಳಿಗೆ ಅಶ್ವತ್ಥರು ಸ್ಥಿರಚಿತ್ರ ಛಾಯಾಗ್ರಾಹಕರಾಗಿ ಕಾರ್ಯನಿರ್ವಹಿಸಿದ್ದಾರೆ. 'ಪ್ರಗತಿ'ಯಲ್ಲಿ ಹತ್ತಾರು ಸ್ಟಿಲ್ ಫೋಟೊಗ್ರಾಫರ್ ಗಳು ತಯಾರಾಗಿದ್ದಾರೆ. ಮೈಲುಗಲ್ಲು ಎನಿಸಿದ ಹಲವಾರು ಕನ್ನಡ ಚಿತ್ರಗಳಿಗೆ ಕಾರ್ಯನಿರ್ವಹಿಸಿರುವ ಅಶ್ವತ್ಥರ ಸಂಗ್ರಹದಲ್ಲಿ ಸುಮಾರು ಎರಡೂವರೆ ಲಕ್ಷಕ್ಕೂ ಹೆಚ್ಚು ಫೋಟೊ ನೆಗೆಟಿವ್ ಇವೆ. ಸಿನಿಮಾ ಸ್ಥಿರಚಿತ್ರ, ಸಿನಿಮಾಗೆ ಸಂಬಂಧಿಸಿದ ಇತರೆ ಫೋಟೊ, ಚಿತ್ರೀಕರಣ ಸಂದರ್ಭದ ಕ್ಲಿಪಿಂಗ್, ಚಿತ್ರೋದ್ಯಮದ ಕಾರ್ಯಕ್ರಮ, ನಟ–ನಟಿಯರ ಭಾವಚಿತ್ರ, ಕಲಾವಿದರ ಕುಟುಂಬಗಳ ವೈಯಕ್ತಿಕ ಸಮಾರಂಭಗಳು... ಹೀಗೆ ಅವರ ಸಂಗ್ರಹದಲ್ಲಿನ ಅಸಂಖ್ಯಾತ ಫೋಟೊಗಳು ಕನ್ನಡ ಚಿತ್ರರಂಗದ ಇತಿಹಾಸ ದಾಖಲಿಸುತ್ತವೆ.

**ಎಂ.ಕೆ.ಸುಂದರರಾಜ್ –2021 ರ ಡಾ.ವಿಷ್ಣುವರ್ಧನ್ ಪ್ರಶಸ್ತಿ;** ಹಿರಿತೆರೆ ಹಾಗೂ ಕಿರುತೆರೆಗಳೆರಡರಲ್ಲಿಯೂ ಎಂ.ಕೆ.ಸುಂದರರಾಜ್ ಚಿರಪರಿಚಿತರು, 1951 ರ ಫೆಬ್ರವರಿ 2 ರಂದು ವಿಜಯ ಕೋಮಲಂ ಹಾಗೂ ಎಂ.ಎನ್.ಕೃಷ್ಣಸ್ವಾಮಿ ಅವರ ಮಗನಾಗಿ ಜನಿಸಿದರು. ಬಿಎಸ್ಸಿ ಪದವೀಧರರಾಗಿರುವ ಇವರು, ಕಾಲೇಜು ವಿದ್ಯಾರ್ಥಿಯಾಗಿದ್ದಾಗಲೇ, ರಂಗಭೂಮಿ ದಿಗ್ಗಜ ಬಿ.ವಿ.ಕಾರಂತರ ಪರಿಚಯವಾಗಿ ಅವರ ಶಿಷ್ಯತ್ವದಲ್ಲಿ ಅನೇಕ ನಾಟಕಗಳಲ್ಲಿ ನಟನೆ, ನೇಪಥ್ಯದಲ್ಲಿ ಕರ್ತವ್ಯ ನಿರ್ವಹಿಸಿದರು. ಪ್ರಯೋಗಾತ್ಮಕ ಮತ್ತು ಮುಖ್ಯವಾಹಿನಿ ಎರಡೂ ಪ್ರಕಾರಗಳ ಚಿತ್ರಗಳಲ್ಲಿ ಅಪಾರ ಯಶಸ್ಸು ಪಡೆದಿದ್ದಾರೆ. 1973 ರಲ್ಲಿ ಚಿತ್ರರಂಗ ಪ್ರವೇಶಿಸಿದರು, ಕನ್ನಡ, ತಮಿಳು, ತೆಲುಗು,ಹಿಂದಿ ಸೇರಿದಂತೆ ಈವರೆಗೆ ಸುಮಾರು 300 ಚಲನಚಿತ್ರಗಳಲ್ಲಿ ಅಭಿನಯಿಸಿದ್ದಾರೆ.



ಕೆಲವು ಚಿತ್ರಗಳಲ್ಲಿ ಸಹನಿರ್ದೇಶನ, ನಿರ್ಮಾಣ ವ್ಯವಸ್ಥಾಪಕರಾಗಿಯೂ ಕಾರ್ಯನಿರ್ವಹಿಸಿದ್ದಾರೆ. ಇವರ ಅಭಿನಯದ ಕಾಡು, ಚೋಮನ ದುಡಿ, ತಬ್ಬಲಿಯು ನೀನಾದೆ ಮಗನೇ, ಒಂದಾನೊಂದು ಕಾಲದಲ್ಲಿ ಸೇರಿದಂತೆ ನೂರಾರು ಚಲನಚಿತ್ರಗಳಲ್ಲಿ ಪೋಷಕ ಪಾತ್ರಗಳು ಮಾತ್ರವಲ್ಲದೇ, ಹಾಸ್ಯ, ಖಳ ಸೇರಿದಂತೆ ಎಲ್ಲ ಬಗೆಯ ಪಾತ್ರಗಳಲ್ಲಿ ಸೈ ಎನಿಸಿಕೊಂಡಿದ್ದಾರೆ. ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಸೇರಿದಂತೆ ಅನೇಕ ಪ್ರಮುಖ ಪ್ರಶಸ್ತಿ, ಪುರಸ್ಕಾರಗಳ ಗೌರವಕ್ಕೆ ಪಾತ್ರರಾಗಿದ್ದಾರೆ.



# ತನ್ನ ಹಕ್ಕಿಗಾಗಿ ಹೆಣ್ಣು ಮಗಳ ಹೋರಾಟದ ನೈಜ ಕಥೆ

ಒಂದೇ ಉಸಿರಿನಲ್ಲಿ ಮೂರು ಬಾರಿ ತಲಾಕ್ ಎಂದು ಹೇಳಿದ ತಕ್ಷಣ ಗಂಡ ಹೆಂಡತಿಯ ನಡುವಿನ ಭಾವ ಬಂಧನ ಹರಿದು ಹೋಗುತ್ತದೆಯೇ? ಎಂಬ ಆಕೆಯ ಪ್ರಶ್ನೆಗೆ ಯಾರ ಬಳಿಯೂ ಉತ್ತರವಿರಲಿಲ್ಲ. ಸಮಾಜದ ಹಿರಿಯರ ಸಮ್ಮುಖದಲ್ಲಿ ಅನುಬಂಧ ಪತ್ರಕ್ಕೆ ಸಹಿ ಹಾಕಿರುವುದು ಬದುಕಿನ ಉದ್ದಕ್ಕೂ ಜೊತೆಯಾಗಿ ಸುಖ ದುಃಖಗಳನ್ನು ಹಂಚಿಕೊಂಡು ಸಾಗುತ್ತೇವೆ ಎಂದು ಹೇಳಿರುವುದು ಸುಳ್ಳೇ? ಎಂಬ ಆಕೆಯ ಪ್ರಶ್ನೆಗೆ ಮೌನವೇ ಉತ್ತರವಾಗುತ್ತದೆ.

ಗಂಡನನ್ನು ಬೇರೊಬ್ಬರೊಂದಿಗೆ ಹಂಚಿಕೊಳ್ಳುತ್ತಿರುವವರಲ್ಲಿ ನೀನೇನು ಜಗತ್ತಿನ ಮೊದಲ ಮಹಿಳೆ ಅಲ್ಲ ಎಂಬ ಅತ್ತೆಯ ಮಾತಿಗೆ ಗಂಡ ಎಂಬ ವ್ಯಕ್ತಿ ಶೀರ ಕುರ್ಮಾ ಅಥವಾ ಬಿರಿಯಾನಿ ಅಲ್ಲ ಹಂಚಿಕೊಂಡು ತಿನ್ನಲು ಎಂಬ ಆಕೆಯ ನೋವಿನ ಆಕ್ರಂದನಕ್ಕೆ ಪ್ರತಿಕ್ರಿಯಿಸಲು ಅಲ್ಲಿ ಯಾರೂ ಇರಲಿಲ್ಲ..... ಇದ್ದವರು ಕೂಡ ಆಕೆಯ ರೋದನಕ್ಕೆ ಕಿವುಡಾಗಿದ್ದರು.

ಇಲ್ಲಿದೆ ನಿನ್ನ ಮೆಹರ್‌ನ ದುಡ್ಡು. ಇಂದಿನಿಂದ ನಮ್ಮಿಬ್ಬರಿಗೂ ಯಾವುದೇ ಸಂಬಂಧವಿಲ್ಲ.... ತಲಾಕ್ ತಲಾಕ್ ತಲಾಕ್ ಎಂದು ಆತ ಹೇಳಿದಾಗ ಅಲ್ಲಿದ್ದವರೆಲ್ಲ ಗಾಬರಿಗೊಂಡರೆ ಆಕೆಯ ಕಾಲ ಕೆಳಗಿನ ನೆಲವೇ ಕುಸಿದಂತಾಗಿ ಆಕೆಯ ದಾಂಪತ್ಯದ ಬದುಕು ಅನಿರೀಕ್ಷಿತವಾಗಿ ಅಂತ್ಯಗೊಂಡಿತು.

ಮಕ್ಕಳ ಹಾಗೂ ತನ್ನ ಪಾಲನೆ ಪೋಷಣೆಯ ಸಲುವಾಗಿ ಪತಿಯಿಂದ ಆರ್ಥಿಕ ಸಹಾಯದ ಅನುಕೂಲವನ್ನು ಅಪೇಕ್ಷಿಸಿದ ಆಕೆ ಕೋರ್ಟಿಗೆ ಹೋದಳು. ಕೋರ್ಟಿನಲ್ಲಿ ಸೆಕ್ಯುಲರ್ ಕಾನೂನು ಚಾಲ್ತಿಯಲ್ಲಿದ್ದು ನೀನು ನಿಮ್ಮ ಧರ್ಮದ ಶರಿಯಾ ಕಾನೂನನ್ನು ಪಾಲಿಸಬೇಕು. ನಿಮ್ಮ ಧರ್ಮದ ಹಿರಿಯರ ಸಮ್ಮುಖದಲ್ಲಿ ಬಗೆಹರಿಸಿಕೋ ಎಂದು ಆಕೆಯನ್ನು ಮರಳಿ ಕಳುಹಿಸಿದರು. ಹಾಗೆ ತನ್ನ ತಂದೆಯೊಂದಿಗೆ ಖಾಜಿಗಳ ಬಳಿ ಬಂದ ಆಕೆಗೆ " ಹೆಣ್ಣು ಮಕ್ಕಳು ಇಂತಹ ವಿಷಯದಲ್ಲಿ ಬಾಯಿ ಬಿಡಲೇಬಾರದು... ಆದರೆ ನೀನು ನಿನ್ನ ಗಂಡನ ವಿರುದ್ಧ ನ್ಯಾಯಾಲಯದ ಬಾಗಿಲನ್ನು ತಟ್ಟಿರುವೆ. ನೀನು ನಮ್ಮ ಕೋಮಿನ ವಿರುದ್ಧ ದ್ರೋಹ ಮಾಡಿದ್ದಲ್ಲದೆ, ವಿದ್ರೋಹಿಗಳೊಂದಿಗೆ ಕೈಜೋಡಿಸಿರುವೆ" ಎಂದು ಆಕೆಯ ಸಮುದಾಯದ ಹಿರಿಯರು ಆಕೆಯನ್ನು ಖಂಡಿಸಿದರು. ಒಂದು ಹಂತದ ಮೌನವಾದ ಸಾಮಾಜಿಕ ಬಹಿಷ್ಕಾರ ಆಕೆಯ ಕುಟುಂಬದ ಮೇಲಾಯಿತು. ಆಕೆಯ ಮನೆಯ ಮೇಲೆ ಕಲ್ಲು ತೂರಾಟ ಕೂಡ ನಡೆಯಿತು.



| ವೀಣಾ ಹೇಮಂತ್‌ಗೌಡ ಪಾಟೀಲ್

ಒಬ್ಬ ಹೆಣ್ಣಿನ ಮೇಲೆ ಎಲ್ಲ ರೀತಿಯ ಧಾರ್ಮಿಕ ಕಾನೂನಾತ್ಮಕ ಒತ್ತಡಗಳನ್ನು ಹಾಕಲಾಗುತ್ತದೆ ಎನ್ನುವುದಾದರೆ ಪುರುಷನ ಮೇಲೆ ಏಕೆ ಇಲ್ಲ ಎಂಬ ಆಕೆಯ ಪ್ರಶ್ನೆಗೆ ಇಡೀ ಕೋರ್ಟ್ ರೂಮ್ ಮೌನವಾಯಿತು. ಶರಿಯಾ ಕಾನೂನನ್ನು ಅಷ್ಟೊಂದು ಮಾನ್ಯ ಮಾಡುವುದೇ ಆದರೆ ಕುರಾನಿನಲ್ಲಿ ತನ್ನ ಪತ್ನಿಯ ಒಪ್ಪಿಗೆ ಇಲ್ಲದೆ ಮತ್ತೊಂದು ವಿವಾಹವಾಗುವ ಪತಿಗೆ ಚಾಟಿ ಏಟನ್ನು ಕೊಡಬೇಕು ಎಂಬ ಕುರಾನಿನ ಶಿಕ್ಷೆಯನ್ನು ಎಷ್ಟು ಜನ ಗಂಡಸರಿಗೆ ನೀಡಲಾಗಿದೆ ಎಂಬ ಆಕೆಯ ಪ್ರಶ್ನೆಗೆ ಅಲ್ಲಿರುವ ಎಲ್ಲರೂ ನಿರುತ್ತರರಾಗಿದ್ದರು.

ಧಾರ್ಮಿಕ ಕಾನೂನನ್ನು ಪರಿಗಣಿಸದೆ ಇರುವ ಸೆಕ್ಯುಲರ್ ಲಾ ಎಂಬ ಜಾತ್ಯಾತೀತ ಕಾನೂನು ನಮ್ಮ ಧಾರ್ಮಿಕ ಕಾನೂನಿನ ಹಕ್ಕುಗಳ ಪಾಲನೆಗೆ ಅಡ್ಡ ಬಂದರೆ ನಾವು ಸುಮ್ಮನಿರಬೇಕೇ? ಎಂಬುದು ತನ್ನ ತಪ್ಪುಗಳನ್ನು ಸಮರ್ಥಿಸಿಕೊಳ್ಳಲು ಆಕೆಯ ಪತಿ ಮಾಡುತ್ತಿದ್ದ ಮೊಂಡು ವಾದವಾಗಿದ್ದು ಇದಕ್ಕೆ ಆ ಧರ್ಮದ ಮೌಲ್ವಿಗಳು, ಖಾಜಿಗಳು ಅನುಮೋದನೆ ನೀಡುತ್ತಿದ್ದರು.

ಕಥೆ ಹೀಗಿದೆ 1970ರ ದಶಕದ ಈ ಕಥೆಯಲ್ಲಿ ಭಾರತ ದೇಶದಂತಹ ಜಾತ್ಯತೀತ ರಾಷ್ಟ್ರದಲ್ಲಿ ವಾಸಿಸುತ್ತಿರುವ ಮೌಲ್ವಿಗಳ ಮಗಳು ಶಾಜಿಯ ಬಾನು ಎಂಬ ಹೆಣ್ಣು ಮಗಳ ವಿವಾಹವನ್ನು ಅಬ್ಬಾಸ್ ಖಾನ್ ಎಂಬ ವಕೀಲರೊಂದಿಗೆ ಮಾಡಿಕೊಡಲಾಗುತ್ತದೆ. ಇವರಿಬ್ಬರ ಪ್ರೀತಿ ಪ್ರೇಮದ ದಾಂಪತ್ಯಕ್ಕೆ ಎರಡು ಮಕ್ಕಳಾಗಿದ್ದು ಮೂರನೇ ಮಗುವಿಗೆ ಆಕೆ ಗರ್ಭ ಧರಿಸಿದಾಗ ಪತಿ ಮತ್ತೊಂದು ಹೆಣ್ಣು ಮಗಳನ್ನು ವಿವಾಹವಾಗಿ ಮನೆಗೆ ಕರೆತರುತ್ತಾನೆ. ಭಾವನಾತ್ಮಕವಾಗಿ ನೊಂದುಹೋದರೂ ಅನಿವಾರ್ಯವಾಗಿ ಹೊಂದಾಣಿಕೆ ಮಾಡಿಕೊಳ್ಳುವ ಶಾಜಿಯ ಮತ್ತು ಆಕೆಯ ಮಕ್ಕಳನ್ನು ಪತಿ ಸಂಪೂರ್ಣವಾಗಿ ಕಡೆಗಣಿಸುತ್ತಾನೆ.

ಅದೊಂದು ದಿನ ತನ್ನ ಮದುವೆಯ ವಾರ್ಷಿಕೋತ್ಸವದ ಸಂಭ್ರಮಕ್ಕೆ ಪತಿಯ ಬಳಿ ಹೋದಾಗ ಆತನಿಂದ ತಿರಸ್ಕರಿಸಲ್ಪಟ್ಟು ತೀವ್ರವಾಗಿ ನೊಂದುಕೊಳ್ಳುವ ಶಾಜಿಯ ತನ್ನ ಮಕ್ಕಳೊಂದಿಗೆ ತವರಿಗೆ ತೆರಳುತ್ತಾಳೆ. ಮೊದಲ ಕೆಲ ತಿಂಗಳುಗಳ ಕಾಲ ಮಕ್ಕಳ ನಿರ್ವಹಣೆಗಾಗಿ ಹಣವನ್ನು ಕಳುಹಿಸುವ ಆಕೆಯ ಪತಿ ನಂತರ ಅದನ್ನು ನಿಲ್ಲಿಸುತ್ತಾನೆ. ಇದರಿಂದ ಸಂಕಷ್ಟಕ್ಕೆ ಒಳಗಾದ ಆಕೆ ಪತಿಯನ್ನು ಭೇಟಿಯಾಗುವ ಹಲವಾರು ಪ್ರಯತ್ನಗಳಲ್ಲಿ ಸೋತು ಹೋಗುತ್ತಾಳೆ. ಕುಟುಂಬದ ನಿರ್ವಹಣೆಯ ಕಾರಣಕ್ಕಾಗಿ ಅನಿವಾರ್ಯವಾಗಿ ತನ್ನ ಹಕ್ಕಿಗಾಗಿ ಹೋರಾಡುವ ಹೆಣ್ಣು ಮಗಳಾಗಿ ಶಾಜಿಯ ಬದಲಾಗುತ್ತಾಳೆ.

ಉಪೇಕ್ಷಿತ ವಚನಕಾರರು

ಓರ್ವ ಹೆಣ್ಣು ಮಗಳು ಭಾರತೀಯ ನ್ಯಾಯ ಸಂಹಿತೆ, ಮುಸ್ಲಿಮ್ ಸಮುದಾಯದ ಶರಿಯ ಕಾನೂನು ಹಾಗೂ ಸಂವಿಧಾನದ ನಡುವಣ ಹೋರಾಟಕ್ಕೆ ನಾಂದಿ ಹಾಡುತ್ತಾಳೆ.

ತನ್ನ ಮತ್ತು ಮಕ್ಕಳ ಖರ್ಚಿನ ನಿರ್ವಹಣೆಗಾಗಿ ಆಕೆ ಕೋರ್ಟಿನ ಮೊರೆ ಹೋದಾಗ ಅಂದು ಮುಸ್ಲಿಂ ಸಮಾಜದಲ್ಲಿ ಅತ್ಯಂತ ಶಕ್ತಿಯುತವಾಗಿದ್ದ ತೀನ ತಲಾಖ್ ನ ತಲಾಕ್ ತಲಾಕ್ ತಲಾಕ್ ಎಂಬ ವಾಕ್ಯಗಳನ್ನು ಮೂರು ಬಾರಿ ಉಚ್ಚರಿಸಿದ ವಿದ್ಯಾವಂತ ವಕೀಲ ಪತಿ ಆಕೆಯಿಂದ ತಮ್ಮೆಲ್ಲ ಸಂಬಂಧವನ್ನು ಕಡಿದುಕೊಳ್ಳುತ್ತಾನೆ. ಈ ಮೂಲಕ ತಾನು ಆಕೆಗೆ ನಿರ್ವಹಣೆಯ ವೆಚ್ಚ ಕೊಡುವುದನ್ನು ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಾನೆ.

ಶೈಕ್ಷಣಿಕವಾಗಿ ಹೆಚ್ಚಿನ ವಿದ್ಯಾಭ್ಯಾಸ ಲಭ್ಯವಾಗಿಲ್ಲದೆ ಹೋದರೂ ಕೂಡ ಕುರಾನ್ ನ ಪ್ರತಿಯೊಂದು ಅಕ್ಷರಗಳನ್ನು ಪಠಿಸಿ ಮನನ ಮಾಡಿಕೊಂಡಿದ್ದ ಆಕೆ ನ್ಯಾಯಾಲಯದಲ್ಲಿ ಕುರಾನ್ ನ (ಇದ್’ ಎಂಬ ಅಕ್ಷರದ ಓದು ಎಂಬ ಪದದ ಅರ್ಥವನ್ನು ವಿವರಿಸಿ ಹೇಳಿ ಖುರಾನ್ ನ ವಾಕ್ಯಗಳನ್ನು ಅವರಿವರಿಂದ ಕೇಳಿ ತಪ್ಪಾಗಿ ಗ್ರಹಿಸುವ ಜನರಿಗೆ ಖುದ್ದಾಗಿ ಕುರಾನ್ ಅನ್ನು ಓದಿ ಮನನ ಮಾಡಿಕೊಂಡು ಅದನ್ನು ಆಚರಣೆಗೆ ತರುವ ನಿಟ್ಟಿನಲ್ಲಿ ಕರೆ ನೀಡುತ್ತಾಳೆ.

ತಾಯಿಯ ಗೊಣಗಾಟವಿದ್ದರೂ ಕೂಡ ತಂದೆಯ ಅಪಾರ ಬೆಂಬಲ ಮತ್ತು ಆಸರೆ ಆಕೆಯ ಆತ್ಮ ವಿಶ್ವಾಸವನ್ನು ಹೆಚ್ಚಿಸಿರುತ್ತದೆ

ಶಾಜಿಯಾ ಬಾನುವಿಗೆ ಬೇಲಾ ಜೈನ್ ಎಂಬ ಮಹಿಳಾ ವಕೀಲರ ಬೆಂಬಲ ದೊರೆತು ತನ್ನ ಮತ್ತು ಮಕ್ಕಳ ಬದುಕಿನ ನಿರ್ವಹಣೆಗಾಗಿ ಆಕೆ ಪತಿಯಿಂದ ಸೂಕ್ತ ಮೊತ್ತದ ಬೇಡಿಕೆಯನ್ನು ಸಲ್ಲಿಸುವ ಮೂಲಕ ಕೋರ್ಟಿನ ಮೊರೆ ಹೋಗುತ್ತಾಳೆ. ಹಲವಾರು ವರ್ಷಗಳ ಕಾಲ ನಡೆದ ಈ ಮೊಕದ್ದಮೆಯ ವಿಚಾರಣೆಯಲ್ಲಿ ಮಾನಸಿಕವಾಗಿ,ಭಾವನಾತ್ಮಕವಾಗಿ ಕುಸಿದು ಹೋದರೂ ಕೂಡ ದೃಢವಾಗಿ ಮತ್ತೆ ಎದ್ದು ನಿಲ್ಲುವ ಶಾಜಿಯ ಬಾನು ಮುಸ್ಲಿಂ ಸಮಾಜದ ಅಸಂಖ್ಯಾತ ನೊಂದ ಹೆಣ್ಣು ಮಕ್ಕಳ ಪ್ರತಿನಿಧಿಯಾಗಿ ಕಾಣುತ್ತಾಳೆ.

ಮಾನಸಿಕವಾಗಿ, ಭಾವನಾತ್ಮಕವಾಗಿ ನೊಂದುಹೋಗುವ ಇಂತಹ ಹೆಣ್ಣು ಮಕ್ಕಳು ಸಾಮಾಜಿಕ ಬಹಿಷ್ಕಾರವನ್ನು, ತಿರಸ್ಕಾರವನ್ನು ಎದುರಿಸಬೇಕಾಗಿ ಬಂದಾಗ ಆಕೆ ಅನುಭವಿಸುವ ನೋವು, ಅವಮಾನ ಮತ್ತು ಸಾಮಾಜಿಕ ವರ್ತನೆಗಳನ್ನು ಕಟುವಾಗಿ ಖಂಡಿಸಿ ತನ್ನ ಹಕ್ಕಿಗಾಗಿ ಹೋರಾಡುವ ಮತ್ತು ಅಂತಿಮವಾಗಿ ಭಾರತದ ಮುಸ್ಲಿಂ ಮಹಿಳೆಯಾಗಿ ತನಗೂ ಕೂಡ ಏಕ ರೂಪ ನಾಗರಿಕ ಸಂಹಿತೆಯ ಮೂಲಕ ತನ್ನ ಹಕ್ಕುಗಳನ್ನು ಮರಳಿಸಿ ಕೊಡಬೇಕು ಎಂಬ ಆಕೆಯ ವಾದ ಅಂತಿಮವಾಗಿ ಸರ್ವೋಚ್ಚ ನ್ಯಾಯಾಲಯದಲ್ಲಿ ಪುರಸ್ಕರಿಸಲ್ಪಡುತ್ತದೆ.

ಆಕೆಯ ವೈಯುಕ್ತಿಕ ಹೋರಾಟ ಮುಂದೆ ತನ್ನ ಜನಾಂಗದ ಮುಸ್ಲಿಂ ಹೆಣ್ಣು ಮಕ್ಕಳ ಬದುಕಿನ ಸುಧಾರಣೆಯ ನಿಟ್ಟಿನಲ್ಲಿ ಸಾರ್ವತ್ರಿಕ ರೂಪವನ್ನು ಪಡೆಯುತ್ತದೆ

ವಿನೀತ್ ಜೈನ್ ನಿರ್ಮಾಣದ ಈ ಚಿತ್ರವನ್ನು ಸುಪರ್ಣ ಸೇನ್ ನಿರ್ದೇಶಿಸಿದ್ದು ಯಾಮಿ ಗೌತಮಿ ಶಾಜಿಯಾ ಬಾನುವಿನ ಪಾತ್ರದಲ್ಲಿ ಅದ್ಭುತವಾಗಿ ಅಭಿನಯಿಸಿದ್ದಾರೆ. ಆಕೆಯ ಪತಿ ಅಬ್ಬಾಸ್ ಖಾನ್ ಆಗಿ ಇಮ್ರಾನ್ ಹಶ್ಮಿ ನಟಿಸಿದ್ದಾರೆ. ಅಂದಿನ ಸಾಮಾಜಿಕ ಸಂಪ್ರದಾಯಗಳಲ್ಲಿ ಬಂಧಿಯಾಗಿದ್ದ ಹೆಣ್ಣು ಮಕ್ಕಳ ಅಸ್ಮಿತೆ, ಗೌರವ ಮತ್ತು ಘನತೆಯನ್ನು ಎತ್ತಿ ಹಿಡಿಯುವ ಹಾಗೂ ಅಪರಾಧ ನಿರ್ಣಯ ಮತ್ತು ಕಾನೂನಿನ ಶಕ್ತಿಯನ್ನು ಪರಿಚಯಿಸುವ ಮಹಿಳಾ ವಕೀಲೆ ಬೇಲಾ ಜೈನ್ ಪಾತ್ರದಲ್ಲಿ ಶೀಬಾ ಚಡ್ಡ ಮುಖ್ಯ ಭೂಮಿಕೆ ಯಲ್ಲಿದ್ದಾರೆ.



ಕೇವಲ ಹೆಣ್ಣು ಮಕ್ಕಳಿಗೆ ಮಾತ್ರವಲ್ಲದೇ ಹೆಣ್ಣು ಹೆತ್ತ ಎಲ್ಲಾ ಪಾಲಕರ, ಹೆಂಗರುಳಿನ ಪುರುಷರ ಗಂಟಲನ್ನು ಕೂಡ ಉಬ್ಬಿಸುವ, ನ್ಯಾಯಕ್ಕಾಗಿ ಅವಡುಗಚ್ಚಿ ನಿಲ್ಲುವ ಆಕೆಯ ಮನದಾಳದ ನೋವುಗಳನ್ನು ತಾವು ಕೂಡ ಅನುಭವಿಸುವ ವೀಕ್ಷಕರಿಗೆ ಅಂತಿಮವಾಗಿ ಶಾಜಿಯಾ ಬಾನುವಿನ ಪ್ರಕರಣ ಸುಪ್ರೀಂ ಕೋರ್ಟ್ ನಲ್ಲಿ ಏಕರೂಪ ನಾಗರಿಕ ಸಂಹಿತೆಯನ್ನು ಎತ್ತಿ ಹಿಡಿಯುವ ಮೂಲಕ ಆಕೆಯ ಹಕ್ಕನ್ನು ಮರಳಿ ಕೊಟ್ಟಾಗ ಸಮಾಧಾನದ, ನೆಮ್ಮದಿಯ ನಿಟ್ಟುಸಿರನ್ನು ಬಿಡುವಂತೆ ಮಾಡುವಲ್ಲಿ ಸಫಲವಾಗಿದೆ ಎಂದರೆ ತಪ್ಪಿಲ್ಲ.

ಪರಿಣಾಮಕಾರಿಯಾದ ಸಂಭಾಷಣೆಗಳಿಗೆ ಭಾವನಾತ್ಮಕ ಒಳನೋಟಗಳಿಗೆ ಹೆಣ್ಣು ಮಕ್ಕಳ ಮನದ ತೊಳಲಾಟಗಳನ್ನು ಅರಿಯುವ ನಿಟ್ಟಿನಲ್ಲಿ ಒಂದೊಮ್ಮೆ ಈ ಚಿತ್ರವನ್ನು ನೋಡಿ.



# ಕಾಲ ಕೆಟ್ಟಿತು ಎಷ್ಟು ನಿಜ...

ಈಗ ಯಾರ ಬಾಯಲ್ಲಿ ಕೇಳಿದರೂ ಈ ಮಾತು ಕಾಲ ಕೆಟ್ಟಿತು.ಈಗ ಕಾಲ ಮುಂಚಿನಂತಿಲ್ಲ ಈಗ ಕಲಿಗಾಲ ಹೌದಲ್ಲವೇ!? ಕಾಲು ಎಷ್ಟು ಕೆಟ್ಟಿದೆ ಎಂಬುದನ್ನು ಸ್ವಲ್ಪ ಯೋಚಿಸುವಾ... ನಮಗಿಂತ ಒಂದು ತಲೆಮಾರು ಮೊದಲಿನವರನ್ನು ಯಾರನ್ನಾದರೂ ಕೇಳಿ ನಿಮಗೆಷ್ಟು ಸೋದರರು ಇದ್ದರು ಅಂತ ಅವರು ಹೇಳುವುದುಂಟು ನನಗೆ ಇಷ್ಟು ಜನ ಅಣ್ಣ ತಮ್ಮಂದಿರು ಅಕ್ಕತಂಗಿಯರಿದ್ದರು. ಬಾಲ್ಯದಲ್ಲಿ ಒಬ್ಬ... ತಂಗಿಯನ್ನು ತಮ್ಮನನ್ನು ಅಥವಾ ಅಣ್ಣನನ್ನು ಕಳೆದುಕೊಂಡೆವು ಎಂದು ಹೇಳುತ್ತಾರೆ. ಈಗ ಎಲ್ಲಿಯೋ ಒಂದು ಹೃದಯಾ ಘಾತದ ಸುದ್ದಿಯನ್ನು ಕೇಳಿದ ತಕ್ಷಣ ನಾವು ಹೇಳುತ್ತೇವೆ ಕಾಲಕೆಟ್ಟಿತು. ಜನ ಬೇಗ ಸಾಯುತ್ತಿದ್ದಾರೆ ಆದರೆ ಒಂದು ವೈಜ್ಞಾನಿಕ ಸರ್ವೇ ಪ್ರಕಾರ ಸಾವಿನ ಗಣತಿ ಗಮನೀಯವಾಗಿ ಕಡಿಮೆಯಾಗಿದೆ. ಹಾಗಾದರೆ ಈ ಸಾವುಗಳು ಏಕೆ ನಮ್ಮನ್ನು ಹೆಚ್ಚು ಭಯಭೀತಗೊಳಿಸುತ್ತವೆ...ಏಕೆಂದರೆ ಈಗ ಸಮೂಹ ಮಾಧ್ಯಮಗಳು ಹೆಚ್ಚು ಚುರುಕಾಗಿರುವುದರಿಂದ ಸಾವು ನೋವುಗಳ ಸುದ್ದಿ ಬೇಗ ಹರಡುತ್ತವೆ ..ಅದಲ್ಲದೆ ಎಲ್ಲಿಯೋ ಆದ ಘಟನೆಗಳು ಕೆಲವೇ ನಿಮಿಷಗಳ ಬಳಿಕ ಸಾಮಾಜಿಕ ಜಾಲತಾಣದಲಿ ಎಲ್ಲರನು ತಲುಪಿ ಚರ್ಚೆಗೆ ಆಸ್ಪದವಾಗುತ್ತವೆ. ಅಕಾಲಿಕ ಸಾವು ನೋವುಗಳು ಎಲ್ಲಾ ಕಾಲದಲ್ಲಿ ಇದ್ದವು. ಇನ್ನು ನಾವು ಒಂದು ಹಳೆಯ ತಲೆಮಾರುಗಳನ್ನ ಮಾತನಾಡಿಸಿದಾಗ ಅವರು ಅನ್ನದ ಬೆಲೆಯನ್ನು ತುಂಬಾ ಚೆಂದವಾಗಿ ಹೇಳುತ್ತಾರೆ. ಅಕ್ಕಿಯು ಕೂಡ ಸುಲಭವಾಗಿ ಸಿಗುತ್ತಿರಲಿಲ್ಲ.ತುಂಬಾ ಬಡತನ ಇರುತ್ತಿತ್ತು ಅನ್ನ ಉಣ್ಣುವದು ಸಾಧ್ಯವಿರುತ್ತರಲಿಲ್ಲ. ಗಂಜಿ ಊಟವನ್ನು ಮಾಡುತ್ತಿದ್ದರು.ಕೆಲವು ಹಿರಿಯರು ಹೇಳುತ್ತಾರೆ ನಾವು ತುಂಬಾ ಕಷ್ಟದ ದಿನಗಳನ್ನು ಕಂಡೆವು. ಒಂದೇ ಹೊತ್ತು ಊಟ ಮಾಡುತ್ತಿದ್ದೆವು.... ಎಂತಲೂ, ನಮಗೆ ಊಟಕ್ಕೆ ಹಾಕಿ ನಮ್ಮ ತಾಯಿ ಉಪವಾಸ ಮಲಗುತ್ತಿದ್ದಳು ಎಂದು. ಆದರೆ ಇಂದು ಯಾರಾದರೂ ಆಹಾರ ಇಲ್ಲದೆ ಉಪವಾಸ ಮಾಡುತ್ತಿದ್ದಾರೆಯಾ... ಸರಕಾರ ಎಷ್ಟೊಂದು ಅಕ್ಕಿ ಗೋಧಿ ರಾಗಿ ಜೋಳಗಳನ್ನ ಉಚಿತವಾಗಿ ವಿತರಿಸುತ್ತದೆ.

ಮನದ ಮಾತು...

ಕೋವಿಡ್ ನಂತಹ ವಿಷಮ ಪರಿಸ್ಥಿತಿಯಲ್ಲಿ ಕೂಡ ಸಾವಿರಾರು ಜನ ಅನ್ನ ಆಹಾರಗಳನ್ನು ಉಚಿತವಾಗಿ ವಿತರಿಸಿದರು. ಮೊದಲೆಲ್ಲ ಪ್ಲೇಗ ಮತ್ತು ಕಾಲರಾದಂತಹ ಕಾಯಿಲೆಗಳು ಬಂದರೆ ಈಡೀ ಊರಿಗೆ ಊರೇ ಬಲಿಯಾಗುತ್ತಿತ್ತು. ಈಗ ಅವುಗಳಿಗೆ ಲಸಿಕೆ ಚುಚ್ಚುಮದ್ದುಗಳನ್ನು ಕಂಡುಹಿಡಿದು ತಡೆಗಟ್ಟಲಾಗಿದೆ.ಪೋಲಿಯೋ ವಿಕಲಾಂಗ ಮಕ್ಕಳು ಮತ್ತು ಮಂದ ಬುದ್ಧಿಯ ಮಕ್ಕಳು ಬಹು ಸಂಖ್ಯೆಯಲ್ಲಿ ಇರುತ್ತಿದ್ದರು. ಆದರೆ ಪೋಲಿಯೋಲಸಿಕೆ ಕಾರ್ಯಕ್ರಮ ಮತ್ತು ಗರ್ಭದಲ್ಲಿಯೇ ಸ್ಕ್ಯಾನಿಂಗ್ ಗಳಂತಹ ಮಾದರಿಯಿಂದ ಮಕ್ಕಳ ದೈಹಿಕ ಸುರಕ್ಷತೆ ಕ್ರಮಗಳು ಹೆಚ್ಚಿವೆ.

ಹಾಗಾದರೆ ಮೊದಲಿನವರು ಏಕೆ 80, 90 ವರ್ಷಗಳ ಕಾಲ ಬದುಕುತ್ತಿದ್ದರು.ಈಗಿನವರು ಏಕೆ ಬೇಗ ಸಾಯುತ್ತಿದ್ದಾರೆ ಎಂಬುದು ಒಂದು ಪ್ರಶ್ನೆ. ಆಗ ರೋಗನಿರೋಧಕ ಶಕ್ತಿ ಕಡಿಮೆ ಇದ್ದವರು ಬಾಲ್ಯದಲ್ಲಿ ಸಾಯುತ್ತಿದ್ದರು ಆದರೆ ಈಗಿನ ಆಧುನಿಕ ವೈಜ್ಞಾನಿಕ ಕ್ರಮಗಳು ಅವರ ಬದುಕಿನ ಅವಧಿಯನ್ನು ಸ್ವಲ್ಪ ಮುಂದೂಡಿ ಹೆಚ್ಚು ಕಾಲ ಬದುಕುವಂತೆ ಕೂಡ ಮಾಡಿದೆ. ಹಾಗೆ ನೋಡಿದರೆ ಸಾವಿನ ಸಂಖ್ಯೆಯು ನೂರು ವರ್ಷಗಳ ಗಣತಿಯನ್ನು ಗಮನಿಸಿದಾಗ 45ರಿಂದ 7 ಕ್ಕೆ ಇಳಿದಿದೆ.ಇದಕ್ಕೆ ಕಾರಣ

- **ಲಸಿಕೆಗಳ ಬಳಕೆ**
- **ಶುದ್ಧ ಕುಡಿಯುವ ನೀರು**
- **ಉತ್ತಮ ಆಸ್ಪತ್ರೆಗಳು**
- **ತಾಯಿ?ಮಗು ಆರೋಗ್ಯ ಯೋಜನೆಗಳು.**
- **ಆಹಾರ ಮತ್ತು ಪೋಷಣೆಯ ಸುಧಾರಣೆಗಳು.**


ಮೊದಲಿನ ಕಾಲದಲ್ಲಿ ಓದುವ ಅವಕಾಶ ಎಲ್ಲರಿಗೂ ಸಿಗುತ್ತಿರಲಿಲ್ಲ. ವಾರಾನ್ನ ಮಾಡಿಕೊಂಡು ಬಳಗದವರ ಮನೆಯಲ್ಲಿ ಇದ್ದುಕೊಂಡು ಓದುತ್ತಿದ್ದರು. ಅದಲ್ಲದೆ ಎಷ್ಟೋ ಮಕ್ಕಳು ಶಾಲೆಯ ಫೀಸ್ ಗಳನ್ನು ತುಂಬಲಾಗದೆ ಶಾಲೆಯನ್ನ ಬಿಟ್ಟುಬಿಡುತ್ತಿದ್ದರು. ಆದರೆ ಈಗ ಮಕ್ಕಳಿಗೆ ಉಚಿತ ಶಿಕ್ಷಣ ಪುಸ್ತಕ ಸಮವಸ್ತ್ರ ಇದಲ್ಲದೆ ಉಚಿತ ಊಟವನ್ನು ಕೂಡ ಕೊಡುತ್ತದೆ ಸರ್ಕಾರ. ಹೀಗಾಗಿ ಹಲವು ಜನರಿಗೆ ಶಾಲೆಗೆ ಹೋಗಲು ಅವಕಾಶವಾಗಿದೆ.ಅನಕ್ಷರತೆಯಿಂದ ಸಾಕ್ಷರತಾ ಪ್ರಮಾಣ ಕೂಡ ಹೆಚ್ಚಿದೆ.

ಇನ್ನು ಕೆಲವು ಜೀವನದ ಮೌಲ್ಯಗಳನ್ನು ಗುರುತಿಸಿದಾಗ ಯಾರಿಗೋ ಕಾಯಿಲೆಗಳು ಬಂದಾಗ ಅಂತಹವರಿಗೆ ಸಾಮಾಜಿಕ ಜಾಲತಾಣಗಳಲಿ ಪ್ರಚಾರ ಮಾಡುವುದರ ಮೂಲಕ ದತ್ತಿಯಾಗಿ ಹಣವನ್ನು ಎತ್ತಿ ಕೊಡುವ ಹಲವು ಸಂಸ್ಥೆಗಳಿವೆ . ಇಂತಹ ಅನೇಕ ರೋಗಿಗಳಿಗೆ ಬಡವರಿಗೆ ಜನರು ಸಹಾಯ ಕೂಡ ಮಾಡುತ್ತಾರೆ.

ಮೊದಲೆಲ್ಲಾ ಆದರೆ ಪೂಜೆ ಮಾಡುವ ಅರ್ಚಕರಿಗೆ ಅತಿ ಕಡಿಮೆ ಪ್ರಮಾಣದ ದಕ್ಷಿಣೆಯನ್ನು ಕೊಡಲಾಗುತ್ತಿತ್ತು . ಅವರು ಸದಾ ಬಡತನದಲ್ಲಿಯೇ ಉಳಿಯುತ್ತಿದ್ದರು ಆದರೆ ಈಗ ಎಲ್ಲರೂ ತಮ್ಮ ಮನೆಯ ಪೂಜೆಗಳನ್ನು ವಾಸ್ತು ಶಾಂತಿಗಳನ್ನ ಅದ್ದೂರಿಯಾಗಿ ಮಾಡುತ್ತಾರೆ. ಅರ್ಚಕರಿಗೂ ಧಾರಾಳ ಮನಸ್ಸಿನಿಂದ ಕೊಡುತ್ತಾರೆ. ಬೆಳಗ್ಗೆ ನೋಡಬೇಕು ನೀವು , ದೇವರ ದರ್ಶನಕ್ಕಾಗಿ ಎಲ್ಲ ದೇವಸ್ಥಾನಗಳ ಮುಂದೆ ಸಾಲು ಸಾಲಾಗಿ ಜನರು ಪಾಳಿಯಲಿ ನಿಂತಿರುತ್ತಾರೆ.

ಹಾಗಿದ್ದರೂ ನಾವು ಸದಾ ಕಾಲ ಹೇಳುತ್ತೇವೆ ಧರ್ಮ ಉಳಿದಿಲ್ಲ ಎಂದು.

ಬಾಲ್ಯ ವಿವಾಹ ಮತ್ತು ಅನೇಕ ಪದ್ಧತಿಗಳು ಈಗ ನಿರ್ಮೂಲನೆ ಯಾಗಿವೆ. ವಿಧವಾ ಪುನರ್ ವಿವಾಹಕ್ಕೂ ಕೂಡ ಪ್ರೋತ್ಸಾಹವಿದೆ. ಮಹಿಳೆಯರಿಗೆ ಶಿಕ್ಷಣ ನೌಕರಿ ಹಲವು ರಂಗಗಳಲ್ಲಿ ಅವಕಾಶವಿದೆ.



| ಸಾಕ್ಷಿ

ಈ ಎಲ್ಲ ಅಂಶಗಳು ಸತ್ಯವಾಗಿದ್ದರೆ ಕಾಲ ಕೆಟ್ಟಿತು ಎಂಬ ಆಕ್ಷೇಪ ಬರುವುದಾದರೂ ಏಕೆ!?

ಹೌದು ಕಾಲ ಕೆಟ್ಟಿದೆ ಎಂಬುವುದು ಸುಳ್ಳು ಆದರೆ ಮನುಷ್ಯರ ಮನಸ್ಸು ನಿರ್ಮಲವಾಗಿ ಉಳಿದಿಲ್ಲ.

ಮೊದಲು ಮನುಷ್ಯ ತನ್ನ ಉಳಿವಿಗಾಗಿ ಹೋರಾಡುತ್ತಿದ್ದ. ಊಟ ವಸತಿ ಬಟ್ಟೆ ಇಷ್ಟು ಮನುಷ್ಯನ ಕನಿಷ್ಠ ಬೇಡಿಕೆಗಳಾಗಿದ್ದವು. ಅವು ಪೂರೈಸಿದಾಗ ನೆಮ್ಮದಿ ಎಂಬುವುದಿತ್ತು. ಆದರೆ ಈಗ ಹಾಗಿಲ್ಲ, ಎಲ್ಲವು ಇದ್ದರೂ ಇರಲಾರದ ವಸ್ತುವಿನ ಬಗ್ಗೆ ವಾಂಛೆ ಹೆಚ್ಚಾಗಿದೆ. ಸಂತಸ ಕಾಣುವುದಕ್ಕಿಂತ ವಿಷಾದ ಹುಡುಕುವುದೇ ಹೆಚ್ಚು. ಕಷ್ಟಗಳಿಗೆ ಮುಖ ಒಡ್ಡುವ ಆತ್ಮ ಬಲ ಕಡಿಮೆಯಾಗಿದೆ. ಮನುಷ್ಯ ಸಂಘ ಜೀವಿ ಜನರು ಸಂಖ್ಯೆಯಲ್ಲಿ ಹೆಚ್ಚಾಗುತ್ತಿದ್ದಾರೆ ಹೊರತು ಸ್ನೇಹಿತರಾಗಿ ಜೊತೆಗಾರರಿಲ್ಲದೆ ಮಾನಸಿಕವಾಗಿ ಒಂಟಿಯಾಗಿದ್ದಾರೆ.

ಸುಖ ಹಂಚಿಕೊಳ್ಳಲು ಕೂಡ ಸ್ನೇಹಿತರು ಬೇಕು. ಆದರೆ ಸ್ವಾರ್ಥದ ಸಂಕೋಲೆ ಹೆಚ್ಚಾದಂತೆ ಸುಖವ ಹಂಚಿ ಆನಂದಿಸುವ ಸಖ ಸಖಿಯರ ಕೊರತೆ.ಸುಖವ ಕಂಡು ಮನದಾಳದಿಂದ ಹಾರೈಸುವ ಸಂಗಾತಿಯು ಇಲ್ಲದಂತಾಗಿದೆ. ಮಾನಸಿಕವಾಗಿ ಒಂಟಿಯಾಗಿರುವುದರಿಂದ ಬಹಳಷ್ಟು ಜನರಿಗೆ ಮಾನಸಿಕ ಖಿನ್ನತೆ ಮತ್ತು ಏಕಾಂಗಿ ಭಾವದ ಕಾಯಿಲೆಗಳು. ಸೌಕರ್ಯ ಸುಖ ಹೆಚ್ಚಾದಂತೆ ದುಃಖ ಹುಡುಕುವ ಸ್ವಭಾವ ಕೂಡ ಹೆಚ್ಚಾಗಿದೆ.

ಸಾಮಾಜಿಕ ಜಾಲತಾಣಗಳ ಬಳಕೆ ಪ್ರಚುರವಾದಂತೆ ವೈಯಕ್ತಿಕ ಸಂಪರ್ಕಗಳು ಮತ್ತು ಸ್ನೇಹ ಸಂಬಂಧಗಳು ಕಳೆದುಕೊಂಡಿವೆ. ಯಾವುದೇ ಒಂದು ಸಾರ್ವಜನಿಕ ಸ್ಥಳಗಳಲ್ಲಿ ಎಲ್ಲರು ನಾವು ಮೊಬೈಲ್ಗಳಲ್ಲಿ ವ್ಯಸ್ತ ಇರೋದನ್ನ ಕಾಣಬಹುದು. ಕೆಲಸ ಮಾಡುವುದು ದುಡ್ಡು ಗಳಿಸುವುದು ಅದರಿಂದ ಖರೀದಿ ಮಾಡಿ ಹೆಚ್ಚಿನ ಸೌಕರ್ಯಗಳನ್ನು ಅನುಭವಿಸುವದು ಇದು ಮನುಷ್ಯನ ಜೀವನ ಉದ್ದೇಶವಾಗಿರುವುದರಿಂದ ಜೀವನ ಮೌಲ್ಯಗಳು ಕುಸಿಯುತ್ತಿವೆ.

ಮಕ್ಕಳಲ್ಲಿ ಆದರ್ಶವಾದ ಮತ್ತು ಸಿದ್ಧಾಂತಿಕ ಬೆಳವಣಿಗೆಯ ಬೌದ್ಧಿಕ ಮಟ್ಟವು ಕುಸಿಯುತ್ತಾ ಹೋಗಿ ಪುಸ್ತಕದ ತೌಲನಿಕ ಜ್ಞಾನ ಮತ್ತು ಅಂಕಪಟ್ಟಿಗಳಲ್ಲಿ ಮುಂಚೂಣಿಯಲ್ಲಿರುವದೇ ಹೆಚ್ಚಿನ ಯಶಸ್ಸು ಎಂಬ ಭಾವನೆ ಬರುತ್ತಿದೆ.

ಅತಿಯಾದ ಓದಿನ ಒತ್ತಡ ಮತ್ತು ಎಲ್ಲ ವಿಷಯಗಳಲ್ಲಿ ಮುಂಚೂಣಿಯಾಗಿರಬೇಕು ಎಂಬ ಮಾನಸಿಕ ತಾಪ ಮಕ್ಕಳ ಬಾಲ್ಯ ಮತ್ತು ಮೃದುತ್ವದ ಭಾವನೆಯನ್ನು ಕಸಿದುಕೊಂಡಿದೆ.

ಮುಖ್ಯವಾದ ಎರಡು ವಿಷಯಗಳಿಂದ ಮನುಷ್ಯ ಒಂಟಿ ಮತ್ತು ಅಸಮಾಧಾನಿ ಆಗಿರುವನು.ಸ್ವಾರ್ಥ ಮತ್ತು ತ್ಯಾಗದ ಕೊರತೆ. ಹೊಂದಾಣಿಕೆ ಮಾಡಿಕೊಳ್ಳುವ ಮನಸ್ಥಿತಿ ಇಲ್ಲ. ಯಾವುದಾದರೂ ಒಂದು ಒಳ್ಳೆಯ ಕೆಲಸವನ್ನು ಮಾಡಿದಾಗ ಅದು ಮಾನಸಿಕ ನೆಮ್ಮದಿಗೆ ಮಾಡಬೇಕು ಎಂಬುದಕಿಂತ ಜನಪ್ರಿಯವಾಗಬೇಕು ಎಂಬ ಪ್ರಚಾರದ ಬಯಕೆ ಹೆಚ್ಚಾಗುತ್ತಿದೆ.

ಹಲವು ಶಿಲ್ಪಿಗಳು ಹಲವು ಸುಂದರ ಕೆತ್ತನೆಯ ದೇವಸ್ಥಾನಗಳನು ಭಾರತದಲಿ ನಿರ್ಮಾಣ ಮಾಡಿದರು . ಆದರೆ ತಮ್ಮ ಹೆಸರು ಕೆತ್ತಬೇಕು ಎಂಬ ಅಪೇಕ್ಷೆ ಇಲ್ಲವೇ ಇಲ್ಲ. ಮಹಾ ಕವಿಗಳು ಕೂಡ ಕಾವ್ಯ ರಚನೆಗೆ ಹೆಚ್ಚುಒತ್ತು ಕೊಟ್ಟಿರುವರು ವಿನಹ ವಯಕ್ತಿಕ ಪ್ರಚಾರಕ್ಕೆ ಮನ್ನಣೆ ಇಲ್ಲ. ಈಗ ಇಂತಹ ಉದಾತ್ತ ವಿಚಾರಗಳು ಗಮನೀಯವಾಗಿ ಗೌಣವಾಗಿವೆ.

ದುಡ್ಡಿನ ಅಹಃಕಾರ ಮತ್ತು ವಿಷಯಗಳ ಲಾಲಸೆ ಹೆಚ್ಚಾಗಿದೆ. ಪ್ರತಿಯೊಂದು ವಿಷಯದಲ್ಲಿ ತಮ್ಮ ಬದುಕನ್ನು ಬೇರೆಯವರಿಗೆ ಹೋಲಿಸಿ ತಮಲ್ಲಿ ಇರದ ವಸ್ತು ವಿಷಯ ಪರರಲ್ಲಿ ಕಂಡು ಲಾಲಸೆ ಪಡುವ ವಿಷಮಭಾವದಿಂದ ಮನಸು ಸೋರುವ ಜೋಳಿಗೆ.

ಮೊದಲು ಸರಕಾರಿ ಶಾಲೆಗಳ ಗುರುಗಳು ಶಾಲೆಯ ಮಕ್ಕಳನ್ನು ತಮ್ಮ ಮಕ್ಕಳಂತೆ ಪ್ರೀತಿಸುತಿದ್ದರು. ಅವರ ಮನೆಗೆ ಹೋಗಿ ತಂದೆ ತಾಯಿಗಳ ಮನ ಒಲಿಸಿ ಮತ್ತೆ ಮಕ್ಕಳನ್ನು ಶಾಲೆಗೆ ಕರೆತರುತಿದ್ದರು. ಮನೆಗೆ ಕರೆಯಿಸಿ ಸ್ವಲ್ಪ ಓದಿನಲ್ಲಿ ಹಿಂದಿರುವ ಮಕ್ಕಳಿಗೆ ಹೆಚ್ಚಿನ ಪಾಠ ಮಾಡುತಿದ್ದರು. ಗುರುಗಳಿಗೂ ಅದೇ ಗೌರವವಿತ್ತು. ಆದರೆ ಈಗ ಈ ಭಾವದ ಅಭಾವ.

ಜೀವನದ ಮೌಲ್ಯಗಳಾದ, ಆಧ್ಯಾತ್ಮ, ಓದು, ಚಿಂತನೆ, ವೈಚಾರಿಕ ಆದರ್ಶ ಮತ್ತು ಮಾನಸಿಕ ಸಬಲೀಕರಣ ಕುಗ್ಗುತಿದೆ. ಭಕ್ತಿ ಮತ್ತು ಸಿದ್ಧಾಂತಗಳ ತೌಲನಿಕ ಮೌಲ್ಯಗಳು ಮತೀಯವಾಗಿ ವಿಭಜನೆ ಆಗುತಿವೆ.

ಸುಖ ಸೌಲಭ್ಯ ಹೆಚ್ಚಾದಂತೆ ಸಹನೆ ಮತ್ತು ಮಮಕಾರ ಕಾಣೆ ಆಗಿವೆ. ಮಕ್ಕಳ ಮತ್ತು ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ ಮತ್ತು ಶೋಷಣೆಯ ವಿರುದ್ಧ ಸೂಕ್ತ ರಕ್ಷಣೆ ಇಲ್ಲದಂತಾಗಿದೆ. ಸಾಮಾಜಿಕ ಜಾಲತಾಣಗಳು ಮನುಷ್ಯರ ಸಾಂಘಿಕ ಬದುಕಿಗೆ ಅಂತರ ತಂದಿವೆ. ಮದ್ಯಪಾನ, ಧೂಮಪಾನಗಳ ಬಳಿಕೆ ಹೆಚ್ಚಾಗಿದೆ. ಆಹಾರ ವಿಪುಲವಾಗಿದ್ದರೂ ಅದರ ಗುಣಮಟ್ಟ ಕುಸಿದಿದೆ. ಆಯುಷ್ಯ ರೇಖೆ ವ?ದ್ಯರ ಸಹಾಯದಿಂದ ಹಿಗ್ಗಿದರೂ ಬದುಕನ್ನು ಅನುಭವಿಸುವ, ಬದುಕುವ ಗುಣಮಟ್ಟ ಕುಗ್ಗಿದೆ. ಮಕ್ಕಳು ಗುಟಕಾ, ಡ್ರಗ್ಗಳಂತಹ ದುಷ್ಚಟಗಳಿಗೆ ಬಲಿ ಆಗುತ್ತಿದ್ದಾರೆ. ರಾಸಾಯನಿಕಗ ಬಳಿಕೆ ಹೆಚ್ಚಾಗಿದೆ, ಆಹಾರ ವಿಪುಲವಾಗಿದೆ ಶಕ್ತಿ ಕುಂದಿದೆ. ಪರಿಸರ ಮಾಲಿನ್ಯ ಹೆಚ್ಚಿದೆ. ಪ್ರತಿಯೊಂದು ಔದ್ಯೋಗಿರಕಣ ಮತ್ತು ಲಾಭದ ದೃಷ್ಟಿಯಿಂದ ಪಶು ಸಂಗೋಪನೆ ಮತ್ತು ಕೃಷಿ ಕಾಯಕಗಳು ರಾಸಾಯನೀಕರಣ ಹೆಚ್ಚಿದೆ.

ಹೀಗೆ ಕಾಲ ಎಂಬುದು ಕೆಟ್ಟಿದೆ ಎಂಬುದುಕಿಂತ ಜೀವನದ ಮೌಲೀಕರಣ ಮತ್ತು ಪ್ರಾಂಜಲತೆ ಹೆಚ್ಚಿಸಬೇಕಾಗಿದೆ. ಸೌಕರ್ಯಗಳಿಗಿಂತ ಬದುಕಿನ ಗುಣಮಟ್ಟ ಬದಲಾಗಬೇಕು. ಮಾನವೀಯತೆಗೆ ಪ್ರಾಧಾನ್ಯ ನೀಡುವ ಮನಸ್ಥಿತಿ ಅಭಿವೃದ್ಧಿ ಆಗಬೇಕು.

ನಿಮಗೆ ಯಾವುದು ಸತ್ಯ ಎನಿಸುವದು!?

**ಮತ್ತೊಂದು ಮನದ ಮಾತು ಮುಂದಿನವಾರ..**



# ಸಹಾಯವೂ ಒಂದು ಸಾಲವೇ!?

ಯಾರಿಂದಾದರೂ ದುಡ್ಡಿನಿಂದ ತೆಗೆದುಕೊಂಡ ಸಹಾಯ ಸಾಲವೆನಿಸುತ್ತದೆ ನಿಜ, ಆದರೆ ಒಮ್ಮೊಮ್ಮೆ ಬೇರೆ ಸಹಾಯವೂ ಸಾಲವೆಂಬ ಭಾವನೆ ಬರುವ ಸಾಧ್ಯತೆ ಇರುತ್ತದೆ!

ಒಂದೊಂದು ಬಾರಿ, ಅವರಿಂದ ನಾವು ಯಾವುದೇ ಸಹಾಯ ಪಡೆಯುವುದು ಬೇಡ ಮುಂದೆ ಒಂದು ಮಾತು ಕೇಳುವುದೂ ಬೇಡ ಎನ್ನುವ ಅಭಿಪ್ರಾಯ ನಮ್ಮಲ್ಲಿ ಬರುತ್ತದೆ ಅಲ್ಲವೇ, ಅದೇ ಮನಸ್ಸಿಗೆ ಸಾಲವಿದ್ದಂತೆ!



ಕಾರಣ ಸಹಾಯ ಮಾಡಿದವರ ಸ್ವಭಾವ ಇಲ್ಲಿ ಮುಖ್ಯವಾಗಿರುತ್ತದೆ! ಮೊದಲಿನಿಂದಲೂ ದುಡ್ಡಿನ ಗತ್ತು, ಅಹಂ ಇದ್ದವರು ಮಾಡಿದ ಸಹಾಯ ತೆಗೆದುಕೊಳ್ಳುವಾಗ ತುಂಬಾ ಎಚ್ಚರಿಕೆಯಿಂದ ಇರಬೇಕು! ಆ ಒಂದು ಸಹಾಯ ಮುಂದೊಂದು ದಿನ ನಮಗೆ ತಿಳಿಯದೇ ಅಪವಾದದ ಘಂಟೆಯಾಗಬಹುದು!

ಯಾರೇ ಆಗಲಿ ತಮ್ಮಂತೆ ನಾವು ಇರುವ ತನಕ ಒಂದು ರೀತಿಯಲ್ಲಿ ಇದ್ದರೆ, ಅವರು ಸ್ವಲ್ಪ ಆಚೆ, ಈಚೆ ತಮ್ಮನ್ನು ಬಿಟ್ಟು ಸರಿದಾಗ ಒಂದು ಮಾತು ಆಡುತ್ತಾರೆ!

ಈ ರೀತಿಯ ಜನರು ಬಂಧು ಬಳಗದಲ್ಲಿ, ಆತ್ಮೀಯ ಜನರಲ್ಲಿ ಬೇಕಾದಷ್ಟು ವ್ಯಕ್ತಿಗಳನ್ನು ಕಾಣುತ್ತೇವೆ!

ನಿಜ ಹೇಳಬೇಕೆಂದರೆ ಸಹಾಯ ಕೊಟ್ಟವರ ಸ್ವಭಾವ ಹೇಗೆ ಇರಲಿ ಸಹಾಯ ತೆಗೆದುಕೊಳ್ಳುವುದು ಅನಿವಾರ್ಯತೆ ಇದ್ದಾಗ ಮಾತ್ರ ಒಳ್ಳೆಯದು, ಏಕೆಂದರೆ ಸಹಾಯ ಎನ್ನುವುದು ಯಾವಾಗಲೂ ಸಾಲವಿದ್ದಂತೆ!



| ಸ್ನೇಹಾ ಆನಂದ್

ಹೀಗಾಗಿ ಒಂದು ಸಲ ಅವರ ಸಹಾಯದ ಅಗತ್ಯ ನಮಗೆ ಬಿದ್ದರೆ ಅದನ್ನು ತೀರಿಸುವ ತನಕ ನಮಗೆ ಸಮಾಧಾನ ಇರುವುದಿಲ್ಲ! ಹೀಗಾಗಿ ಸಹಾಯ ಎನ್ನುವುದು ಅನಿವಾರ್ಯತೆಗೆ ತೆಗೆದುಕೊಳ್ಳಬೇಕೇ ಹೊರತು ಎಂದೂ ಸ್ವಾರ್ಥದ ರೀತಿಯಲ್ಲಿ ಬಳಸಿಕೊಳ್ಳಬಾರದು!

ಸಹಾಯ ಮಾಡಿದವರ ಸ್ವಭಾವ ನಮಗೆ ಇಲ್ಲಿ ಅತಿ ಮುಖ್ಯವಾಗಿರುತ್ತದೆ, ಅವರು ಎಂಥವರು, ಅವರ ಗುಣ ಏನು, ಅವರ ಮಾತಿನ ಧಾಟಿ ಹೇಗಿದೆ, ಇದೆಲ್ಲವೂ ನಾವು ನೋಡಬೇಕಾಗುತ್ತದೆ!

ಒಂದು ವೇಳೆ ಅವರು ಮುಂದೊಂದು ದಿನ ನಮಗೆ ಹೀಯಾಳಿಸುವ ಸಾಧ್ಯತೆ ಸ್ವಲ್ಪವಾದರೂ ಇದೆ ಎಂದು ಅವರ ಗುಣ ಲಕ್ಷಣಗಳಲ್ಲಿ ನಮಗೆ ಕಂಡುಬಂದರೆ ಸಹಾಯಕ್ಕೆ ಪ್ರತಿ ಸಹಾಯ ಮಾಡಿ ಬಿಡಬೇಕು! ಆಗ ಮನಸ್ಸು ಹಗುರವಾಗಿ ನಾವು ಅವರ ಸಹಾಯದ ಸಾಲದಲ್ಲಿ ಬೀಳುವುದಿಲ್ಲ!

ಹಣದ ಸಹಾಯ ಮಾಡಿದವರ ಜೊತೆಗೆ ನಾವು ಯಾವುದೇ ರೀತಿಯಲ್ಲಿಯೂ ಅವರನ್ನು ಮತ್ತೆ ಮತ್ತೇ ಬಳಸಿಕೊಳ್ಳಬಾರದು! ಅದರಿಂದ ಜೀತದಾಳು ಎನ್ನುವ ಹಾಗೆ ನಮ್ಮನ್ನು ನೋಡುವ ಎಲ್ಲಾ ಸಾಧ್ಯತೆ ಇರುತ್ತದೆ!

ನಮ್ಮ ಜೀವನ ನಮ್ಮದು ಅಷ್ಟೇ! ಕುಟುಂಬ ದೊಡ್ಡದಾಗುತ್ತಾ ಬಂದಂತೆ ಪ್ರತಿಯೊಬ್ಬರ ವ್ಯಕ್ತಿತ್ವವೂ ಬೇರ್ಪಡುತ್ತಾ ಹೋಗುತ್ತದೆ!

ಸ್ನೇಹ ಲೋಕ

ಹೀಗಾಗಿ ನಮ್ಮ ಕೈಲಾದಷ್ಟು ಸಹಾಯ ನಾವು ಮನಸಿಟ್ಟು ಮಾಡಬೇಕು ಅದಕ್ಕೆ ಪ್ರತಿಫಲವಾಗಿ ಏನನ್ನೂ ಯಾರಿಂದಲೂ ನಿರೀಕ್ಷಿಸಬಾರದು!

ಗೆಳೆತನ, ಸಂಬಂಧಗಳು ತುಂಬಾ ನಾಜುಕು, ಮೇಲ್ನೋಟಕ್ಕೆ ಕಂಡಷ್ಟು ಒಳ ಮೈಯಲ್ಲಿ ಸರಳವಾಗಿರುವುದಿಲ್ಲ!

ಜೀವನದಲ್ಲಿ ಪ್ರತಿಯೊಬ್ಬ ಮನುಷ್ಯನಿಗೂ ಒಂದಲ್ಲ ಒಂದು ಸಹಾಯ ಬೇರೆಯವರಿಂದ, ಬೇಕೇ ಬೇಕು! ಅದು ಸಹಾಯಕ್ಕೆ ಮಾತ್ರ ಸೀಮಿತವಾಗಿರಬೇಕು ಹೊರತು ಸಾಲದಂತೆ ಮನಸ್ಸಿಗೆ ದುಬಾರಿಯಾಗಬಾರದು!

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from Mihir Akash K.R, #78, Daya Marga Near Geetha School, Siddartha Nagar Mysore-570011, Editor K.N Ravi,